ಶ್ರೀ ಎನ್. ಯೋಗೀಶ್ ಭಟ್:- ಭಾರತದ ಎಲ್ಲ ಭಾಷೆಗಳಲ್ಲಿಯೂ ಮಾತನಾಡಬಹುದಲ್ಲವೆ?

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಸದಸ್ಯರು ಅಲ್ಲಿ ನಿಂತು ಮಾತನಾಡುವ ಅಧಿಕಾರ ಇಲ್ಲವಲ್ಲ?

ಶ್ರೀ ಬಿ. ಶಿವರಾಮು (ಗಂಡಸಿ) ಕನ್ನಡ

ಶ್ರೀ ಬಾಲಚಂದ್ರ ಲಕ್ಷ್ಮಣರಾವ್ ಜಾರ್ಕಿಹೊಳಿ (ಅರಭಾವಿ) ಕನ್ನಡ

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೆ ನೂರಾರು ಜನರಿಗೆ ಸದಸ್ಯರು ಗ್ಯಾಲರಿಗೆ ಹೋಗಲು ಪಾಸ್‌ಗಳನ್ನು ಕೊಟ್ಟಿದ್ದಾರೆ. ಆದರೆ ಮಾರ್ಷಲ್ ಬಿಡುತ್ತಿಲ್ಲ. ಇದರಿಂದ ಗೊಂದಲವಾಗುತ್ತಿದೆ. ತಾವು ದಯವಿಟ್ಟು ಅವರಿಗೆ ನಿರ್ದೇಶನ ನೀಡಬೇಕು.

ಹಂಗಾಮಿ ಅಧ್ಯಕ್ಷರು:- ಗೌರವಾನ್ವಿತ ಸದಸ್ಯರು ಯಾರಿಗೆ ಪಾಸ್‌ಗಳನ್ನು ಕೊಟ್ಟಿದ್ದಾರೆ ಅವರನ್ನು ಗ್ಯಾಲರಿಗೆ ಬಿಡಲು ಹೇಳಿ.

12.00 ಪಿಎಂ

ಹಂಗಾಮಿ ಅಧ್ಯಕ್ಷರು:- ಸಭೆಯ ಮುಂದಿರುವ ಎರಡನೆಯ ವಿಷಯ ಏನೆಂದರೆ ಈ ಮನೆಯ ಗೌರವಾನ್ವಿತ ಅಧ್ಯಕ್ಷರ ಚುನಾವಣೆ. ಮಾನ್ಯ ಶ್ರೀ ಕೃಷ್ಣರವರನ್ನು ವಿಧಾನಸಭೆಯ ಅಧ್ಯಕ್ಷರನ್ನಾಗಿ ಚುನಾಯಿಸಬೇಕೆಂದು ಮಾನ್ಯ ಮುಖ್ಯಮಂತ್ರಿಯವರಾದ ಶ್ರೀ ಧರ್ಮಸಿಂಗ್ ರವರು ಸೂಚಿಸುವುದು ಹಾಗೂ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಅನುಮೋದಿಸುವುದು.

2. ಅಧ್ಯಕ್ಷರ ಚುನಾವಣೆ

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಯವರು):- ಸನ್ಮಾನ್ಯ ಸಭಾಧ್ಯಕ್ಷರೆ, ಈ ಸದನದ ಮಾನ್ಯ ಸದಸ್ಯರಾದ ಶ್ರೀ ಕೃಷ್ಣ ಅವರನ್ನು ಹನ್ನೆರಡನೆಯ ವಿಧಾನಸಭೆಯ ಅಧ್ಯಕ್ಷರನ್ನಾಗಿ ಚುನಾಯಿಸಬೇಕೆಂದು ನಾನು ಸೂಚಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ(ಜಲಸಂಪನ್ಮೂಲ ಸಾರಿಗೆ ಸಚಿವರು):- ಮಾನ್ಯ ಅಧ್ಯಕ್ಷರೆ, "ಮಾನ್ಯ ಮುಖ್ಯಮಂತ್ರಿಯವರು ಸೂಚಿಸಿರುವ ಈ ಪ್ರಸ್ತಾವವನ್ನು ನಾನು ಅನುಮೋದಿಸುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು

ಹಂಗಾಮಿ ಅಧ್ಯಕ್ಷರು:- ಮಾನ್ಯ ಮುಖ್ಯಮಂತ್ರಿಯವರಾದ ಧರ್ಮಸಿಂಗ್ ರವರು ಸೂಚಿಸಿರುವ ಹಾಗೂ ಮಾನ್ಯ ಜಲಸಂಪನ್ಮೂಲ ಸಾರಿಗೆ ಸಚಿವರಾದ ಮಲ್ಲಿಕಾರ್ಜುನ ಖರ್ಗೆಯವರು ಅನುಮೋದಿಸಿರುವ ಪ್ರಸ್ತಾವ ಈ ರೀತಿ ಇದೆ.

" ಶ್ರೀ ಕೃಷ್ಣರವರನ್ನು ಹನ್ನೆರಡನೆಯ ವಿಧಾನಸಭೆಯ ಅಧ್ಯಕ್ಷರನ್ನಾಗಿ ಚುನಾಯಿಸುವುದು." ಪ್ರಸ್ತಾವ ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು ಮತ್ತು ಶ್ರೀ ಕೃಷ್ಣ ಅವರನ್ನು ಅಧ್ಯಕ್ಷರನ್ನಾಗಿ ಚುನಾಯಿಸಲಾಯಿತು.

ಶ್ರೀ ಕೃಷ್ಣರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು

108-6 **+ಶ್ರೀ ಎನ್. ಧರ್ಮಸಿಂಗ್ (ಮುಖ್ಯ ಮಂತ್ರಿಗಳು):**- ಸನ್ಮಾನ್ಯ ಸಭಾಧ್ಯಕ್ಷರೆ, ಈ ದಿವಸ ಏನು ನೂತನ ಸದಸ್ಯರುಗಳು ಆರಿಸಿ ಬಂದಿದ್ದಾರೆ, ಅವರು ತಮ್ಮನ್ನು ಬಹಳ ಸಂತೋಷದಿಂದ

ಸರ್ವಸಮ್ಮತದ ಸ್ಪೀಕರ್ ಸ್ಥಾನದ ಅಭ್ಯರ್ಥಿಯಾಗಿ ಆಯ್ಕೆ ಮಾಡಿದ್ದಾರೆ. ನಾನೂ ಕೂಡ ಈ ಸದನದಲ್ಲಿ ಮೂವತ್ತ್ಮೂರು ವರ್ಷಗಳ ಕಾಲ ಶಾಸಕನಾಗಿ, ಮಂತ್ರಿಯಾಗಿ ಕೆಲಸ ಮಾಡಿದ್ದೇನೆ ಈ ಒಂದು ಸಭಾಧ್ಯಕ್ಷರ ಸ್ಥಾನಕ್ಕೆ ನಾಮಪತ್ರವನ್ನು ಸಲ್ಲಿಸುವ ಕಾಲದಲ್ಲಿ, ನಮ್ಮ ಸಂಸದೀಯ ವ್ಯವಹಾರಗಳ ಮಂತ್ರಿಗಳಾದ ಮಾನ್ಯ ಎಂ.ಪಿ. ಪ್ರಕಾಶ್‌ರವರು, ನಾನು ಮತ್ತು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ತಮ್ಮ ಹೆಸರನ್ನು ಸೂಚಿಸಿ, ಮಾನ್ಯ ಸಿದ್ಧರಾಮಯ್ಯ ಹಾಗೂ ಮಾನ್ಯ ಎಂ.ಪಿ. ಪ್ರಕಾಶರವರು ಅನುಮೋದಿಸಿದ ಮೇಲೆ ವಿರೋಧಪಕ್ಷದ ನಾಯಕರನ್ನು ಕೂಡ ಸಂಪರ್ಕಿಸಿದಾಗ ಅವರು ಯಾವಾಗ ತಮ್ಮ ಹೆಸರು ಬಂದ ಮೇಲೆ ಒಳ್ಳೆಯ ವ್ಯಕ್ತಿಯನ್ನು ತಾವು ಸಭಾಧ್ಯಕ್ಷರಾಗಿ ಆಯ್ಕೆ ಮಾಡುತ್ತಿದ್ದೀರಿ.. ನಮಗೆ ಯಾರಿಗೂ ಕೂಡ ಅಭ್ಯಂತರ ಇಲ್ಲ ಎನ್ನತಕ್ಕಂಥ ಮಾತು ಅವರ ಕಡೆಯಿಂದ ಬಂತು. ಇದನ್ನು ನಾನು ಸಭಾನಾಯಕನಾಗಿ ಹೇಳುತ್ತಿದ್ದೇನೆ. ಈ ದಿನ ಕರ್ನಾಟಕ ರಾಜ್ಯದಲ್ಲಿ ಸಮ್ಮಿಶ್ರ ಸರ್ಕಾರ ಅಧಿಕಾರಕ್ಕೆ ಬಂದಿದೆ. ಇಂತಹ ವಿಶೇಷವಾದ ಪರಿಸ್ಥಿತಿಯಲ್ಲಿ ಏನೊಂದು ರಾಜಕೀಯ ಬದಲಾವಣೆ ಕರ್ನಾಟಕ ರಾಜ್ಯದಲ್ಲಿ ಆಗಿದೆ, ಇಲ್ಲಿ ವಿರೋಧ ಪಕ್ಷದವರೂ ಕೂಡ ಬಹಳ ಹೆಚ್ಚಿನ ಸಂಖ್ಯೆಯಲ್ಲಿ ಆರಿಸಿ ಬಂದಿದ್ದಾರೆ. ಇದು ನಮ್ಮ ಮೇಲೆ ಮತ್ತು ಸದನದ ಎಲ್ಲಾ ಸದಸ್ಯರುಗಳ ಮೇಲೆ ಒಂದು ಹೆಚ್ಚಿನ ಜವಾಬ್ದಾರಿ ಇವತ್ತು ಬಂದಿದೆ. ಜನರ ನಿರೀಕ್ಷೆ ಮೇರೆಗೆ ಕೆಲಸ ಮಾಡತಕ್ಕ ರೀತಿಯಲ್ಲಿ, ಜನರ ಸಮಸ್ಯೆಗಳನ್ನು ಬಗೆ ಹರಿಸತಕ್ಕ ರೀತಿಯಲ್ಲಿ, ನಾವೇನು ಅದ್ಯತೆ ನೀಡುತ್ತೇವೆ ಅದರಲ್ಲಿ ನಮಗೆ ಪೂರ್ಣವಾದ ವಿಶ್ವಾಸ ಇದೆ. ಇವತ್ತು ಯಾವ ಮುಖ್ಯ ಸಮಸ್ಯೆಗಳಿಗೆ ಮಹತ್ವವನ್ನು ಕೊಡಬೇಕು? ಯಾವ ತರಹದ ವಿಚಾರ ಪ್ರಸ್ತಾಪ ಆಗಬೇಕು ಎಂಬ ಬಗ್ಗೆ ನಿರ್ಧಾರ ಕೈಗೊಳ್ಳಬೇಕಾಗಿದೆ ಮತ್ತು 12ನೇ ಅಧಿವೇಶನಕ್ಕೆ ಕರ್ನಾಟಕ ರಾಜ್ಯದಲ್ಲಿ ಇವತ್ತು ಸದಸ್ಯರುಗಳು ಚುನಾಯಿತರಾಗಿ ಬಂದಿದ್ದಾರೆ, ನನಗೆ ಭರವಸೆ ಇದೆ. ಇವತ್ತು ನಮ್ಮ ಸಮಿಶ್ರ ಸರ್ಕಾರದಲ್ಲಿ ಮಾನ್ಯ ಸಿದ್ಧರಾಮಯ್ಯನವರಾಗಲೀ, ವಿರೋಧ ಪಕ್ಷದ ನಾಯಕರಾದ ಮಾನ್ಯ ಯಡಿಯೂರಪ್ಪ ಎಲ್ಲರೂ ಕೂಡಿರುವುದು ಇವತ್ತು ನಮಗೆ ಸಂತೋಷ ಆಗಿದೆ. ನಮಗೆ ಆ ಭರವಸೆ ಕೂಡ ಇದೆ. ತಾವು ಬೆಂಗಳೂರು ನಗರದ ಚಾಮರಾಜಪೇಟೆಯಲ್ಲಿನ ಕಾರ್ಪೋರೇಷನ್ ಶಾಲೆಯ ಕನ್ನಡ ಮಾಧ್ಯಮದ ಶಿಕ್ಷಕರಾಗಿ ಕೆಲಸ ಮಾಡಿದವರು, ಕರ್ನಾಟಕದ ಉನ್ನತ ಸ್ಥಾನದಲ್ಲಿ ಬರತಕ್ಕ ರೀತಿಯಲ್ಲಿ ಇವತ್ತು ತಾವು ವಿಧಾನ ಸಭೆಯ ಅಧ್ಯಕ್ಷರಾಗಿ ಆಯ್ಕೆಯಾಗಿ ಬಂದಿದ್ದೀರಿ. ರಾಜ್ಯದ ರಾಜಕೀಯ ಜೀವನದಲ್ಲಿ ಕೂಡ ಸೋಲು ಮತ್ತು ಗೆಲುವಿನ ಮಧ್ಯದಲ್ಲಿ ಹೋರಾಟ ಮಾಡಿರತಕ್ಕಂಥ, ಸಂಘರ್ಷ ಮಾಡಿರತಕ್ಕಂಥ, ದಿವಂಗತ ಗೋಪಾಲ. ಗೌಡರ ನೇತೃತ್ವದಲ್ಲಿ ಕೂಡ ಹೋರಾಟ ಮಾಡಿರತಕ್ಕಂಥ ಒಂದು ಸಮಾಜವಾದದ ಹಿನ್ನೆಲೆಯ ಅ ಒಂದು ಭಾವನೆ ಕೂಡ ತಮಗೆ ಇದೆ ಎಂದು ನನ್ನ ಗಮನಕ್ಕೆ ಬಂದಿದೆ. ತಾವು ಬಹಳ ಸೌಮ್ಯವಾದ ವ್ಯಕ್ತಿ, ಎಲ್ಲರಿಗೂ ಬೇಕಾದಂತಹ ವ್ಯಕ್ತಿ. ಇಂತಹ ಒಂದು ಉನ್ನತ ಮಟ್ಟದ ವಿಧಾನಸಭೆಯ ಸಭಾಧ್ಯಕ್ಷರಾಗಿ ತಾವು ಆರಿಸಿ ಬಂದಿದ್ದೀರಿ. ನಮ್ಮೆಲ್ಲರ ಒಂದು ಭಾವನೆಗಳನ್ನು ಆರಿತು ವಿಶೇಷವಾದ ರಾಜಕೀಯ ಪರಿಸ್ಥಿತಿಯಲ್ಲಿ ನಮ್ಮೆಲ್ಲರನ್ನೂ ಕೂಡ ಒಟ್ಟಿಗೆ ತಾವು ತೆಗೆದುಕೊಂಡು ಹೋಗುತ್ತೀರಿ. ಮತ್ತು ಈ ಅಧಿವೇಶನ ಬಹಳ ಪರಿಣಾಮಕಾರಿಯಾಗಿ, ಜನರ ಸಮಸ್ಯೆಗಳಿಗೆ ಸ್ಪಂದಿಸತಕ್ಕಂಥ ಒಂದು ಅಧಿವೇಶನ ಆಗಿದೆ ಎನ್ನತಕ್ಕಂಥ, ಜನಾಭಿಪ್ರಾಯವನ್ನು ಮೂಡಿಸತಕ್ಕ ರೀತಿಯಲ್ಲಿ ತಾವು ಯಶಸ್ವಿ ಆಗುತ್ತೀರಿ ಎನ್ನತಕ್ಕ ಮಾತನ್ನು ಕೂಡ ಹೇಳುತ್ತಿದ್ದೇನೆ. ಈ

ಒಂದು ಕರ್ನಾಟಕದ ವಿಧಾನಸಭೆಗೆ ವಿಶೇಷವಾದಂತಹ ಪರಂಪರೆ ಇದೆ. ಮಾನ್ಯ ವೈಕುಂಠ ಬಾಳಿಗಾ ಅವರಿಂದ ಪ್ರಾರಂಭ ಆಗಿ ಮಾನ್ಯ ಕೆ.ಹೆಚ್. ರಂಗನಾಥ್ ಅವರಾಗಲೀ, ಡಿ.ಬಿ. ಚಂದ್ರೇಗೌಡರೇ ಆಗಲಿ ಮತ್ತು ರಮೇಶ್ ಕುಮಾರ್ ಅವರು ಪ್ರಸ್ತುತ ವಿಧಾನಸಭೆಯ ಸದಸ್ಯರು. ಅವರು ವಿಧಾನಸಭಾಧ್ಯಕ್ಷರಾಗಿದ್ದ ಸಂದರ್ಭದಲ್ಲಿ ಬಹಳ ಚೆನ್ನಾಗಿ ಸದನವನ್ನು ನಿಭಾಯಿಸಿದ್ದಾರೆ. ವಿಶೇಷವಾಗಿ ಈ ಸದನದಿಂದ ರಾಜ್ಯದ ಜನತೆಗೆ ಒಳ್ಳೆಯದಾಗತಕ್ಕ ರೀತಿಯಲ್ಲಿ ಪರಿಪೂರ್ಣವಾದಂತಹ ಜನರಿಗೆ ಸಂಬಂಧಪಟ್ಟಂತಹ ವಿಷಯಗಳ ಬಗ್ಗೆ ಚರ್ಚೆ ಆಗುತ್ತದೆ, ಮುಕ್ತ ಅವಕಾಶವನ್ನು ಕೊಡುತ್ತೀರಿ, ಗದ್ದಲ, ಗೊಂದಲ ಇರಲಾರದೆ, ನಾವು ವಿಶೇಷವಾದಂತಹ ರಾಜಕೀಯದ ಸಿದ್ಧಾಂತದ ಮೇಲೆ ಇವತ್ತು ಬಂದಿದ್ದೇವೆ, ಎಲ್ಲಾ ಪಕ್ಷದವರೂ ಕೂಡ ಸಿದ್ಧಾಂತದ ಮೇಲೆ ಬಂದಿದ್ದೀರಿ. ಅದಕ್ಕೆ ತಾವು ಅನುವು ಮಾಡಿಕೊಡುತ್ತೀರಿ ಎನ್ನತಕ್ಕಂಥ ಮಾತನ್ನು ಹೇಳಿ ಮತ್ತೊಮ್ಮೆ ತಮಗೆ ಶುಭವನ್ನು ಕೋರಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ):– ಮಾನ್ಯ ಅಧ್ಯಕ್ಷರೆ, ಅವಿರೋಧವಾಗಿ ವಿಧಾನಸಭೆಯ ಅಧ್ಯಕ್ಷರಾಗಿ ಆಯ್ಕೆ ಆದಂತಹ ಸನ್ಮಾನ್ಯ ಕೃಷ್ಣ ಅವರಿಗೆ ಪ್ರತಿಪಕ್ಷದ ಸದಸ್ಯರ ಪರವಾಗಿ ನಾನು ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಸನ್ಮಾನ್ಯ ಕೃಷ್ಣ ಅವರು ಶಿಕ್ಷಕರಾಗಿ ಜೀವನವನ್ನು ಪ್ರಾರಂಭ ಮಾಡಿದರು. ಬಿ.ಎ.ಬಿ.ಎಲ್. ಪದವೀಧರರು. ಸಚಿವರಾಗಿ ಅನುಭವ ಇರುವಂತಹ ವ್ಯಕ್ತಿ. ಲೋಕಸಭಾ ಸದಸ್ಯರಾಗಿ ಕೆಲಸ ಮಾಡಿದ ಅನುಭವ ಇದೆ. ಸರಳತೆ, ಸಜ್ಜನಿಕೆಗೆ ಮತ್ತೊಂದು ಹೆಸರು ಕೃಷ್ಣ ಅವರು ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ನನಗೂ ಅವರಿಗೂ ಎಲ್ಲಾ ರೀತಿಯಲ್ಲೂ ನಿಕಟವಾದಂತಹ ಸಂಬಂಧ. ಸನ್ಮಾನ್ಯ ಕೃಷ್ಣ ಅವರು ಮಂಡ್ಯ ಜಿಲ್ಲೆಯ ಕೆ.ಆರ್. ಪೇಟೆ ತಾಲ್ಲೂಕಿನವರು. ಅವರು ಆ ಉನ್ನತ ಸ್ಥಾನದಲ್ಲಿ ಕುಳಿತಿದ್ದಾರೆ. ನನಗೂ ಸಹ ಕೆ.ಆರ್. ಪೇಟೆಯ ಬೂಕನಕೆರೆ ಜನ್ಮ ಕೊಟ್ಟ ಸ್ಥಳ.

ಶ್ರೀ ವಾಟಾಳ್ ನಾಗರಾಜ್:– ಬೂಕನಕೆರೆ ಬಿಟ್ಟು ಹೆಚ್ಚು ಕಡಿಮೆ ಸುಮಾರು 48 ವರ್ಷ ಆಯಿತು, ಕೆ.ಆರ್. ಪೇಟೆಗೆ ಯಾವಾಗ ಹೋದಿರಿ?

ಶ್ರೀ ಬಿ.ಎಸ್. ಯಡಿಯೂರಪ್ಪ:– ನಮಗೆ ಜನ್ಮ ಕೊಟ್ಟಂತಹ ಊರನ್ನು ಮರೆಯುವುದಕ್ಕೆ ಆಗುತ್ತದಾ? ನಾನು ಏಕೆ ಆ ಮಾತನ್ನು ಹೇಳುತ್ತಿದ್ದೇನೆ ಎಂದರೆ ಬಹಳ ಹತ್ತಿರದಿಂದ ಅವರನ್ನು ನೋಡಿದ್ದೇವು. ಅವರು ಇವತ್ತು ಆ ಉನ್ನತವಾದಂತಹ ಒಂದು ಸ್ಥಾನದಲ್ಲಿ ಕುಳಿತಿದ್ದಾರೆ. ಸನ್ಮಾನ್ಯ ಪಾರ್ಲಿಮೆಂಟರಿ ಅಫೇರ್ಸ್ ಸಚಿವರಾದ ಪ್ರಕಾಶ್ ಅವರು ನನ್ನನ್ನು ಭೇಟಿ ಮಾಡಿದಂತಹ ಕಾಲದಲ್ಲಿ ಅವಿರೋಧವಾಗಿ ಅವರು ಆಯ್ಕೆ ಆಗಬೇಕು ಎಂದು ನಮ್ಮ ಅಪೇಕ್ಷೆ ಇತ್ತು. ವಿರೋಧಕ್ಕಾಗಿ ವಿರೋಧ ಮಾಡುವುದಾಗಿದ್ದಾರೆ ನಾವು ಯಾರನ್ನಾದರೂ ಅಭ್ಯರ್ಥಿ ಮಾಡಿ ಕಣಕ್ಕೆ ಇಳಿಸುತ್ತಿದ್ದೇವು. ಆದರೆ ನಮ್ಮ ಪ್ರತಿಪಕ್ಷದಲ್ಲಿರುವಂತಹ ದೊಡ್ಡ ಗುಣ ನಿಮಗೇಕೆ ಬರಲಿಲ್ಲ ಎಂದು ನನಗೆ ಗೊತ್ತಿಲ್ಲ. ಏಕೆಂದರೆ ಲೋಕಸಭೆಯಲ್ಲಿ ನಮ್ಮ ಕಣ್ಣು ಮುಂದೆ ಪ್ರತಿಪಕ್ಷಗಳಿಗೆ ಆದ್ಯತೆ ಕೊಟ್ಟಂತಹದು, ಅಲ್ಲಿ ಉಪಾಧ್ಯಕ್ಷ ಸ್ಥಾನವನ್ನು ಪ್ರತಿಪಕ್ಷಕ್ಕೆ ಕೊಟ್ಟಂತಹದು, ನಡೆದುಕೊಂಡು ಬಂದಂತಹ ಸಂಪ್ರದಾಯ. ಹಿಂದೆ ಇಲ್ಲಿ ಆಗಿತ್ತೋ ಇಲ್ಲವೋ ಗೊತ್ತಿಲ್ಲ. ಆದರೆ ಇವತ್ತು ವಿಶೇಷವಾದಂತಹ ಸಂದರ್ಭ ಇದೆ. ಈ ಕಡೆ 101 ಜನ ಸದಸ್ಯರು ನಾವಿದ್ದೇವೆ. ಬಹುಶಃ ಮಾನ್ಯ ವಾಟಾಳ್ ನಾಗರಾಜ್ ಅವರು ನಾನು

ಮಾತನಾಡುತ್ತಿದ್ದ ಕಾಲದಲ್ಲಿ 1967ರಲ್ಲಿ ಮಾನ್ಯ ವೈಕುಂಠ ಬಾಳಿಗಾ ಅವರು ಅಧ್ಯಕ್ಷರಾಗಿ ಅಲ್ಲಿ ಕುಳಿತಂತಹ ಕಾಲದಲ್ಲಿ ಅತಿರಥ ಮಹಾರಥರು ಈ ಭಾಗದಲ್ಲಿದ್ದರು. ಮಾನ್ಯ ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾಗಿದ್ದಂತಹ ಕಾಲವನ್ನು ಮಾನ್ಯ ವಾಟಾಳ್ ನಾಗರಾಜ್ ಅವರು ನೆನಪು ಮಾಡುತ್ತಿದ್ದರು. ಮಾನ್ಯ ಚನ್ನಬಸಪ್ಪನವರಂತಹ ಹಿರಿಯರು, ಸಿದ್ಧವೀರಪ್ಪನವರಂತಹ, ಮಾನ್ಯ ಎಂ.ಎಸ್. ಕೃಷ್ಣನ್ ಅಂತಹವರು; ವಾಟಾಳ್ ನಾಗರಾಜ್, ಶಾಂತವೇರಿ ಗೋಪಾಲ ಗೌಡರು, ಎಸ್. ಶಿವಪ್ಪನವರು, ಶ್ರೀಮತಿ ನಾಗರತ್ನಮ್ಮನವರು, ಮಾನ್ಯ ಎಸ್. ಬಂಗಾರಪ್ಪನವರು ಪ್ರತಿಪಕ್ಷದಲ್ಲಿ ಕುಳಿತಂಥ ಕಾಲದಲ್ಲಿ ಸುಮಾರು 97 ಜನ ಈ ಭಾಗದಲ್ಲಿದ್ದರು. ನಾನು ಸ್ವಾತಂತ್ರ್ಯವಾಗಿ ಆಯ್ಕೆ ಆಗಿ ಬಂದಂತಹ ಸದಸ್ಯರ ಪಟ್ಟಿಯನ್ನು ತೆಗೆದು ನೋಡಿದಾಗ ಈ ಬಾರಿ ಸ್ವಾತಂತ್ರ್ಯ ನಂತರ ಮೊದಲ ಬಾರಿಗೆ 101 ಜನ ವಿರೋಧ ಪಕ್ಷದಲ್ಲಿ ಕುಳಿತಿದ್ದೇವೆ. ಒಂದು ರೀತಿ ನಮ್ಮ ಜೆಡಿಎಸ್‌ನ ಸ್ನೇಹಿತರು ಕೂಡು ವಿರೋಧ ಪಕ್ಷದಲ್ಲಿ ಆಯ್ಕೆ ಆಗಿ ಬಂದಂಥವರು. ಅಂದಿನ ಆಡಳಿತದ ವಿರುದ್ಧ, ಹೋರಾಟ ಮಾಡಿ ಆಯ್ಕೆ ಆಗಿ ಬಂದವರು. ಅಂದರೆ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಹಿಂದೆ ಎಂದೂ ಕಾಣದ ನಿರ್ಣಯವನ್ನು ಜನರು ಕೊಟ್ಟಂತಹ ಈ ಸಂದರ್ಭದಲ್ಲಿ ನಾನು ಅಧ್ಯಕ್ಷರಿಗೆ ಇಷ್ಟೇ ಹೇಳುತ್ತೇನೆ. ನಾವೇ ಮಾಡಿಕೊಂಡಿರುವಂತಹ ಈ ಕಾನೂನು ಚೌಕಟ್ಟಿನಲ್ಲಿ ಸರಿಯಾದ ರೀತಿಯಲ್ಲಿ ಕಾರ್ಯಕಲಾಪ ನಡೆಯುವುದಕ್ಕೆ, ಪ್ರತಿಪಕ್ಷದಲ್ಲಿ ಎಲ್ಲಾ ರೀತಿಯ ಸಹಕಾರವನ್ನು ನಾವು ಕೊಡುತ್ತೇವೆ. ಕ್ಲಿಷ್ಟಕರವಾದಂತಹ ಸಮಸ್ಯೆಗಳು ಬಂದಂತಹ ಕಾಲದಲ್ಲಿ ಹಿಂದೆ ಅಧ್ಯಕ್ಷ ಸ್ಥಾನದಲ್ಲಿ ಕುಳಿತಂತಹ ಅವರು ಅನುಭವದಿಂದ ಮಾಡಿದಂತಹ ತೀರ್ಮಗಳು ನಮ್ಮ ಮುಂದೆ ಇದ್ದಾವೆ. ಅದರ ಆಧಾರದ ಮೇಲೆ ತಾವು ತೀರ್ಮನ್ನು ತೆಗೆದುಕೊಳ್ಳುತ್ತೀರಿ ಎಂಬ ವಿಶ್ವಾಸ ನನಗೆ ಇದೆ. ಆದರೆ ನೀವು ಆ ಕಡೆಗೆ ಹೆಚ್ಚು ನೋಡದೇ ಈ ಕಡೆಗೆ ನೋಡಬೇಕು. ಏಕೆಂದರೆ ಪ್ರಜಾತಂತ್ರ ವ್ಯವಸ್ಥೆಯಲ್ಲಿ. ಆಡಳಿತ ಪಕ್ಷಕ್ಕಿಂತ ಬಹಳ ದೊಡ್ಡ ಜವಾಬ್ದಾರಿ ವಿರೋಧ ಪಕ್ಷಕ್ಕೆ ಇದೆ. ನಾವು ಇಲ್ಲಿ ಹೊಗಳುವುದಕ್ಕೆ ಕುಳಿತಿಲ್ಲ. ತಪ್ಪಾದಾಗ ಸರಿಪಡಿಸಿ. ಈ ನಾಡಿನ ಐದೂಕಾಲು ಕೋಟಿ ಜನ ನೆಮ್ಮದಿಯಿಂದ ಬದುಕುವುದಕ್ಕೆ ಬೇಕಾದಂತಹ ಜವಾಬ್ದಾರಿಯನ್ನು ನಿರ್ವಹಿಸುವುದಕ್ಕೋಸ್ಕರ ಪ್ರತಿಪಕ್ಷದಲ್ಲಿ ನಾವು ಕುಳಿತಿರುವಂತಹ ಕಾಲದಲ್ಲಿ ನಾವು ಮಾಡುವಂತಹ ಟೀಕೆ ಟಿಪ್ಪಣಿಗಳು, ಅದಕ್ಕೆ ಸರಿಯಾದ ರೀತಿಯಲ್ಲಿ ಸಹಕಾರ, ಹೊಸದಾಗಿ ಬಹಳ ಜನ ಯುವಕರು ಆಯ್ಕೆ ಆಗಿ ಬಂದವರಿಗೆ ಆದ್ಯತೆ, ಇದೆಲ್ಲವನ್ನೂ ಕೊಡುವಂತಹ ಪ್ರಯತ್ನ ತಾವು ಮಾಡಿದರೆ ಬಹುಶಃ ನಮ್ಮ ಕಾರ್ಯಕಲಾಪ ಸುಗಮವಾಗಿ ನಡೆಯಬಹುದು. ಬಹಳ ದೊಡ್ಡ ಜವಾಬ್ದಾರಿ ನಮ್ಮ ಮೇಲೆ ಇದೆ. ನಾಡಿನ ಜನ ಬರಗಾಲಕ್ಕೆ ಸಿಕ್ಕಿ ಎಲ್ಲರೂ ಸಂಕಷ್ಟದಲ್ಲಿ ಸಿಕ್ಕಿರುವಂತಹ ಸಂದರ್ಭದಲ್ಲಿ ನಾವೆಲ್ಲಾ ಆಯ್ಕೆ ಆಗಿ ಬಂದಿದ್ದೇವೆ. ನಾವೆಲ್ಲಾ ಜನರ ತೀರ್ಪಿನ ಪ್ರಕಾರ ಯಾರು ಎಲ್ಲಿ ಬೇಕಾದರೂ ಕುಳಿತಿರಬಹುದು.

12.30 ಪಿಎಂ

ಅಂದರೆ, ಸುಸೂತ್ರವಾಗಿ ಕಾರ್ಯಕಲಾಪ ಜರುಗಿ ಜನರ ಸಮಸ್ಯೆಗಳಿಗೆ ಪರಿಹಾರ ಹುಡುಕುವ ಒಂದು ದೊಡ್ಡ ಜವಾಬ್ದಾರಿ ತಮ್ಮ ಮೇಲಿರುವಂಥ ಸಂದರ್ಭದಲ್ಲಿ ನಾವು ನಿಮಗೆ ಎಲ್ಲಾ ರೀತಿಯ ಸಹಕಾರ ನೀಡಲು ಸಿದ್ದರಿದ್ದೇವೆ. ಆ ನಿಟ್ಟಿನಲ್ಲಿ ಸದನದ ಕಲಾಪ ನಡೆಸಿಕೊಂಡು ಹೋಗೋಣವೆಂದು ಹೇಳಬಯಸುತ್ತೇನೆ. ಮತ್ತೊಂದು ವಿಚಾರ, ಆಡಳಿತ ಪಕ್ಷದ ನಮ್ಮ ಸ್ನೇಹಿತರಿಗೆ ಕಿವಿಮಾತು ಹೇಳುವುದೇನೆಂದರೆ, ಪ್ರಜಾತಂತ್ರ ವ್ಯವಸ್ಥೆಯಲ್ಲಿ ಯಾರು ಇತ್ತ ಕಡೆ (ವಿರೋಧ ಪಕ್ಷ)

ಕುಳಿತುಕೊಳ್ಳುತ್ತಾರೋ, ಯಾರು ಅತ್ತ ಕಡೆ (ಆಡಳಿತ ಪಕ್ಷ) ಕುಳಿತುಕೊಳ್ಳುತ್ತಾರೋ ನಮಗೆ ಗೊತ್ತಿಲ್ಲ. ಇದನ್ನು ತೀರ್ಮಾನಿಸುವವರು ಈ ನಾಡಿನ ಮಾಲೀಕರು. ಈ ಬಾರಿ ತನ್ನದೇ ಆದ ವಿಶೇಷ ತೀರ್ಪನ್ನು ಆತ ಕೊಟ್ಟಿದ್ದಾನೆ. ಈ ಸಮಯದಲ್ಲಾದರೂ ಲೋಕಸಭೆಯಲ್ಲಿ ಏನು ಸತ್ಸಂಪ್ರದಾಯ ನಡೆದುಕೊಂಡು ಬಂದಿದೆ. ನಮ್ಮ ಪಕ್ಷಕ್ಕೆ ಉಪಾಧ್ಯಕ್ಷ ಸ್ಥಾನ ಸಿಗಬೇಕೆಂಬ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿಲ್ಲ. ಆದರೆ, ಮಾನ್ಯ ಧರ್ಮಸಿಂಗ್ ಅವರಂತಹ ಅನುಭವಿಗಳು, ಈ ರಾಜ್ಯದ ಮುಖ್ಯಮಂತ್ರಿಗಳಾಗಿರುವಂತಹ ಕಾಲದಲ್ಲಿ ಮತ್ತು ಪ್ರತಿಪಕ್ಷದಲ್ಲಿ ಹಾಗು ಆಡಳಿತ ಪಕ್ಷದಲ್ಲಿ ಕುಳಿತಿರುವಂತಹ ನಮ್ಮ ಸ್ನೇಹಿತರುಗಳು ಒಂದು ಸತ್ಸಂಪ್ರದಾಯ ಹಾಕಿಕೊಟ್ಟರೆ ಒಳ್ಳೆಯದಾಗ ಬಹುದೆಂಬ ಸಲಹೆಯನ್ನು ಈ ಸಂದರ್ಭದಲ್ಲಿ ಕೊಡುತ್ತಾ ತಾವು ಈ ಬಗ್ಗೆ ಯೋಚನೆ ಮಾಡಬೇಕೆಂದು ಹೇಳಬಯಸುತ್ತೇನೆ. ಹೊಸದಾಗಿ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಸನ್ಮಾನ್ಯ ಕೃಷ್ಣರವರಿಗೆ ಪ್ರತಿಪಕ್ಷದ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುವ ಮೂಲಕ ತಾವು ಯಶಸ್ವಿ ರೀತಿಯಲ್ಲಿ ಕೆಲಸ ನಿರ್ವಹಿಸುವುದಕ್ಕೆ ನಾವು ಎಲ್ಲಾ ರೀತಿಯ ಸಹಕಾರ ಕೊಡುತ್ತೇವೆಂದು ಭರವಸೆ ನೀಡಿ ಮತ್ತೊಮ್ಮೆ ತಮಗೆ ಶುಭ ಕೋರಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು):- ಸನ್ಮಾನ್ಯ ಅಧ್ಯಕ್ಷರೆ, ಇವೊತ್ತು ಇಡೀ ಸದನದ ಎಲ್ಲಾ ಸದಸ್ಯರೂ ಕೂಡ ಸರ್ವಾನುಮತದಿಂದ ಆಯ್ಕೆ ಮಾಡಿ ಅಧ್ಯಕ್ಷ ಸ್ಥಾನಕ್ಕೆ ತಮ್ಮನ್ನು ಕೂರಿಸಿದ್ದಾವಿ. ನಿಮಗೆ ನನ್ನ ಮತ್ತು ನಮ್ಮ ಎಲ್ಲಾ ಸ್ನೇಹಿತರ ಪರವಾಗಿ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಜೊತೆಗೆ ವಿರೋಧ ಪಕ್ಷದ ಎಲ್ಲಾ ಮಾನ್ಯ ಸದಸ್ಯರು ಮತ್ತು ಇತರ ಎಲ್ಲಾ ಮಾನ್ಯ ಸದಸ್ಯರುಗಳು ಸರ್ವಾನುಮತದಿಂದ ನಿಮ್ಮನ್ನು ಆಯ್ಕೆ ಮಾಡಲು ಸಹಕಾರ ಕೊಟ್ಟಿರುವುದಕ್ಕೆ ಎಲ್ಲರಿಗೂ ಧನ್ಯವಾದಗಳನ್ನು ತಿಳಿಸುತ್ತಿದ್ದೇನೆ. ಇವೊತ್ತು ಒಂದು ವಿಶೇಷವಾದ ಸನ್ನಿವೇಶದಲ್ಲಿ ನೀವು ಈ ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದೀರಿ. ಈ ಸ್ಥಾನಕ್ಕೆ ತನ್ನದೇ ಆದ ಒಂದು ಭವ್ಯ ಪರಂಪರೆ ಇದೆ. ನಾವು ಈ ಸ್ಥಾನದ ಇತಿಹಾಸ ಗಮನಿಸಿದಾಗ ದಿವಂಗತ ವೈಕುಂಠ ಬಾಳಿಗ ಅವರಿಂದ ಹಿಡಿದು ಇಲ್ಲಿಯವರೆಗೆ ಅನೇಕ ಸಭಾಧ್ಯಕ್ಷರುಗಳು ಈ ಸದನವನ್ನು ಉತ್ತಮ ರೀತಿಯಲ್ಲಿ ನಡೆಸಿಕೊಂಡು ಬಂದಿರುವ ನಿದರ್ಶನಗಳಿವೆ. ಒಳ್ಳೆಯ ಸತ್ಸಂಪ್ರದಾಯ, ಮೌಲ್ಯಗಳನ್ನು ಎತ್ತಿಹಿಡಿಯತಕ್ಕಂಥ ಅನೇಕ ನಿದರ್ಶನಗಳನ್ನು ನಾವು ಕಾಣುತ್ತೇವೆ. ಬಹುಶಃ ಕೂಡ ಅವರ ಮಟ್ಟಕ್ಕೆ ನಿಲ್ಲುತ್ತೀರೆಂಬ ನಂಬಿಕೆ, ವಿಶ್ವಾಸ ನನಗಿದೆ. ತಾವು ಈ ಸದನದಲ್ಲಿ ಸದಸ್ಯರಾಗಿ ಮತ್ತು ಲೋಕಸಭಾ ಸದಸ್ಯರಾಗಿಯೂ ಕೆಲಸ ಮಾಡಿದ್ದೀರಿ. ಜೊತೆಗೆ ಉಪಾಧ್ಯಾಯರಾಗಿ, ವಕೀಲರಾಗಿ ಕೆಲಸ ಮಾಡಿ ಬಹಳಷ್ಟು ಅನುಭವಗಳನ್ನು ಪಡೆದುಕೊಂಡಿದ್ದೀರೆಂಬುದು ನನ್ನ ಭಾವನೆ. ಮತ್ತು ನಿಮ್ಮನ್ನು ಬಹಳಷ್ಟು ಹತ್ತಿರದಿಂದ ನೋಡಿರುವುದರಿಂದ ನಿಮ್ಮನ್ನು ಅರ್ಥ ಮಾಡಿಕೊಂಡಿದ್ದೇನೆ. ನಿಮ್ಮೊಂದಿಗೆ ವಕೀಲನಾಗಿ ಕೆಲಸ ಮಾಡುವ ಅವಕಾಶ ಸಿಕ್ಕಿತ್ತು. ಅನಂತರ, ಒಂದೇ ಪಕ್ಷದಲ್ಲಿ ಕೆಲಸ ಮಾಡತಕ್ಕ ಅವಕಾಶಗಳು ಬಹಳ ವರ್ಷಗಳಿಂದ ಲಭಿಸಿದೆ. ಬಹುಶಃ ಈ ಸ್ಥಾನಕ್ಕೆ ಬೇಕಾದಂತಹ ಎಲ್ಲಾ ಅರ್ಹತೆಗಳೂ ತಮಗಿದೆಯೆಂದು ನಾನು ಭಾವಿಸಿಕೊಳ್ಳುತ್ತೇನೆ. ಬಹಳ ಕಡಿಮೆ ಮಾತನಾಡುವ ಸ್ವಭಾವ, ಬಹಳ ಮೃದು ಭಾವನೆ ಹೊಂದಿರುವ ಸ್ವಭಾವ, ಸರಳ, ಸಜ್ಜನಿಕೆ ಇರುವ ಸ್ವಭಾವ, ಮತ್ತು ಕೆಲವು ಸಂದರ್ಭಗಳಲ್ಲಿ ಅಷ್ಟೇ ನಿಷ್ಠೂರ ನಿಲುವು ತಾಳುವ ಸ್ವಭಾವ ತಮ್ಮದೆಂದು ನಾನು ಅರ್ಥ

ಮಾಡಿಕೊಂಡಿದ್ದೇನೆ. ಆದರೆ, ಇಂತಹ ನಿಲುವುಗಳನ್ನು ಈ ಸ್ಥಾನದಿಂದ ನೀವು ಪ್ರದರ್ಶಿಸಬೇಕಾದಂತಹ ಅನೇಕ ಸನ್ನಿವೇಶ, ಸಂದರ್ಭಗಳು ಬರಬಹುದು. ಸದನದ ಸಭಾಧ್ಯಕ್ಷರಾದಂಥವರು ಕಡಿಮೆ ಮಾತನಾಡಿ, ವಿರೋಧ ಪಕ್ಷದವರು, ಟ್ರೆಜರಿ ಬೆಂಚ್‌ನಲ್ಲಿರುವ ಮುಖ್ಯಮಂತ್ರಿಗಳು, ಮಂತ್ರಿಗಳು ಮತ್ತು ಸದಸ್ಯರುಗಳು ವ್ಯಕ್ತಪಡಿಸುವ ಮಾತುಗಳ ಬಗ್ಗೆ ಅನೇಕ ಕ್ಲಿಷ್ಟ ಸನ್ನಿವೇಶಗಳು ಬಂದೊದಗಿದಾಗ ಚಾಕಚಕ್ಯತೆಯಿಂದ ಅದನ್ನು ಬಗೆಹರಿಸುವ ಶಕ್ತಿ ನಿಮಗಿದೆಯೆಂದು ನಾನು ಭಾವಿಸಿಕೊಂಡಿದ್ದೇನೆ. ಬಹಳ ವರ್ಷಗಳ ಕಾಲದಿಂದಲೂ ಜನ ಸಾಮಾನ್ಯರೊಂದಿಗೆ ನಿಮ್ಮ ಒಡನಾಟ ಇರುವುದರಿಂದ ಮತ್ತು ಜನ ಸಾಮಾನ್ಯರ ನಡುವೆ ನೀವು ಬೆಳೆದು ಬಂದಿರುವುದರಿಂದ ಬಡವರ, ರೈತರ, ಸಾಮಾನ್ಯ ಜನರ ಬವಣೆ-ಬದುಕನ್ನು ಬಹಳ ಚೆನ್ನಾಗಿ ತಿಳಿದಿದ್ದೀರಿ. ಇಂತಹ ಅನೇಕ ಸಮಸ್ಯೆಗಳನ್ನು ಈ ಸದನದಲ್ಲಿ ಚರ್ಚೆ ಮಾಡಬೇಕಾಗುತ್ತದೆ ಮತ್ತು ಅದಕ್ಕೆ ಪರಿಹಾರವನ್ನೂ ಒದಗಿಸಿಕೊಡಬೇಕಾಗುತ್ತದೆ. ವಿರೋಧ ಪಕ್ಷದವರ ಸಹಕಾರ ಮತ್ತು ನಾವು ತೆಗೆದುಕೊಳ್ಳುವ ನಿರ್ಣಯಗಳು, ಇವೆಲ್ಲವನ್ನೂ ಜನರ ದೃಷ್ಟಿಯಿಂದ ಮಾಡಬೇಕಾದಂತಹ ಸನ್ನಿವೇಶಗಳಲ್ಲಿ ನೀವು ಒಳ್ಳೆಯ ಮಾರ್ಗದರ್ಶನ ಕೊಡುತ್ತೀರೆಂಬ ಬಲವಾದ ನಂಬಿಕೆ ನನಗಿದೆ. ಅನೇಕ ವರ್ಷಗಳಿಂದ ಇಲ್ಲಿ ಏನು ಸತ್ಸಂಪ್ರದಾಯಗಳು ನಡೆದು ಪರಂಪರೆಗಳು ಬೆಳೆದು ಬಂದಿದೆ, ಅದನ್ನು ಇನ್ನೂ ಹೆಚ್ಚು ಶ್ರೀಮಂತಗೊಳಿಸುವ, ಸಮೃದ್ಧಗೊಳಿಸುವ ಪ್ರಯತ್ನ ನಿಮ್ಮಿಂದಾಗುತ್ತದೆಂಬ ಭಾವನೆಯನ್ನು ಸರ್ಕಾರದ ವತಿಯಿಂದ ವ್ಯಕ್ತಪಡಿಸುವ ಮೂಲಕ, ಈ ಸಲ ರಾಜ್ಯದ ರಾಜಕಾರಣದಲ್ಲಿ ವಿಶೇಷ ಸನ್ನಿವೇಶವುಂಟಾಗಿದ್ದು, ರಾಜ್ಯದ ಜನತೆ ವಿಶೇಷ ತೀರ್ಪು ನೀಡಿದ್ದಾರೆ. ಯಾವುದೇ ಪಕ್ಷಕ್ಕೂ ಜನರು ಬಹುಮತ ಕೊಟ್ಟಿಲ್ಲ. ಯಾವುದೇ ಒಂದು ಪಕ್ಷಕ್ಕೆ ಸರ್ಕಾರ ರಚನೆ ಮಾಡುವುದಕ್ಕೆ ಜನರು ತೀರ್ಪು ಕೊಡಲಿಲ್ಲ, ಹಾಗಾಗಿ, ಸಮ್ಮಿಶ್ರ ಸರ್ಕಾರ ಮಾಡಬೇಕಾದಂತಹ ಅನಿವಾರ್ಯ ಪರಿಸ್ಥಿತಿ ಈ ರಾಜ್ಯದಲ್ಲಿ ನಿರ್ಮಾಣವಾಯಿತು. ಆ ಕಾರಣದಿಂದ ಕಾಂಗ್ರೆಸ್‌ನವರು ಮತ್ತು ನಾವೂ (ಜನತಾ ದಳ (ಜಾತ್ಯಾತೀತ) ಸೇರಿಕೊಂಡು ಸಮ್ಮಿಶ್ರ ಸರ್ಕಾರ ರಚಿಸುವ ಮೂಲಕ ಜನರ ಆಶೋತ್ತರಗಳು, ಸಮಸ್ಯೆಗಳೇನಿವೆ, ಅವುಗಳಿಗೆ ಪರಿಹಾರ ಕೊಡುವ ವಿಶೇಷವಾಗಿ ರೈತರ, ಬಡವರ ಸಮಸ್ಯೆಗಳೇನಿವೆ, ಅದಕ್ಕೆ ಪರಿಹಾರ ಒದಗಿಸಿಕೊಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ. ಆ ಪ್ರಯತ್ನದಲ್ಲಿ ವಿರೋಧ ಪಕ್ಷದವರ ಸಹಕಾರ ಮತ್ತು ನಿಮ್ಮ ಮಾರ್ಗದರ್ಶನವನ್ನು ನಾವು ಬೇಡುತ್ತೇವೆಂಬ ಮಾತನ್ನು ಹೇಳುತ್ತಾ ನಿಮಗೆ ಮತ್ತೊಮ್ಮೆ ನಾನು ಅಭಿನಂದನೆಗಳನ್ನು ಸಲ್ಲಿಸಿ, ಶುಭ ಕೋರಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಸನ್ಮಾನ್ಯ ಅಧ್ಯಕ್ಷರೆ, ತಮ್ಮನ್ನು ಸರ್ವಾನುಮತದಿಂದ ಆಯ್ಕೆ ಮಾಡುವುದರ ಮೂಲಕ ಇಡೀ ಸದನವೇ ತಮಗೆ ಮತ್ತು ಇಡೀ ಸದನಕ್ಕೆ ಒಂದು ದೊಡ್ಡ ಗೌರವ ಸಲ್ಲಿಸಿದಂತಾಗಿದೆ. ಈ ಸದನದ ಘನತೆ ಎತ್ತಿಹಿಡಿಯುವಂತಹ ಸಂಪ್ರದಾಯ ಬಹಳ ಕಾಲದಿಂದಲೂ ಕರ್ನಾಟಕ ರಾಜ್ಯದಲ್ಲಿದೆ. ನಮ್ಮೆಲ್ಲಾ ಮಾನ್ಯ ಸದಸ್ಯರುಗಳು ಅತ್ಯಂತ ಜವಾಬ್ದಾರಿಯುತವಾಗಿ ತಮ್ಮನ್ನು, ಯಾವುದೇ ತರಹದ ವಿವಾದಕ್ಕೊಳಗಾಗದ ರೀತಿಯಲ್ಲಿ, ಮತ್ತೊಬ್ಬ ಪ್ರತಿಸ್ಪರ್ಧಿಯನ್ನು ನಿಲ್ಲಿಸದ ರೀತಿಯಲ್ಲಿ ಸತ್ಸಂಪ್ರದಾಯಕ್ಕನುಗುಣವಾದ ರೀತಿಯಲ್ಲಿ ಸರ್ವಾನುಮತದಿಂದ ತಮ್ಮನ್ನು ಆಯ್ಕೆ

ಮಾಡಿರುವಂಥಾದ್ದು ತಮ್ಮ ಘನತೆಯನ್ನು ಹೆಚ್ಚು ಮಾಡುವುದರ ಜೊತೆಗೆ ಜವಾಬ್ದಾರಿಯನ್ನೂ ಕೂಡ ಹೆಚ್ಚು ಮಾಡಿದೆ. ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಹಾಗೂ ವಿರೋಧ ಪಕ್ಷದ ನಾಯಕರು ಅಭಿವ್ಯಕ್ತಿಸಿದಂತೆ ವಿಶೇಷ ಸಂದರ್ಭದಲ್ಲಿ ಸರ್ಕಾರದ ರಚನೆಯಾಗಿದೆ ಮತ್ತು ಬಹು ಸಂಖ್ಯೆಯಲ್ಲಿ ವಿರೋಧ ಪಕ್ಷದ ಪ್ರಜಾಪ್ರತಿನಿಧಿಗಳು ಆಯ್ಕೆಯಾಗಿ ಬಂದಿದ್ದಾರೆ.

ಆ ಕಾರಣದಿಂದ ಮುಂಬರುವ ದಿನಮಾನಗಳಲ್ಲಿ ಹೆಚ್ಚು ಭಾವನಾತ್ಮಕವಾದಂಥ, ಭಾವೋದ್ರೇಕವಾದಂಥ ಘಟನಾವಳಿಗಳು ನೆರವೇರುವ ಅಥವಾ ನಡೆಯುವ ಸಂಭವಗಳು ಇರುತ್ತದೆ. ಆ ಸಂದರ್ಭದಲ್ಲಿ ತಾವು ಹೆಚ್ಚು ತಾಳ್ಮೆಯಿಂದ ಹೆಚ್ಚು ಚತುರತೆಯಿಂದ, ತಮಗೆ ಈಗಾಗಲೇ ಗೊತ್ತಿದ್ದಂತೆ ಒಂದು ಸ್ಥೂಲವಾದ ಅರ್ಥದಲ್ಲಿ ತಾವು ಈ ಸದನದ ಮುಖ್ಯ ಉಪಾಧ್ಯಾಯರಿದ್ದಂತೆ. ತಾವು ಈಗಾಗಲೇ ಶಿಕ್ಷಕ ವೃತ್ತಿಯನ್ನು ಮಾಡಿದಂಥವರಾಗಿದ್ದೀರಿ. ಶಿಕ್ಷಕರಿಗೆ ಬೇಕಾಗಿರುವಂಥ ತಾಳ್ಮೆ ಮತ್ತು ಪ್ರೀತಿ ಅದರ ಜೊತೆಗೆ ಕಠಿಣತೆ ಇವುಗಳನ್ನು ಮೈಗೂಡಿಸಿಗೊಳ್ಳಬೇಕಾದಂಥ ಸಂದರ್ಭ ಇರುವಾಗ, ತಾವು ಆಗಲೇ ಹಿಂದೆ ತಮ್ಮ ಪ್ರಾರಂಭಿಕ ಜೀವನದಲ್ಲಿ ನಡೆಸಿದಂಥ ರೀತಿಯಲ್ಲೇ ಈ ಸದನದಲ್ಲಿ ಅಂಥ ಘಟನೆಗಳು ಬಂದಂಥ ಸಂದರ್ಭದಲ್ಲಿ ತಾಳ್ಮೆಯಿಂದ ಪ್ರತಿ ಸದಸ್ಯರನ್ನು ಪ್ರೀತಿಸುವುದರ ಮೂಲಕ ಅವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವುದರ ಮೂಲಕ ತಾವು ಅಂಥ ಸಂಕಷ್ಟ ಪರಿಸ್ಥಿತಿಯನ್ನು ಈ ಸದನದ ನಿಯಮಾವಳಿಗಳು ಮತ್ತು ರಾಜ್ಯಾಂಗದ ವಿಧಿವಿಧಾನಗಳಿಗೆ ಅನುಗುಣವಾದಂಥ ರೀತಿಯಲ್ಲಿ ಕಾರ್ಯವನ್ನು ನಿರ್ವಹಿಸುತ್ತೀರಿ ಎಂಬ ಸಂಪೂರ್ಣವಾದ ಜವಾಬ್ದಾರಿ ಪ್ರತಿಯೊಬ್ಬ ಸದಸ್ಯರಿಗೆ ಇರುವುದರಿಂದ ನಿಮ್ಮನ್ನು ನಾವು ಸರ್ವಾನುಮತದಿಂದ ಆಯ್ಕೆ ಮಾಡಿದ್ದೇವೆ. ಈ ಸಂದರ್ಭದಲ್ಲಿ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಉಪ ಮುಖ್ಯಮಂತ್ರಿಗಳು ಹಾಗೂ ಹಿರಿಯರಾದ ಖರ್ಗೆಯವರು ಈ ವಿಚಾರದಲ್ಲಿ ತಮಗೆ ಪ್ರಸ್ತಾವನೆಯನ್ನು ಮತ್ತು ಅನುಮೋದನಾ ಸೂಚನೆಯನ್ನು ಕೊಟ್ಟಾಗ, ನಾನು ವಿರೋಧ ಪಕ್ಷದ ನಾಯಕರನ್ನು ಈ ವಿಚಾರದಲ್ಲಿ ವಿಶ್ವಾಸಕ್ಕೆ ತೆಗೆದುಕೊಂಡು ಮಾತನಾಡಿದಾಗ ಅವರೂ ಕೂಡ ಸಹಕರಿಸುತ್ತೇವೆ ಎಂಬ ದೊಡ್ಡ ಭರವಸೆಯನ್ನು ಕೊಟ್ಟಿದ್ದಕ್ಕಾಗಿ ನಾನು ಅವರನ್ನು ಈ ಸದನದಲ್ಲಿ ಅಭಿನಂದಿಸುತ್ತೇನೆ ಮತ್ತು ಎಲ್ಲಾ ನಮ್ಮ ಸದಸ್ಯರನ್ನು ಅಭಿನಂದಿಸುತ್ತೇನೆ. ಮಾನ್ಯ ಅಧ್ಯಕ್ಷರೇ, ತಮ್ಮ ವೈಯಕ್ತಿಕವಾದಂಥ ಸರಳ ಗುಣದ ಬಗ್ಗೆ ಸಜ್ಜನಿಕೆಯ ಬಗ್ಗೆ ನಮಗೆಲ್ಲ ತಿಳಿದಂಥ ವಿಚಾರವೇ ಆಗಿದೆ. ರಾಜಕಾರಣದಲ್ಲಿ ಸಜ್ಜನರಾಗಿರುವಂಥದ್ದು ಸರಳವಾಗಿರುವಂಥದ್ದು, ಬಹಳ ಕ್ವಚಿತ್‌ವಾದಂಥ ಈ ದಿನಮಾನಗಳಲ್ಲಿ ಸಾರ್ವಜನಿಕ ಬದುಕಿನ ಸಂಕೋಚವನ್ನು ಇಟ್ಟುಕೊಂಡಿರುವ ನೀವು ನಮಗೆ ಆದರ್ಶವೆಂದು ಭಾವಿಸಿಕೊಂಡಿದ್ದೇನೆ. ಮುಂದೆ ಬೀಳುವ ನೂಕುನುಗ್ಗಲಿನಲ್ಲಿ ಬರುವ ಪ್ರಚಾರ ಪ್ರಿಯತೆಯನ್ನು ಹೆಚ್ಚಿಸಿಕೊಳ್ಳುವುದೇ ಒಬ್ಬ ರಾಜಕಾರಣಿಯ ವ್ಯಕ್ತಿತ್ವದ ಒಂದು ಮುಖವೆಂದು ಭಾವಿಸುವಂಥ ಈ ದಿನಮಾನಗಳಲ್ಲಿ ಹಿಂದೆ ಉಳಿಯುವ ಸಂಕೋಚಕ್ಕೆ ಒಳಪಡುವ ಮೆತ್ತು ಸಮಾಧಾನದಿಂದ ವರ್ತಿಸುವಂಥ ನಿಮ್ಮ ಈ ಗುಣ ನಮಗೆ ನಿಜವಾಗಿಯೂ ಕೂಡ ಅಪೇಕ್ಷಣೀಯ ಮತ್ತು ಅದು ಮಾದರಿ ಎಂದು ಭಾವಿಸಿಕೊಂಡಿದ್ದೇನೆ. ಪ್ರಜಾಪ್ರಭುತ್ವ ಎನ್ನುವಂಥದ್ದು ಒಂದು ದಾರಿದೀಪ. ಅದು ಸುರಕ್ಷಿತವಾಗದಂಥ ಹಡಗು ಬಂದರಲ್ಲ. ಆ ಕಾರಣಕ್ಕಾಗಿ ನಾವು ಬಯಸುವಂಥ ಸ್ವಾತಂತ್ರ್ಯ ಏನಿದೆ ಈ ಸ್ವಾತಂತ್ರ್ಯ ನಿರಂತರವಾಗಿ

ಪ್ರಯತ್ನಿಸುವಂಥ ಒಂದು ಪ್ರಕ್ರಿಯೆ. It is an eternal endurance freedeom ಅನ್ನುವಂಥದ್ದು ಏನಿದೆ ಆ ಸ್ವಾತಂತ್ರ್ಯ ಎನ್ನುವಂಥದ್ದು ಅದೇ ಯಾವಾಗಲೂ ಸುರಕ್ಷಿತವಾದಂಥ ಸ್ಥಳವಾಗಲು ಸಾಧ್ಯವಿಲ್ಲ. ಆದರೆ ತಮಗೆಲ್ಲಾ ಗೊತ್ತಿದ್ದಂತೆ The speaker is one who does not speak ಯಾರು ಸ್ಪೀಕರ್ ಆಗಿ ಮಾತನಾಡುವಂಥವರಿರುತ್ತಾರೆ ಅವರು ಮಾತನಾಡದೇ ಇರುವುದೇ ಸರ್ವ ಶ್ರೇಷ್ಠ, ಮಾತುಗಳಿಗಿಂತ ಮೌನ ಹೆಚ್ಚು ಅಪೇಕ್ಷಣೀಯ ಎನ್ನುವಂಥ ಮಾತು ಕೂಡ ಇದೆ. ಇದಕ್ಕೆ ಒಂಧು ಸತ್‌ಸಂಪ್ರದಾಯಗಳ ಜೊತೆಗೆ ಇಂಗ್ಲೆಂಡನ್ನು ನಾವು ಯಾವಾಗಲೂ ಕೂಡ ಈ ಸಂಸದೀಯ ನಡವಳಿಕೆಯ ಪ್ರಜಾಪ್ರಭುತ್ವದ ಮಾತೃ ದೇಶವೆಂದು ನಾವು ಭಾವಿಸಿಕೊಳ್ಳುತ್ತೇವೆ. ಆ ಮಾತೃ ದೇಶದಲ್ಲಿ ಒಂದು ಸತ್‌ಸಂಪ್ರದಾಯವಿದೆ. ಅಲ್ಲಿ ಸಂವಿಧಾನ ಇಲ್ಲ. ಆದರೆ ಸಂಪ್ರದಾಯಗಳ ನಡವಳಿಕೆಗಳ ಮೂಲಕ ಅವರು ಕೆಲಸವನ್ನು ಮಾಡುತ್ತಾರೆ. ಆ ಸಂದರ್ಭದ ನಂತರ ಪ್ರತಿ ವರ್ಷವೂ ಕೂಡ ಅಧಿವೇಶನ ಪ್ರಾರಂಭವಾಗುವಾಗ ಚಕ್ರವರ್ತಿ ಅಥವಾ ರಾಣಿ ಈ ಸದನಕ್ಕೆ ಒಳಗಡೆ ಬರುವಾಗ ಬಾಗಿಲನ್ನು ಮುಚ್ಚಿಸುತ್ತಾರೆ. ಬಾಗಿಲನ್ನು ಮುಚ್ಚಿಸಿದಾಗ ಆ ಚಕ್ರವರ್ತಿ ಅಥವಾ ರಾಣಿ ಮೂರು ಬಾರಿ ಆ ಬಾಗಿಲನ್ನು ತಟುತ್ತಾ May I come in ಎಂದು ಕೇಳುತ್ತಾರೆ. ನಾನು ಒಳಗಡೆಗೆ ಬರಬಹುದೇ ಎಂದು ಕೇಳುತ್ತಾರೆ. ಆಗ ತಾವು ಬರಬಹುದು You may come in ಎಂದು ಹೇಳಿದ ಮೇಲೆ ಅವರು ಪ್ರವೇಶ ಮಾಡುತ್ತಾರೆ. ಅಂದರೆ Long live the king, king is dead ಎನ್ನುವಂಥ ರೀತಿಯಲ್ಲಿ ಪ್ರಜಾಪ್ರಭುತ್ವದ ಈ ಸದನದ ವ್ಯಾಪ್ತಿಯಲ್ಲಿ ತಾವು ಸರ್ವ ಶ್ರೇಷ್ಠರು. ಈ ಶಾಸಕಾಂಗ ಎನ್ನುವಂಥದ್ದು ಏನಿದೆ ಇದು ಅತ್ಯಂತ ಮುಖ್ಯವಾದಂಥ ಸಂವಿಧಾನ ಕೊಟ್ಟಿರುವಂಥ ಸ್ವತಂತ್ರ್ಯ ನಿರ್ವಹಣೆಗಳನ್ನು ಮಾಡಿಕೊಂಡು ಹೋಗುವಂಥ ಒಂದು ಅಂಗ. ನಮ್ಮೆಲ್ಲರ ರಕ್ಷಣೆಯನ್ನು, ಹಕ್ಕುಬಾಧ್ಯತೆಗಳನ್ನು ಈ ಕಾನೂನಿನ ಪರಿವಿಡಿಗಳಲ್ಲಿ ಬರುವಂಥ ರೀತಿಯನ್ನು ಕಾಪಾಡಿಕೊಂಡು ಹೋಗುವಂಥದ್ದು ನಿಮ್ಮ ಗುರುತರವಾದಂಥ ಜವಾಬ್ದಾರಿ ಯಾಗಿರುತ್ತದೆ. ಆ ಸಂದರ್ಭದಲ್ಲೇ ಕನ್‌ಫ್ಯೂಸಿಯಸ್ ಹೇಳುವಂಥ ಮಾತು ಬಹಳ ಮುಖ್ಯವಾಗಿರುವಂಥ ಮಾತು. ಆದು ತಮಗೆ ಗೊತ್ತಿಲ್ಲವೆಂದು ನಾನು ಭಾವಿಸಿಕೊಂಡಿಲ್ಲ. ಆದರೆ ಮತ್ತೆ ತಮ್ಮ ಗಮನಕ್ಕೆ ತರುವ ಪ್ರಯತ್ನ ಮಾಡುತ್ತೇನೆ. "Try to hear much and put aside what is doubtful while you speak cautiously of the rest. Then few will blame you. Try to see much and put aside what seems perilous while you are cautions in carrying the rest into practice. Then you will have few occasions for regret". ಆದ್ದರಿಂದ ಇಲ್ಲಿ ನಡೆಯುವಂಥ ನಡವಳಿಕೆಗಳನ್ನು ನೋಡಿದಾಗ ಇಲ್ಲಿ ಮಾತನಾಡುವಂಥ ಮಾತುಗಳನ್ನು ತಾವು ಕೇಳಿದಾಗ ತಾವು ಅತ್ಯಂತ ಜಾಗೃತವಾಗಿ ಅದಕ್ಕೆ ಪ್ರತಿಕ್ರಿಯೆಯನ್ನು ವ್ಯಕ್ತಮಾಡಿದಾಗ ಉಳಿದ ಎಲ್ಲಾ ಜನಗಳು ತಮ್ಮ ಜೊತೆಗೆ ಬರುತ್ತಾರೆ. ತಾವೇನು ಆಜ್ಞೆಯನ್ನು ಕೊಡುತ್ತೀರಿ ಅದರ ಪ್ರಕಾರವಾಗಿ ನಾವು ನಡೆದುಕೊಂಡು ಹೋಗತಕ್ಕದ್ದೇನಿದೆ, ಪ್ರಜಾಪ್ರಭುತ್ವದ ಮುಖ್ಯವಾದಂಥ ಧ್ಯೇಯ ಅದೊಂದು ಆಜನ್ಮಸಿದ್ಧವಾದಂಥ ಹಕ್ಕು ಪ್ರತಿರೋಧ ಮಾಡುವಂಥ ಅಭಿಪ್ರಾಯಕ್ಕೆ ವಿರುದ್ಧವಾದ ಬಿನ್ನಾಭಿಪ್ರಾಯವನ್ನು ವ್ಯಕ್ತಮಾಡುವಂಥದ್ದು, ಅದಕ್ಕೆ ಪಾಲ್ಕಿವಾಲರಂಥ ಒಬ್ಬ ರಾಜ್ಯಾಂಗ ತಜ್ಞರು ಮಾತನಾಡುವಂಥ ಮಾತು "The fundamental

obligations of an ideal Indian citizen has been the duty to descend." ನಾವು ಜನಗಳಿಗೇ ಅಂಥ ಹಕ್ಕನ್ನು ಕೊಟ್ಟಾಗ ಜನಪ್ರತಿನಿಧಿಗಳಾಗಿ ಬಂದಿರತಕ್ಕಂಥ 224 ಸದಸ್ಯರು they have a right to descend. ಆದ್ದರಿಂದ ಅವರು ಪ್ರತಿರೋಧ ವ್ಯಕ್ತ ಮಾಡಿದ್ದಾರೆ. ಭಿನ್ನಾಭಿಪ್ರಾಯವನ್ನು ವ್ಯಕ್ತ ಮಾಡಿದ್ದಾರೆ ಎನ್ನುವುದರೊಳಗೆ ನಾವು ಕುಪಿತಗೊಳ್ಳುವುದಾಗಲೀ ಅಥವಾ ಅದು ಅಸಮಂಜಸವೆಂದು ಭಾವಿಸಿಕೊಳ್ಳುವುದಾಗಲೀ ಅದು ಪ್ರಜಾಪ್ರಭುತ್ವದ ವ್ಯವಸ್ಥೆಗೆ ಸರಿಯಾದುದಲ್ಲ ಎಂಬು ಮಾತು ಇರುವುದರಿಂದ ಅವರನ್ನೆಲ್ಲಾ ತಾವು ಜೊತೆಜೊತೆಗೆ ಕರೆದುಕೊಂಡು ಹೋಗುವಂಥ ಮುಖ್ಯವಾದಂಥ ಜವಾಬ್ದಾರಿ ತಮ್ಮ ಮೇಲಿದೆ. ಅಂಥ ದೊಡ್ಡ ಶಕ್ತಿ ತಮಗೆ ಇದೆ. ನಾವೂ ಕೂಡ ಅತ್ಯಂತ ಕಾನೂನಿಗೆ ಅನುಗುಣವಾದಂಥ ರೀತಿಯಲ್ಲಿ ನಮ್ಮ ನಿಯಮಾವಳಿಗಳೇನಿದೆ ಆ ನಿಯಮಾವಳಿಗಳ ರೀತಿಯಲ್ಲಿ ನಾವು ಕೆಲಸವನ್ನು ನಿರ್ವಹಿಸಬೇಕು. ಅದು ಬಹಳ ಮುಖ್ಯವಾಗಿರುವಂಥ ಮಾತು. ಈ ಸಂದರ್ಭದಲ್ಲಿ ವಾಟಾಳ್ ನಾಗರಾಜ್ ರವರಿಗೆ ಹೇಳುವುದಾದರೆ ಮಾನ್ಯ ರಮೇಶ್ ಕುಮಾರ್‌ರವರು ಆ ಸ್ಥಾನದಲ್ಲಿ ಕೂತಾಗ, ಮಾನ್ಯ ಧರ್ಮಸಿಂಗ್‌ರವರು ಕುಳಿತಂಥ ಸ್ಥಾನದಲ್ಲಿ ದಿವಂಗತ ಜೆ.ಹೆಚ್. ಪಟೇಲ್‌ರವರು ಇದ್ದರು. ಬಹಳ ಉದ್ವೇಗದಲ್ಲಿ ಮಾನ್ಯ ಯಡಿಯೂರಪ್ಪನವರು ಆಗ ವಿರೋಧ ಪಕ್ಷದ ನಾಯಕರಾಗಿ ಮಾತನಾಡಿದಂಥ ಸಂದರ್ಭದಲ್ಲಿ "ಮಾನ್ಯ ವಿರೋಧ ಪಕ್ಷದ ನಾಯಕರೇ, ನಿಮ್ಮ ಹೃದಯವನ್ನು ಬಿಸಿಯಾಗಿಟ್ಟುಕೊಳ್ಳಿ, ತಲೆಯನ್ನು ತಂಪಾಗಿ ಇಟ್ಟುಕೊಳ್ಳಿ" ಎನ್ನುವಂಥ ಮಾತನ್ನು ಹೇಳಿದರು. ಅಂದರೆ ನಾವು ಉದ್ವೇಗಕ್ಕೆ ಒಳಗಾಗದೆ ತಲೆಯನ್ನು ತಂಪಾಗಿ ಇಟ್ಟುಕೊಂಡು ಹೃದಯವನ್ನು ಬಿಸಿಯಾಗಿ ಇಟ್ಟುಕೊಂಡು ಬಹಳ ಪ್ರೀತಿಯಿಂದ ನಮ್ಮ ವರ್ತನೆಗಳು ನಡೆದರೆ ಪ್ರಾಯಶಃ ನಿಮ್ಮ ಕೆಲಸ ಹೆಚ್ಚಾಗಿ ಹಗುರವಾಗುತ್ತದೆ ಎನ್ನುವಂಥ ಮಾತು ಇದೆ. ಈ ಸದನ ಕರ್ನಾಟಕ ರಾಜ್ಯದಲ್ಲಿ ಯಾವಾಗಲೂ ಸತ್‌ಸಂಪ್ರದಾಯವನ್ನು ಕಾಪಾಡಿಕೊಂಡು ಬಂದಿರುತಂಥದ್ದು, ಆ ಸತ್‌ಸಂಪ್ರದಾಯಕ್ಕೆ ನಾವೆಲ್ಲರೂ ಸಹಕರಿಸಿದಾಗ ನಿಮ್ಮ ಆ ಸ್ಥಾನಕ್ಕೆ ಘನತೆ ಬರುತ್ತದೆ. ಈ ಸದನಕ್ಕೆ ಘನತೆ ಬರುತ್ತದೆ. ಆ ರೀತಿ ನಾವು ನಡೆದುಕೊಳ್ಳುತ್ತೇವೆ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ ತಮಗೆ ಶುಭವಾಗಲಿ, ಒಳ್ಳೆಯ ರೀತಿಯ ಮಾರ್ಗದರ್ಶನವಾಗಲಿ ಭಾರತ ದೇಶದಲ್ಲಿ ಉತ್ತಮ ನಡವಳಿಕೆಗಳಿಗೆ ಹೆಸರುವಾಸಿಯಾಗಿರುವಂಥ ಈ ರಾಜ್ಯದ ಸದನದ ಘನತೆಯನ್ನು ತಾವು ಎತ್ತಿಹಿಡಿಯುತ್ತೀರಿ ಎನ್ನುವಂಥ ಸಂಪೂರ್ಣವಾದ ಭರವಸೆಯೊಂದಿಗೆ ತಮಗೆ ಹಾರೈಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):- ಮಾನ್ಯ ಅಧ್ಯಕ್ಷರೆ, ಮೊದಲನೆಯದಾಗಿ ತಾವು ಅಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆಯಾಗಿರುವುದನ್ನು ನಾನು ಮುಕ್ತ ಕಂಠದಿಂದ ಅಭಿನಂದಿಸುತ್ತೇನೆ. ನಾನು ಬಹಳ ವರ್ಷದಿಂದ ಈ ಸದನದಲ್ಲಿದ್ದೇನೆ. ವೈಕುಂಠಬಾಳಿಗರವರು ಅಧ್ಯಕ್ಷರಾಗಿದ್ದಾಗಲೂ ಇದ್ದೇನೆ, ಕೊಠಾವಳೆ ಎಂಬುವರು ಬಹಳ ಅತ್ಯಂತ ಹಿರಿಯ ಅಧ್ಯಕ್ಷರಾಗಿದ್ದರು, 1967ರಲ್ಲಿ ನಾನು ಈ ಸದನಕ್ಕೆ ಬಂದಾಗ ಅದು ಒಂದು ಬಹುಶಃ ಅದು ನಮ್ಮ ಸೌಭಾಗ್ಯ ಸಾಹುಕಾರ್ ಚೆನ್ನಯ್ಯನವರು ಈ ಸದನದಲ್ಲಿ ಇದ್ದರು. ಅವರು ಎಂದರೆ ಬಹುಶಃ ಕರ್ನಾಟಕ ರಾಜ್ಯದ ಇತಿಹಾಸದಲ್ಲೇ ದೊಡ್ಡ ಮಹತ್ತರವಾದಂಥ ವ್ಯಕ್ತಿ. ಮಾನ್ಯ ನಿಜಲಿಂಗಪ್ಪನವರು ಮುಖ್ಯಮಂತ್ರಿಗಳು, ಇನ್ನು ಅದಕ್ಕಿಂತ ಸೌಭಾಗ್ಯ ಮತ್ತೊಂದು ಇಲ್ಲ, ಹೆಚ್. ಸಿದ್ದವೀರಪ್ಪನವರು

ಇದ್ದರು. ಸಾಹುಕಾರ್ ಚೆನ್ನಯ್ಯನವರು, ಶಾಂತವೇರಿ ಗೋಪಾಲಗೌಡರು, ಎಂ.ಎಸ್. ಕೃಷ್ಣನ್‌ರವರು, ಹೆಚ್.ಎಂ. ಚನ್ನಬಸಪ್ಪನವರು, ಬಂಗಾರಪ್ಪ, ನಂಜೇಗೌಡರು ಎಲ್ಲಾ ದೊಡ್ಡ ವ್ಯಕ್ತಿಗಳ ಸ್ವಲ್ಪ ಹೆಚ್ಚು ಕಡಿಮೆ 97 ಜನ ಘಟಾನುಘಟಿಗಳ ವಿರೋಧ ಪಕ್ಷ, ಆ ಸಂದರ್ಭದಲ್ಲಿ ದೊಡ್ಡ ಯುದ್ಧಗಳೇ ನಡೆಯುತ್ತಿತ್ತು. ಸಾಹುಕಾರ್ ಚನ್ನಯ್ಯನವರು, ಅದಾದಮೇಲೆ ನಿಜಲಿಂಗಪ್ಪನವರು ಕಾಂಗ್ರೆಸ್‌ನ ಅಧ್ಯಕ್ಷರಾದಾಗ ತಕ್ಷಣ ಮಾನ್ಯ ವೀರೇಂದ್ರಪಾಟೀಲರು ಮುಖ್ಯಮಂತ್ರಿಗಳಾಗಿದ್ದರು, ಇಲ್ಲಿ ದೊಡ್ಡ ಕದನಗಳೇ ಆಗುತ್ತಿದ್ದವು. ಎಸ್. ಶಿವಪ್ಪನವರು ವಿರೋಧ ಪಕ್ಷದ ನಾಯಕರು, ದೊಡ್ಡ ಆದರ್ಶ, ಈ ಸದನಕ್ಕೇ ದೊಡ್ಡ ಇತಿಹಾಸ, ಆದರ್ಶವಿದೆ. ಸಮನ್ವಯದಲ್ಲಿ ಅಧ್ಯಕ್ಷರಾಗಿದ್ದಂಥ ರಮೇಶ್‌ಕುಮಾರ್ ರವರು ನಿಜಕ್ಕೂ ಇತಿಹಾಸವನ್ನು ನಿರ್ಮಾಣ ಮಾಡಿದ್ದಾರೆ. ಅದನ್ನು ನಾನು ಅತ್ಯಂಥ ಹೆಚ್ಚಿನ ರೀತಿಯಲ್ಲಿ ಮೆಚ್ಚುತ್ತೇನೆ. ಬಹುಶಃ ಅನೇಕ ಸಂದರ್ಭದಲ್ಲಿ ಅವರನ್ನು ನೆನೆಸಿಕೊಂಡಿದ್ದೇವೆ. ಈ ಸದನದಲ್ಲಿ ಅವರು, ಅವರ ಮುಂದೆ ಇದ್ದಂಥ ಗಂಟೆಯನ್ನು ಹೊಡೆಯಲೇ ಇಲ್ಲ. ಐದು ವರ್ಷಗಳ ಕಾಲ ಅವರು ಗಂಟೆಯನ್ನು ಹೊಡೆಯಲೇ ಇಲ್ಲ. ಅದು ಒಂದು ದೊಡ್ಡ ಇತಿಹಾಸ.

ಯಾರೇ ಅಧ್ಯಕ್ಷರಾದರೂ ಸಾಮಾನ್ಯವಾಗಿ ಗಂಟೆಯನ್ನು ಹೊಡೆದು ಮಾತನಾಡತಕ್ಕವರನ್ನು ಕೂರಿಸತಕ್ಕದ್ದು ಅಥವಾ ಅವರು ಮಾತನಾಡುವುದನ್ನು ನಿಲ್ಲಿಸಬೇಕೆಂದು ಹೇಳುವುದು ಸಾಮಾನ್ಯವಾಗಿತ್ತು. ಆದರೆ ಮಾನ್ಯ ರಮೇಶ್ ಕುಮಾರ್‌ರವರು ಅಧ್ಯಕ್ಷರಾಗಿದ್ದಾಗ ಐದು ವರ್ಷಗಳ ಅವಧಿಯಲ್ಲಿ ಒಂದು ದಿನವೂ ಸಹ ಅವರು ಗಂಟೆ ಹೊಡೆಯಲಿಲ್ಲ. ಅದು ಸಮನ್ವಯ. ಸರ್ವಾಧಿಕಾರ ಬೇರೆ, ಸಮನ್ವಯ ಬೇರೆ. ಅಧ್ಯಕ್ಷರು ಸಮನ್ವಯವಾಗಿ ಈ ಸದನದಲ್ಲಿ ಕಾರ್ಯವನ್ನು ಮಾಡಿದರೆ, ನನಗನ್ನಿಸುತ್ತದೆ, ಅದು ಬಹಳ ಹೆಚ್ಚಿನ ಮೆರುಗನ್ನು ತರುತ್ತದೆ. ತಾವು ಅಷ್ಟೇ ಹೆಚ್ಚಿನ ಮೆರುಗನ್ನು ತರುತ್ತೀರಿ ಎಂದು ನಾನು ಅಂದುಕೊಂಡಿದ್ದೇನೆ. ನಾನು ಬಹುಶಃ ನೀವು ಅಧ್ಯಕ್ಷರಾಗುತ್ತೀರಿ ಎಂದು ಅಂದುಕೊಂಡಿರಲಿಲ್ಲ. ನನ್ನ ದೃಷ್ಟಿಯಲ್ಲಿ ತಾವು ಸಚಿವ ಸಂಪುಟದಲ್ಲಿ ಇರುತ್ತೀರಿ, ಇಬ್ಬರಿಗೂ ಸಮನ್ವಯ ಆಗಿರತಕ್ಕ ರಮೇಶ್ ಕುಮಾರ್‌ರವರು ಅಧ್ಯಕ್ಷರಾಗಬಹುದು ಎಂದು ಅಂದುಕೊಂಡಿದ್ದೆವು. ಇದೊಂದು ವಿಪರ್ಯಾಸ. ಯಾರ್‍ಯಾರು ಏನೇನಾಗುತ್ತಾರೋ ಎಂದು ಹೇಳುವುದಕ್ಕಾಗುವುದಿಲ್ಲ. ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗುತ್ತಾರೆಂದು ಇತ್ತು. ಆದರೆ ಅವರು ಆಗಲಿಲ್ಲ. ಅವರು ಮತ್ತೆ ಇಲ್ಲೇ ಕುಳಿತಿದ್ದಾರೆ. ಮಾನ್ಯ ಧರ್ಮಸಿಂಗ್‌ರವರು ಸಮ್ಮಿಶ್ರ ಸರ್ಕಾರದ ಮುಖ್ಯ ಮಂತ್ರಿಗಳಾಗುತ್ತಾರೆಂದು ಚುನಾವಣೆಗೆ ಪೂರ್ವಭಾವಿಯಾಗಿ ನಾನು ಅವರಿಗೆ ಹೇಳಿದ್ದೆ. ನಾನು ಭವಿಷ್ಯಗಾರನಲ್ಲ. ಆದರೂ ಅವರು ಮುಖ್ಯಮಂತ್ರಿಗಳಾದರು. ಆದರೆ ಯಾವ ಪರಿಸ್ಥಿತಿಯಲ್ಲಿ ಏನಾಗುತ್ತದೋ ಎಂದು ಕೊನೆಯವರೆಗೂ ಹೇಳುವುದಕ್ಕಾಗುವುದಿಲ್ಲ. ಮಾನ್ಯ ಸಿದ್ದರಾಮಯ್ಯನವರು ಮುಖ್ಯಮಂತ್ರಿಗಳಾಗುತ್ತಾರೆಂದು ಅಂದುಕೊಂಡಿದ್ದೆವು. ಯಾವ ಗಳಿಗೆಯಲ್ಲಿ ಏನಾಗುತ್ತದೋ ಹೇಳುವುದಕ್ಕಾಗುವುದಿಲ್ಲ. ಆದರೆ ಈ ಸದನ ಇವತ್ತಿನ ಈ ಪರಿಸ್ಥಿತಿಯಲ್ಲಿ ಬಹಳ ವಿಶಿಷ್ಟವಾಗಿದೆ, ವಿಶೇಷವಾಗಿದೆ. ಅನೇಕ ಸಂದರ್ಭಗಳಲ್ಲಿ ಈಗಿರತಕ್ಕ ಈ ವಿರೋಧ ಪಕ್ಷ ಮತ್ತು ಈಗಿರತಕ್ಕ ಅವರ ವಯಯವಸ್ಥೆ ಇವೆರಡನ್ನೂ ನೋಡಿದಾಗ ಸಂಘರ್ಷ ಅನಿವಾರ್ಯ. ಅದರ ಬಗ್ಗೆ ಬೇರೆ ಮಾತು ಇಲ್ಲವೇ ಇಲ್ಲ. ಸಂಘರ್ಷ ಅನಿವಾರ್ಯ. ಆ ಸಂಘರ್ಷ ಯಾವ್ಯಾವ ರೂಪವನ್ನು ತಾಳುತ್ತದೆ ಎಂಬುದು ಮುಂದಿನ ದಿನಗಳಲ್ಲಿ ತೀರ್ಮಾನವಾಗುತ್ತದೆ. ಆ ಸಂಘರ್ಷವನ್ನು ತಾವು ನೋಡಿ

ಅದಕ್ಕೆ ಸರಿಯಾದ ರೀತಿಯಲ್ಲಿ ಸ್ಪಂದನೆ ಮಾಡಬೇಕಾದರೆ ತಾವು ಕೆ.ಆರ್. ಪೇಟೆ ಕೃಷ್ಣ ಆಗಬಾರದು, ತಾವು ಮಹಾಭಾರತದ ಕೃಷ್ಣ ಆದರೆ ಮಾತ್ರ ಇದು ಸಾಧ್ಯ. ನಾವು ಮಹಾಭಾರತವನ್ನು ನೋಡಿದಾಗ, ಮಹಾಭಾರತದಲ್ಲಿ ಒಂದು ಕಡೆ ನೋಡಿದರೆ ಕೃಷ್ಣ ಕೌರವರ ಪರವಾಗಿಯೇ ಇದ್ದ, ಆದರೆ ಪಾಂಡವರ ಪರವಾಗಿ ಅವನ ಆತ್ಮ ಮತ್ತು ಹೃದಯ ಇತ್ತು. ಅವರು (ಆಡಳಿತ ಪಕ್ಷದವರು) ಕೌರವರು, ನಾವು (ವಿರೋಧ ಪಕ್ಷದವರು) ಪಾಂಡವರು. ತಾವು ಯಾವಾಗಲೂ ಸಂಪೂರ್ಣವಾಗಿ ನಮ್ಮ ಪರವಾಗಿಯೇ ಇರಬೇಕು....

ಶ್ರೀ ಡಿ.ಆರ್. ಪಾಟೀಲ್:– ನೀವು 101 ಜನರಿದ್ದೀರಿ, ಅದ್ದರಿಂದ ನೀವೇ ಕೌರವರು!

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:– ಮಾನ್ಯ ಯಡಿಯೂರಪ್ಪನವರು ಹೇಳಿದಂತೆ, ನೀವು 101 ಜನರು ಇರುವುದರಿಂದ ನೀವೇ ಕೌರವರ ಸ್ಥಾನದಲ್ಲಿ ಇದ್ದೀರಿ.

ಶ್ರೀ ವಾಟಾಳ್ ನಾಗರಾಜ್:– ನಾನು ಒಬ್ಬ 100 ಜನ ಶಾಸಕರಿಗೆ ಸಮ. ಅಂದರೆ ನಾನು ಒಬ್ಬನೇ ಇದ್ದೇನೆ ಎಂದು ತಾವು ತಿಳಿದುಕೊಳ್ಳಬೇಡಿ. ತಾವೆಲ್ಲಾ ನನ್ನನ್ನು ಅಭಿನಂದಿಸಿದ್ದೀರಿ...

ಶ್ರೀ ಡಿ.ಟಿ. ಜಯಕುಮಾರ್:– ನೀವು ಇತಿಹಾಸವನ್ನು ಬದಲಾವಣೆ ಮಾಡುವುದಕ್ಕೆ ಹೊರಟಿದ್ದೀರಿ. ಕೌರವರ ಸ್ಥಾನಕ್ಕೆ ಪಾಂಡವರನ್ನು ಮತ್ತು ಪಾಂಡವರ ಸ್ಥಾನಕ್ಕೆ ಕೌರವರನ್ನು ತರುವ ರೀತಿಯಲ್ಲಿ ಇತಿಹಾಸವನ್ನು ಬದಲಾವಣೆ ಮಾಡಿದರೆ ಹೇಗೆ?

ಶ್ರೀ ವಾಟಾಳ್ ನಾಗರಾಜ್:– ನಿಮಗೆ ಇತಿಹಾಸವೇ ಗೊತ್ತಿಲ್ಲ ಬಿಡಿ. ನಿಮ್ಮ ಈ ವ್ಯವಸ್ಥೆಯಲ್ಲಿ ನೋಡಿದರೆ ನನಗನ್ನಿಸುತ್ತದೆ, ಇದು ಇತಿಹಾಸದಲ್ಲಿ ಸಾಧ್ಯವೇ ಇಲ್ಲ. ಎಲ್ಲಾದರೂ ಉಂಟೇ? ಅದಕ್ಕೆ ತಾವು ಕೌರವರು ಎಂದು ನಾನು ಹೇಳುತ್ತಿದ್ದೇನೆ. ದುರ್ಯೋಧನ, ದುಶ್ಯಾಸನ ಎಲ್ಲವೂ ಕೂಡ ನೀವೇಯೇ! ಆದರೆ ಇಲ್ಲಿ ಪಾಂಡವರಾದ ನಾವು ಕುಳಿತಿದ್ದೇವೆ. ತಾವು 'ಕೃಷ್ಣ' ಎಂಬು ಹೆಸರಿನವರಾಗಿದ್ದೀರಿ. ಈ ಸದನದಲ್ಲಿ 'ಕೃಷ್ಣ' ಎಂಬ ಹೆಸರು ಬಹಳ ಮಹತ್ತರವಾದುದು. ಎಸ್.ಎಂ. ಕೃಷ್ಣರವರು ಇಲ್ಲಿ ಅಧ್ಯಕ್ಷರಾಗಿದ್ದರು, ನಂತರ ಅವರು ಉಪ ಮುಖ್ಯಮಂತ್ರಿಗಳಾಗಿ, ತದನಂತರ ಮುಖ್ಯಮಂತ್ರಿಗಳಾದರು. ತಮಗೂ ಕೂಡ ಮುಂದೆ ಅದೇ ತರಹದ ಭವಿಷ್ಯ ಕಾದಿದೆ. ನಾನು ಇವತ್ತು ಆ ರೀತಿಯ ಭವಿಷ್ಯವನ್ನು ಇಲ್ಲಿ ಭವಿಷ್ಯವನ್ನು ಹೇಳುತ್ತಿದ್ದೇನೆ. ಈ 'ಕೃಷ್ಣ' ಎಂಬ ಪದ ಎಲ್ಲೋ ಒಂದು ಕಡೆ ಈ ಸದನದಲ್ಲಿ ಬಹಳ ಹೆಚ್ಚಿನ ಗಾಂಭೀರ್ಯ ಮತ್ತು ಚರಿತ್ರೆಯನ್ನು ನಿರ್ಮಾಣ ಮಾಡುತ್ತಿದೆ. ಆ ಚರಿತ್ರೆಯನ್ನು ತಾವು ನಿರ್ಮಾಣ ಮಾಡುತ್ತೀರಿ. ಆದ್ದರಿಂದ ತಾವು ಮಹಾಭಾರತದ ಕೃಷ್ಣ ಆಗಬೇಕೆಂದು ಮತ್ತೊಮ್ಮೆ ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇದೇ ಸಂದರ್ಭದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರಾಗಿರತಕ್ಕಂಥ ಶ್ರೀ ಯಡಿಯೂರಪ್ಪನವರನ್ನೂ ನಾನು ಮುಕ್ತ ಕಂಠದಿಂದ ಅಭಿನಂದಿಸುತ್ತೇನೆ. ಆದರೆ ಅವರು ಕೇವಲ ಬಿ.ಜೆ.ಪಿ.ಯ ನಾಯಕರಾಗಿರ ಬಾರದು, ಎಲ್ಲಾ ವಿರೋಧ ಪಕ್ಷಗಳಿಂದ 101 ಜನ ಸದಸ್ಯರಿದ್ದೇವೆ, ತಾವು ನಿಜವಾಗಿ ಅವರೆಲ್ಲರ ನಾಯಕರಾಗಿರಬೇಕು. ವಿರೋಧ ಪಕ್ಷದವರೆಲ್ಲರನ್ನೂ ಒಗಟ್ಟಿನಿಂದ, ಒಮ್ಮತದಿಂದ ವಿಶ್ವಾಸದಿಂದ ಅವರು ತೆಗೆದುಕೊಂಡು ಹೋಗಬೇಕೆಂದು ಅವರಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ. ಈ ರಾಜ್ಯದ ಒಬ್ಬ ಅಜಾತ ಶತ್ರುವಾದ ಧರ್ಮಸಿಂಗ್‌ರವರು ಮುಖ್ಯಮಂತ್ರಿಗಳಾಗಿದ್ದಾರೆ. ಅವರ ವ್ಯವಸ್ಥೆಯಲ್ಲಿ ಅವರು ಮುಖ್ಯಮಂತ್ರಿಗಳಾಗಿ ಕನಿಷ್ಟ ಐದು ವರ್ಷಗಳ ಕಾಲ ಆಡಳಿತ ನಡೆಸಲೆಂದು

ನಾನು ಹೇಳುತ್ತೇನೆ. ಯಾರೂ ಕೂಡ ಯಾರ ಕಾಲು ಎಳೆಯದೇ ಗಂಭೀರವಾಗಿ ಇದ್ದರೆ ಅವರು ಉಳಿಯುತ್ತಾರೆಂದು ನಾನು ಅಂದುಕೊಂಡಿದ್ದೇನೆ. ಈಗಾಗಲೇ ಸುಮಾರು 4–5 ದಿವಸಗಳಿಂದ ಒಬ್ಬರಿಂದೊಬ್ಬರ ಕಾಲು ಜಗ್ಗಾಟವನ್ನು ನೋಡಿ, ನಮಗೆ ಮುಂದೆ ಏನಾಗುತ್ತದೋ ಎಂಬ ಭಯ ಇದೆ. ಬಹುಶಃ ಅವರಿಬ್ಬರೂ ಬಹಳ ಹೊಂದಿಕೊಂಡು ಹೋಗುತ್ತಾರೆಂದು ನಾನು ಅಂದುಕೊಳ್ಳುತ್ತೇನೆ. ಆ ವ್ಯವಸ್ಥೆಯಲ್ಲಿ ನುರಿತಂತಹ ಮಾನ್ಯ ಸಿದ್ದರಾಮಯ್ಯರಂತಹವರು ಇದ್ದಾರೆ. ಮಾನ್ಯ ಖರ್ಗೆಯವರು ಈ ಕಡೆಗೆ ಇದ್ದರೆ ಬಹಳ ಚೆನ್ನಾಗಿತ್ತು ಎಂದು ನನಗನ್ನಿಸುತ್ತದೆ. ಅವರು ಈ ಕಡೆ ಇದ್ದಾಗ ಮಾನ್ಯ ವಿರೋಧ ಪಕ್ಷದ ನಾಯಕರ ಚೆನ್ನಾಗಿ ಕೆಲಸ ಮಾಡಿದ್ದಾರೆ. ಏಕೆ ಅವರು ಅವರ ಜೊತೆಯಲ್ಲಿ ಹೊಂದಿಕೊಂಡರೋ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಈ ಕಡೆ ಇದ್ದಿದ್ದರೆ ನಿಮಗೆ (ಖರ್ಗೆ) ಎಷ್ಟು ಶೋಭ ಇರುತ್ತಿತ್ತು, ಎಷ್ಟು ಶಕ್ತಿ ಬರುತ್ತಿತ್ತು ಗೊತ್ತೆ? ಏಕೆ ಈ ಪರಿಸ್ಥಿತಿ...

ಶ್ರೀ ಮಲ್ಲಿಕಾರ್ಜುನ ಖರ್ಗೆ:– ನಾನು ಏತಕ್ಕಾಗಿ ಈ ಕಡೆಗೆ ಬಂದೆ ಎಂದರೆ, ನೀವು 100 ಆಕಳದಲ್ಲಿ ಒಂದು ಹೋರಿ ಇದ್ದಂತೆ ಇದ್ದೀರಿ. ನಾನು ಅಲ್ಲಿಗೆ ಬಂದು ಏನು ಮಾಡಲಿ ಎಂದು ಅದಕ್ಕೆ ಬೇಡ ಎಂದೆ.

ಶ್ರೀ ವಾಟಾಳ್ ನಾಗರಾಜ್:– ಈ ಕಡೆಗೆ ನೀವು ಬಂದಿದ್ದರೆ ಉನ್ನತವಾದ ಸ್ಥಾನವನ್ನು ನಾವು ನಿಮಗೆ ಕೊಡುತ್ತಿದ್ದೆವು. ಈ ಬಗ್ಗೆ ಈಗಲೂ ಕೂಡ ತಾವು ಆಲೋಚನೆ ಮಾಡಿ. ಆ ಒಂದು ಅವಕಾಶ ನಿಮಗೆ ಈಗಲೂ ಇದೆ. ನನಗನ್ನಿಸುತ್ತದೆ, ಮಾನ್ಯ ರಮೇಶ್ ಕುಮಾರ್ ಅವರಿಗೆ ಆ ಕಡೆಗೆ ಕುಳಿತುಕೊಳ್ಳಲು ಮನಸ್ಸು ಇಲ್ಲ. ಅವರು ನನ್ನ ಕಡೆಗೇ ಬರುತ್ತಿದ್ದಾರೆ. ಹೇಗಾದರೂ ಮಾಡಿ ಅಧ್ಯಕ್ಷರಿಗೆ ಹೇಳಿ ಸಾಧ್ಯವಾದರೆ ನಿಮ್ಮ ಕಡೆಗೆ ಕುಳಿತುಕೊಳ್ಳಲು ನನಗೆ ಅವಕಾಶ ಕೊಡಿಸಿ ಎಂದು ಅವರು ನನ್ನನ್ನು ಕೇಳಿದರು. ನಾನು ತಮ್ಮಲ್ಲಿ ಕೈ ಮುಗಿದು ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ, ತಾವು ಮಾನ್ಯ ರಮೇಶ್ ಕುಮಾರ್‌ರವರನ್ನು ಈ ಕಡೆಗೆ ಕಳುಹಿಸಿದರೆ ನಿಜಕ್ಕೂ ಎಲ್ಲಾ ದೃಷ್ಟಿಯಿಂದಲೂ ಬಹಳ ಒಳ್ಳೆಯದಾಗುತ್ತದೆ. ನನಗನಿಸುತ್ತದೆ ಒಳ್ಳೆಯ ವ್ಯವಸ್ಥೆ ಇದೆ. ಮಾನ್ಯ ಪ್ರಕಾಶ್‌ರವರು ಅತ್ಯಂತ ಮೇಧಾವಿಗಳು, ಅದರ ಬಗ್ಗೆ ಬೇರೆ ಮಾತಿಲ್ಲ. ಮಾನ್ಯ ಸಿಂಧ್ಯಾರವರು ಇದ್ದಾರೆ. ನನ್ನ ಜೊತೆಯಲ್ಲಿದ್ದಾಗ ಮಾನ್ಯ ಮಂಜುನಾಥ್‌ರವರು ಉಪಾಧ್ಯಕ್ಷರಾಗಿದ್ದರು. ಮಾನ್ಯ ಮಂಜುನಾಥ್ ಮತ್ತು ನಾನು ಹಾಗೂ ಬಸವಣ್ಣೆಪ್ಪನವರು, ಈ ಮೂರು ಜನ 1967ರಲ್ಲಿ ಈ ಸದನದಲ್ಲಿದ್ದೆವು. ಈ ಸದನಕ್ಕೆ ಅತ್ಯಂಥ ಹೆಚ್ಚಿನ ವಿಶ್ವಾಸ ಮತ್ತು ಗಾಂಭೀರ್ಯ ಪ್ರತಿಯೊಂದು ಇದೆ. ದಯವಿಟ್ಟು ತಾವು ಅದನ್ನು ಎತ್ತಿ ಹಿಡಿಯುತ್ತೀರಿ ಎಂದು ನಾನು ಅಂದುಕೊಂಡಿದ್ದೇನೆ. ಮಧ್ಯೆ ಮಧ್ಯೆ ನನ್ನ ಗದ್ದಲಗಳು ಸ್ವಲ್ಪ ಇದ್ದೇ ಇರುತ್ತದೆ. ನನ್ನ ಕಡೆಗೆ ತಾವು ವಿಶೇಷವಾಗಿ ಗಮನ ಹರಿಸಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ):– ಸನ್ಮಾನ್ಯ ಅಧ್ಯಕ್ಷರೆ, ಕರ್ನಾಟಕದ ಇತಿಹಾಸದಲ್ಲಿ ಒಂದು ತುಂಬಾ ಸಂಕೀರ್ಣವಾದಂತಹ ಮತ್ತು ವೈಶಿಷ್ಟಪೂರ್ಣವಾದಂತಹ ಸ್ಥಿತಿಯಲ್ಲಿ 12ನೇ ವಿಧಾನ ಸಭೆ ರಚನೆಯಾಗಿದೆ. ಕರ್ನಾಟಕ ರಾಜ್ಯದ ಜನತೆ ತಮ್ಮ ತೀರ್ಪನ್ನು ವಿಭಿನ್ನವಾಗಿ ಕೊಟ್ಟಿದ್ದಾರೆ. ಅವರ ತೀರ್ಪನ್ನು ನಾವೆಲ್ಲರೂ ಗೌರವಿಸಬೇಕಾಗಿರತಕ್ಕದ್ದು ಈ ಸದನದ ಮೊಟ್ಟಮೊದಲನೆಯ ಕರ್ತವ್ಯವಾಗಿದೆ. ಬಹುಶಃ ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಹಿಂದೆಂದೂ ಇಂತಹ ತೀರ್ಪನ್ನು

ಕೊಟ್ಟಿರಲಿಲ್ಲ, ಅಂತಹ ತೀರ್ಪನ್ನು ಅವರು ಕೊಟ್ಟಿದ್ದಾರೆ. ಆ ತೀರ್ಪನ್ನು ಗೌರವಿಸತಕ್ಕ ಜವಾಬ್ದಾರಿಯನ್ನು ಹೊತ್ತಿರತಕ್ಕ ನಾವು. ಮತ್ತು ಅದರ ಪ್ರಮುಖ ಜವಾಬ್ದಾರಿಯನ್ನು ನಿರ್ವಹಿಸಲಿಕ್ಕೆ ಅವಕಾಶ ಮಾಡಿ ಕೊಡಬೇಕಾಗಿರತಕ್ಕಂಥ ನೀವು. ಇಡೀ ದೇಶದಲ್ಲೇ ಕರ್ನಾಟಕದ ವಿಧಾನ ಸಭೆಗೆ ಒಂದು ವಿಶಿಷ್ಟವಾದಂತಹ ಮತ್ತು ಪ್ರತ್ಯೇಕವಾದಂತಹ ಸ್ಥಾನ ಇದೆ. ಕರ್ನಾಟಕ ರಾಜ್ಯದ ವಿಧಾನ ಸಭೆ ಎಂದೂ ತನ್ನ ಪಾವಿತ್ರತೆಯನ್ನು ಕಳೆದುಕೊಂಡಿಲ್ಲ. ಅತ್ಯುನ್ನತವಾದಂತಹ ಘನತೆ ಗೌರವಗಳನ್ನು ಎತ್ತಿ ಹಿಡಿಯತಕ್ಕಂಥ ವಿಧಾನ ಸಭೆ ಇದು. ದೇಶದ ಯಾವುದೇ ವಿಧಾನ ಸಭೆಗೆ ಹೋಲಿಸಿದರೂ ಕೂಡ ಅತ್ಯುನ್ನತವಾದ ಈ ಸದನದ ಘನತೆ ಗೌರವಗಳು ಎತ್ತಿ ಹಿಡಿಯತಕ್ಕ ವಿಧಾನ ಸಭೆ ನಮ್ಮ ಸದನವಾಗಿದೆ. ಆ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗಬೇಕು. ಅದರ ಜೊತೆಯಲ್ಲೇ ಕರ್ನಾಟಕ ರಾಜ್ಯದ ಜನತೆಯ ಅಭಿವ್ಯಕ್ತಿ ಏನಿದೆ, ಅದು ಇಲ್ಲಿ ಪ್ರತಿಧ್ವನಿಸಬೇಕು. ಅದನ್ನು ಪ್ರತಿಧ್ವನಿಸುವ ರೀತಿಯಲ್ಲಿ ತಾವು ಅಧ್ಯಕ್ಷರಾಗಿ ಕೆಲಸ ಮಾಡಬೇಕಾಗುತ್ತದೆ. ಅಂತಹ ಕೆಲಸ ಮಾಡುತ್ತೀರಿ ಎಂಬ ನಂಬಿಕೆ ನನಗಿದೆ. ಏಕೆಂದರೆ, ಕರ್ನಾಟಕ ರಾಜ್ಯದ ರಾಜಕೀಯ ಇತಿಹಾಸದಲ್ಲಿ ಮೊಟ್ಟಮೊದಲನೆಯ ಬಾರಿಗೆ ಸಮ್ಮಿಶ್ರ ಸರ್ಕಾರ ಒಂದು ಕಡೆ ರಚನೆಯಾಗಿದೆ, ಇನ್ನೊಂದು ಕಡೆ ದೊಡ್ಡ ಸಂಖ್ಯೆಯ ಸದಸ್ಯರುಗಳಿರುವ ವಿರೋಧ ಪಕ್ಷಗಳು ಇವೆ. ಕರ್ನಾಟಕ ರಾಜ್ಯದ ವಿಧಾನ ಸಭೆಯ ಚರಿತ್ರೆಯಲ್ಲೆ ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ವಿರೋಧ ಪಕ್ಷಗಳು ಇವೆ. ಕರ್ನಾಟಕ ರಾಜ್ಯದ ವಿಧಾನ ಸಭೆಯ ಚರಿತ್ರೆಯಲ್ಲೇ ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ವಿರೋಧ ಪಕ್ಷಗಳ ಸದಸ್ಯರುಗಳು ಇರಲಿಲ್ಲ. ಇಂತಹ ಸಂದರ್ಭದಲ್ಲಿ ನೀವು ಅಧ್ಯಕ್ಷರಾಗಿದ್ದೀರಿ. ಹಾಗಾಗಿ ಈ ಸದನದ ಘನತೆ ಗೌರವಗಳನ್ನು ಎಲ್ಲಾ ರೀತಿಯಿಂದ ಮುಂದಿನ ದಿನಗಳಲ್ಲಿ ಎತ್ತಿ ಹಿಡಿಯತಕ್ಕಂಥದ್ದರ ಜೊತೆಯಲ್ಲಿ ವಿಭಿನ್ನವಾದ ಅಭಿಪ್ರಾಯಗಳು ಈ ಸದನದಲ್ಲಿ ಮೂಡಿ ಬಂದಿವೆ. ಆ ರೀತಿಯಲ್ಲಿ ಕರ್ನಾಟಕ ರಾಜ್ಯದ ಜನತೆ ತೀರ್ಪನ್ನು ಕೊಟ್ಟಿದ್ದಾರೆ. ವಿಭಿನ್ನ ಅಭಿಪ್ರಾಯ, ವಿಭಿನ್ನ ತಾತ್ವಿಕ ಹಿನ್ನೆಲೆ, ವಿಭಿನ್ನವಾದ ರಾಜಕೀಯ ಹಿನ್ನೆಲೆ ಇರತಕ್ಕಂಥ ಜನರನ್ನು ಆಯ್ಕೆ ಮಾಡಿ ಕಳುಹಿಸಿದ್ದಾರೆ. ಆ ಎಲ್ಲಾ ಜನರ ಭಾವನೆಗಳನ್ನು ಗೌರವಿಸತಕ್ಕಂಥ ಜವಾಬ್ದಾರಿಯನ್ನು ತಾವು ಹೊಂದಿದ್ದೀರಿ. ಆ ಜವಾಬ್ದಾರಿಯನ್ನು ನಿರ್ವಹಿಸುವುದರ ಜೊತೆಗೆ ಕರ್ನಾಟಕ ರಾಜ್ಯದ ಜನತೆಯ ಕಷ್ಟ ಕಾರ್ಪಣ್ಯಗಳೇನಿವೆ, ಪ್ರಮುಖವಾಗಿ ದುಡಿಯುವ ಜನರೇನಿದ್ದಾರೆ, ಆ ದುಡಿಯುವ ಜನರು ಇವತ್ತು ಬೇಸತ್ತೇ ಈ ತೀರ್ಪನ್ನು ಕೊಟ್ಟಿದ್ದಾರೆ. ನಾವೆಲ್ಲರೂ ಅದನ್ನು ಗಮನಿಸಬೇಕು. ಕರ್ನಾಟಕ ರಾಜ್ಯದ ರೈತರು, ದುಡಿಯುವ ಜನ, ಕಾರ್ಮಿಕರು, ಮಹಿಳೆಯರು ಬೇಸತ್ತು ಕೊಟ್ಟಿರತಕ್ಕ ತೀರ್ಪು ಇದು. ಅವರ ಬೇಸರಕ್ಕೆ ಕಾರಣವಾಗಿರತಕ್ಕ ಈ ತೀರ್ಪು ಏನಿದೆ, ಅವರ ಭಾವನೆಗಳನ್ನೂ ಕೂಡ ನಾವು ಗೌರವಿಸಿ ಕರ್ನಾಟಕ ರಾಜ್ಯದ ಜನತೆಯ ಆಶೋತ್ತರಗಳನ್ನು ಇಲ್ಲಿ ಪ್ರತಿನಿಧಿಸತಕ್ಕ ರೀತಿಯಲ್ಲಿ ಚರ್ಚೆಗಳಿಗೆ ತಾವು ಅವಕಾಶ ಮಾಡಿ ಕೊಡಬೇಕು. ಚರ್ಚೆಗಳು ಯಾವತ್ತೂ ಮುಕ್ತವಾಗಿರಬೇಕು, ಯಾವುದೇ ರೀತಿಯಾದಂತಹ ಪೂರ್ವಾಗ್ರಹಪೀಡಿತ ವಲ್ಲದೆ ಮುಕ್ತವಾದಂತಹ ಚರ್ಚೆಗಳಿಗೆ ತಾವು ಅನುವು ಮಾಡಿಕೊಡಬೇಕು. ಎಲ್ಲಾ ರಾಜಕೀಯ ಅಭಿಪ್ರಾಯಗಳಿಗೂ ತಾವು ಮನ್ನಣೆ ಕೊಡಬೇಕು, ಕೊಡುತ್ತೀರಿ ಎಂದು ನಾನು ಭಾವಿಸುತ್ತಾ, ಮತ್ತೊಮ್ಮೆ ತಮಗೆ ಧನ್ಯವಾದಗಳನ್ನರ್ಪಿಸುತ್ತಾ ಮಾತುಗಳನ್ನು ಮುಗಿಸುತ್ತೇನೆ.

1.00 ಪಿಎಂ

+ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ):- ಮಾನ್ಯ ಅಧ್ಯಕ್ಷರೆ, ತಾವು ಆ ಪೀಠವನ್ನು ಅಲಂಕರಿಸಿದಂತಹ ಸಂದರ್ಭದಲ್ಲಿ ತಮಗೆ ಅಭಿನಂದನೆ ಸಲ್ಲಿಸುತ್ತಾ, ಎಲ್ಲಾ ಹಿರಿಯ ಸದಸ್ಯರು ಹೇಳಿದ ಹಾಗೆ ಇದೊಂದು ವಿಶೇಷ ಸಂದರ್ಭ. ಜನ ಯಾರಿಗೂ ಸಹ ನೀವು ಆಡಳಿತ ಮಾಡಿ ಎಂದು ಈ ಸಾರಿ ಮತವನ್ನು ಕೊಟ್ಟಿಲ್ಲ. ವಿಭಿನ್ನವಾದ ರೀತಿಯಲ್ಲಿ ಮತವನ್ನು ಕೊಟ್ಟಿದ್ದಾರೆ. ಆ ಸಂದರ್ಭದಲ್ಲಿ ಕಾಂಗ್ರೆಸ್‌ನವರು ಮತ್ತು ಜನತಾದಳ ಜಾತ್ಯಾತೀತದವರು ಸೇರಿ ಸರ್ಕಾರವನ್ನು ರಚಿಸುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಕಳೆದ ಬಾರಿ ಅದರ ಹಿಂದಿನ ಬಾರಿ ನಾವೆಲ್ಲಾ ಒಂದು ಮಾತನ್ನು ಕೇಳುತ್ತಿದ್ದೆವು. ನೀವು ತಪ್ಪು ಮಾಡಿದ್ದಕ್ಕೆ ಜನ ಅಲ್ಲಿಗೆ ಕಳುಹಿಸಿದ್ದಾರೆಂದು ಆಡಳಿತ ಮಾಡತಕ್ಕಂತಹ ಪಕ್ಷದವರು ವಿರೋಧ ಪಕ್ಷದವರಿಗೆ ಹೇಳುತ್ತಿದ್ದರು. ಈ ಬಾರಿ ಯಾರು ಯಾರಿಗೂ ಆ ಮಾತನ್ನು ಹೇಳುವಂತಹ ಪರಿಸ್ಥಿತಿ ಇಲ್ಲ. ಯಾರಿಗೂ ನೀವು ಅಧಿಕಾರ ಮಾಡಿ ಎಂದು ಮತವನ್ನು ಕೊಟ್ಟಿಲ್ಲ. ಇಂತಹ ಒಂದು ವಿಶೇಷ ಸಂದರ್ಭದಲ್ಲಿ ತಾವು ಆ ಪೀಠದಲ್ಲಿ ಕುಳಿತಿದ್ದೀರಿ. ನನ್ನ ಮಿತ್ರರು ಹೇಳಿದ ಹಾಗೆ ವಿರೋಧ ಪಕ್ಷವೂ ಅಷ್ಟೇ ದೊಡ್ಡದಿದೆ. ಈ ವಿರೋಧ ಪಕ್ಷ ಬಹಳ ದೊಡ್ಡದಾಗಿ ಇದ್ದಾಗ ಅದರಲ್ಲಿಯೂ ಸಹ ಹೊಸದಾಗಿ ಚುನಾಯಿತರಾದ ಸದಸ್ಯರು ಬಹಳ ಜನ ಇದ್ದಾರೆ. ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ನಿನ್ನೆ ಹೊಸದಾಗಿ ಚುನಾಯಿತರಾದ ಸದಸ್ಯರಿಗೆ ತರಬೇತಿ ಕೊಡುವ ಶಿಬಿರವನ್ನು ಮಾಡುತ್ತೇವೆಂದು ಹೇಳಿದರು. ಅದು ಅಗತ್ಯ ಇದೆ. ಮಾನ್ಯ ರಮೇಶ್ ಕುಮಾರ್‌ರವರು ಅಧ್ಯಕ್ಷರಾಗಿದ್ದಾಗ ಅದನ್ನು ಮಾಡಿದ್ದರು. ನಿನ್ನೆ ಪ್ರತಿಜ್ಞೆ ತೆಗೆದುಕೊಳ್ಳುವಾಗ ನಡೆದಂತಹ ಘಟನೆಗಳನ್ನು ನೋಡಿದಾಗ, ಇನ್ನು ಮುಂದಿನ ದಿನಗಳಲ್ಲಿ ಇಂತಹ ಅನೇಕ ಸಮಸ್ಯೆಗಳು ತಮಗೆ ಒದಗಿ ಬರುವಂತಹ ಸಂದರ್ಭಗಳನ್ನು ನಾನು ಇಲ್ಲಿ ಕಾಣುತ್ತಿದ್ದೇನೆ. ಅದಕ್ಕೋಸ್ಕರ ಅಂತಹ ಒಂದು ತರಬೇತಿ ಶಿಬಿರ ಅಗತ್ಯವಿದೆ, ಈ ಸದನದ ಪರಂಪರೆಯ ಬಗ್ಗೆ ವೈಕುಂಠ ಬಾಳಿಗರಿಂದ ಹಿಡಿದು ಇಲ್ಲಿಯವರೆಗೆ, ಹಿಂದೆ ಮಾನ್ಯ ರಮೇಶ್‌ಕುಮಾರ್‌ರವರು ಅಧ್ಯಕ್ಷರಾಗಿದ್ದಾಗ ಶ್ರೀಮಾನ್ ಜೆ.ಹೆಚ್. ಪಟೇಲರು ಮುಖ್ಯ ಮಂತ್ರಿಗಳಾಗಿದ್ದರು. ಅನೇಕ ಹಿರಿಯ ಸದಸ್ಯರು ಆಗ ಮಂತ್ರಿಗಳಾಗಿದ್ದರು. ಅಧ್ಯಕ್ಷರು ಮಾತನಾಡಬಾರದು ಎಂದು ಸುಮ್ಮನೆ ಕುಳಿತುಕೊಳ್ಳುವುದು ಅಲ್ಲ. ಆ ಸದನ ಪ್ರಾಯಶಃ ಇವತ್ತು ನಮಗೆ ನೆನಪಿದೆ. ಸನ್ಮಾನ್ಯ ಜೆ.ಹೆಚ್. ಪಟೇಲರು ಮುಖ್ಯ ಮಂತ್ರಿಗಳಾಗಿದ್ದಾಗ, ಎಷ್ಟೇ ಬಿಸಿ ವಾತಾವರಣ ಇದ್ದಾಗ, ಅಧ್ಯಕ್ಷರು, ಮುಖ್ಯ ಮಂತ್ರಿಗಳು ಮತ್ತು ಹಿರಿಯ ಸದಸ್ಯರೆಲ್ಲರೂ ಸೇರಿ ಸದನವನ್ನು ನಗೆಗಡಲಿಗೆ ಕೊಂಡೊಯ್ದದ್ದು. ಆಗ ಶ್ರೀಮಾನ್ ನಂಜೇಗೌಡರು ಮತ್ತು ವಾಟಾಳ್ ನಾಗರಾಜ್‌ರವರೂ ಕೂಡ ಇದ್ದರು.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಜೆ.ಹೆಚ್. ಪಟೇಲರ ಒಂದು ನೆನಪು ಹೇಳಿದರು, ಆ ಸ್ಥಾನದಲ್ಲಿ ಮಾನ್ಯ ರಮೇಶ್‌ಕುಮಾರ್‌ರವರು ಅಧ್ಯಕ್ಷರಾಗಿದ್ದರು. ಅದನ್ನು ನಾನು ತಮಗೆ ಜ್ಞಾಪಿಸುತ್ತೇನೆ. ಅದು ಒಂದು ಇತಿಹಾಸ. ಆ ತರಹದ ಸದನ ಬರುತ್ತದೆ ಎಂದು ನಾವು ಅಂದುಕೊಂಡಿಲ್ಲ. ನಮ್ಮ ಅಧ್ಯಕ್ಷರು ಆಗ ಒಂದು ಮಾತು ಹೇಳಿದರು. ನೀವು ಮಹಿಳಾ ಆಯೋಗದ ಅಧ್ಯಕ್ಷರಾಗಬೇಕೆಂದು ನನಗೆ ಹೇಳಿದರು. ನಾನು ಹೇಳಿದೆ, ಸ್ವಾಮಿ ನನಗೆ ಮಹಿಳಾ ಆಯೋಗದ ಅಧ್ಯಕ್ಷರನ್ನಾಗಿ ಮಾಡುವುದಕ್ಕೆ ಹೋಗಬೇಡಿ, ಖಂಡಿತ ನನ್ನಿಂದ ಸಾಧ್ಯವಿಲ್ಲವೆಂದು ಹೇಳಿದೆ, ಆಗ

ಮುಖ್ಯ ಮಂತ್ರಿಗಳು ಇರಲಿಲ್ಲ. ಅವರು ಅದಕ್ಕೆ ತಯಾರಾಗಲಿಲ್ಲ, ನಾನು ಎಷ್ಟೇ ಒಪ್ಪದೇ ಇದ್ದರೂ ಕೊನೆಗೆ ಒಂದು ದಿನವಾದರೂ ನೀವು ಒಪ್ಪುತ್ತೀರಿ, ನಾಳೆ ಮುಖ್ಯ ಮಂತ್ರಿಗಳು ಬರಲಿ, ಅವರನ್ನು ಕೇಳಿ ತೀರ್ಮಾನಕ್ಕೆ ಬರೋಣ ಎಂದು ಹೇಳಿದರು. ಅದು ತೀವ್ರವಾಯಿತು, ನಾಳೆ ಬೆಳಿಗ್ಗೆ ಶೂನ್ಯ ವೇಳೆ ಮುಗಿಯಿತು, ಮಾನ್ಯ ಮುಖ್ಯ ಮಂತ್ರಿಗಳು ಬಂದರು, ಅಧ್ಯಕ್ಷರ ಪೀಠದಿಂದ ರಮೇಶ್‌ಕುಮಾರ್‌ರವರು ಮಾತನಾಡುತ್ತಾರೆ. ಮಾನ್ಯ ವಾಟಾಳ್ ನಾಗರಾಜ್‌ರವರು ಮಹಿಳಾ ಆಯೋಗದ ಅಧ್ಯಕ್ಷರಾಗುವುದಿಲ್ಲವೆಂದು ನೆನ್ನೆಯಿಂದ ಹೇಳುತ್ತಿದ್ದಾರೆ, ತಾವು ಏನು ಹೇಳುತ್ತೀರಿ ಎಂದು ಕೇಳಿದರು, ಆ ಸಂದರ್ಭಧಲ್ಲಿ ಅವರು ಮೇಲೆದ್ದು ಮಾನ್ಯ ಅಧ್ಯಕ್ಷರೆ, ವಾಟಾಳ್ ನಾಗರಾಜ್‌ರವರು ಶ್ರೀರಾಮನ ಕುಲಕ್ಕೆ ಸೇರಿದವರು. ನಾನು ಹೆಚ್.ಎನ್. ನಂಜೇಗೌಡರು ಕೃಷ್ಣನ ಕುಲಕ್ಕೆ ಸೇರಿದವರು. ಯಾರು ಅಧ್ಯಕ್ಷರಾಗಬೇಕೆಂದು ನಾಳೆ ರಾಮಕೃಷ್ಣ ಹೆಗಡೆಯವರಿಗೆ ಕೇಳಿ ಹೇಳುತ್ತೇನೆ ಎಂದು ಹೇಳಿದರು. ಹೆಜ್ಜೆ ಹೆಜ್ಜೆಗೂ ಅ ಸದನವನ್ನು ಎಷ್ಟು ನಗುವಿನಲ್ಲಿ ತರುತ್ತಿದ್ದರು. ಮಾನ್ಯ ಖರ್ಗೆಯವರು ಹಿಂದೆ ವಿರೋಧ ಪಕ್ಷದ ನಾಯಕರಾಗಿದ್ದರು. ಅವರನ್ನು ಉದ್ದೇಶಿಸಿ ಮಾನ್ಯ ಖರ್ಗೆಯವರೇ, ನೀವು ಎಕ್ಸರೇನಲ್ಲಿ ಸೌಂದರ್ಯವನ್ನು ನೋಡುತ್ತೀದ್ದೀರಿ. ಸೌಂದರ್ಯವನ್ನು ಎಕ್ಸರೇ ಕಣ್ಣಿನಲ್ಲಿ ನೋಡುತ್ತಿದ್ದೀರಿ ಎಂದು ಹೇಳಿದ್ದರೆ ವಿರೋಧ ಪಕ್ಷದವರು ಸರ್ಕಾರವನ್ನು ಹೆಜ್ಜೆ ಹೆಜ್ಜೆಗೂ ಕಾಲೆಳೆಯುವುದಕ್ಕೆ ಕೂತಿದ್ದಾರೆ ಎಂದು ಹೇಳಿದಾಗ, ಒಂದು ಮಾತು ಹೇಳಿದರು ಮಾನ್ಯ ಪಟೇಲರು ನನ್ನ ಮನೆಯ ಪಕ್ಕ ರೈಲು ಹೋಗುವಾಗಲೂ ಕೂಗುತ್ತದೆ, ಬರುವಾಗಲೂ ಕೂಗುತ್ತದೆ. ನನ್ನ ಮನೆಗೆ ಏನೂ ಆಗಲಿಲ್ಲ ಅಂತ ಇಂತಹವು ನೂರಾರು ಎಂದು ಹೇಳಿದರು. ಅಂದರೆ ಸದನ ಅಷ್ಟೊಂದು ಹಾಸ್ಯವಾಗಿ ಮತ್ತು ವಿಚಾರ ಪೂರ್ಣವಾಗಿ ನಡೆದಿದೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ:– ಮಾನ್ಯ ಯಡಿಯೂರಪ್ಪನವರು ಕೆಲವು ಕಾಲ ವಿರೋಧ ಪಕ್ಷದ ನಾಯಕರಾಗಿದ್ದರು, ನಂತರ ಖರ್ಗೆಯವರು ವಿರೋಧ ಪಕ್ಷದ ನಾಯಕರಾಗಿದ್ದರು. ಪ್ರಾಯಶಃ ಅಂದು ನಡೆದಂತಹ ಚರ್ಚೆ ನಾವು ಕಳೆದ ವಿಧಾನಸಭೆಯಲ್ಲಿ ನೆನೆಸಿಕೊಳ್ಳುತ್ತಿದ್ದೆವು. ಬಹಳ ಕಡಿಮೆ ಜನ ನಾವು ವಿರೋಧ ಪಕ್ಷದಲ್ಲಿ ಕುಳಿತಾಗ ಈ ಚರ್ಚೆಗಳಾಗುವಾಗ ಕೆಲವು ಹಿರಿಯ ಸದಸ್ಯರು ಬಿಟ್ಟರೆ ಹೆಚ್ಚಿನವರು ಹೊಸಬರಿದ್ದರು. ಆದರೆ ಇವತ್ತು ತುಂಬಾ ಹಿರಿಯ ಸದಸ್ಯರೂ ಇದ್ದಾರೆ, ಹೊಸ ಸದಸ್ಯರೂ ಇದ್ದಾರೆ. ಈ ಸದನ ಸ್ವಲ್ಪ ಟರ್ಬುಲೇಟ್ ಆಗಿರುತ್ತದೆ ಎಂದು ನಾವೂ ಅಂದುಕೊಂಡಿದ್ದೇವೆ. ಆ ಸಂದರ್ಭದಲ್ಲಿ ತಾವು ತೆಗೆದುಕೊಳ್ಳುವ ನಿಲುವು, ಹಿಂದೆ ಜೆ.ಹೆಚ್. ಪಟೇಲರು, ಖರ್ಗೆಯವರು ಇದ್ದಾಗ ನಗೆಗಡಲಲ್ಲಿ ತೇಲಿಸುವಂತಹ ಸಂದರ್ಭಗಳು ಇದ್ದ ಹಾಗೆ ಈಗಲೂ ಇದ್ದರೆ ಮಾತ್ರ ಈ ಸದನದಲ್ಲಿ ಒಳ್ಳೆಯ ವಾತಾವರಣ ಇರುತ್ತದೆ. ಬರೀ ವಿಷಯಗಳ ಬಗ್ಗೆ ಚರ್ಚೆಯಾಗುತ್ತಿದ್ದರೆ ಒಳ್ಳೆಯ ವಾತಾವರಣ ಇರುವುದಿಲ್ಲ. ನಮ್ಮಲ್ಲಿ ಹಾಸ್ಯ ಭಾವನೆ ಇದ್ದರೆ ಮಾತ್ರ ಈ ಸದನ ಒಳ್ಳೆಯ ರೀತಿಯಲ್ಲಿ ತೆಗೆದುಕೊಂಡು ಹೋಗಲಿಕ್ಕಾಗುತ್ತದೆ ಎಂದು ನಾನು ಅಂದುಕೊಂಡಿದ್ದೇನೆ. ಎಲ್ಲಾ ಸದಸ್ಯರನ್ನೂ ಒಟ್ಟಿಗೆ ತೆಗೆದುಕೊಂಡು ಹೋಗುವುದು, ಕೆಲವೊಂದು ಸಂದರ್ಭಗಳಲ್ಲಿ ವಾಟಾಳ್ ನಾಗರಾಜ್‌ರವರು ಹೇಳಿದ ಹಾಗೆ ವಿರೋಧ ಪಕ್ಷದವರು ಹೇಳಿದಂತಹ ಮಾತುಗಳನ್ನು ಕೇಳುವಂಥದ್ದು ಸರ್ಕಾರ ಮಾಡದೆ ಇದ್ದಾಗ ಸ್ವಲ್ಪ ಗಲಾಟೆಗಳು ಜಾಸ್ತಿಯಾಗುತ್ತವೆ.

ಆಗ ವಿಷಯಗಳ ಚರ್ಚೆಯಲ್ಲಿ ತಾವೂ ಸಹ ಭಾಗವಹಿಸಿ ತಾವೂ ಸಹ ಕೇಳುತ್ತಿರಬೇಕಾಗುತ್ತದೆ. ತಾವು ಚರ್ಚೆಯನ್ನು ಕೇಳಿ ವಿರೋಧ ಪಕ್ಷದವರು ಹೇಳಿದ ವಿಚಾರಗಳು ಸರಿ ಇದ್ದಲ್ಲಿ ಅವರಿಗೆ ಹೆಚ್ಚು ಅವಕಾಶಗಳನ್ನು ನೀಡುವುದು ಮಾಡಬೇಕಾಗುತ್ತದೆ ಎಂದು ತಮ್ಮ ಹತ್ತಿರ ಕೇಳಿಕೊಳ್ಳುತ್ತಾ, ಈ ಹಿಂದಿನ ಸತ್ ಸಂಪ್ರದಾಯವನ್ನು ಮುಂದುವರೆಸಿಕೊಂಡು ಬರಬೇಕು. ಏಕೆಂದರೆ ತಾವು ಸರಳ ವ್ಯಕ್ತಿ, ಸೌಜನ್ಯಮಯಿ. ಆದರೆ ನಿಲುವುಗಳನ್ನು ತೆಗೆದುಕೊಳ್ಳುವಾಗ ತಾವು ಬಹಳ ಧೃಢವಾದ ನಿಲುವನ್ನು ತೆಗೆದುಕೊಳ್ಳುತ್ತೀರಿ ಎಂದು ನಾನು ಅಂದುಕೊಂಡಿದ್ದೇನೆ. ಈ ಸಂದರ್ಭದಲ್ಲಿ ತಮಗೆ ಪುನಃ ಅಭಿನಂದನೆ ಸಲ್ಲಿಸುತ್ತಾ, ಎರಡೂ ಪಕ್ಷಗಳು ಸೇರಿ ಸರ್ಕಾರವನ್ನು ನಡೆಸುವಂತಹ ಒಂದು ಹೊಸ ಪ್ರಯೋಗ ಆಗುತ್ತಿದೆ. Government coaliation / ಪ್ರಥಮ ಬಾರಿಗೆ ಕರ್ನಾಟಕದಲ್ಲಿ ರಚನೆಯಾಗಿದೆ. ಇದು ಯಶಸ್ಸನ್ನು ಕಾಣಲಿ. ಏಕೆಂದರೆ, ಮಧ್ಯಂತರ ಚುನಾವಣೆ ಬರುವುದರಲ್ಲಿ ನನಗೆ ಆಸಕ್ತಿ ಇಲ್ಲ. ಕೆಲವರು ಈಗಲೇ ಮಧ್ಯಂತರ ಚುನಾವಣೆ ಬರಬಹುದು ಎಂದು ಚರ್ಚೆ ಪ್ರಾರಂಭ ಮಾಡಿದ್ದಾರೆ. ಆ ಮಟ್ಟಕ್ಕೆ ಎರಡೂ ಪಕ್ಷಗಳು ಹೋಗಬಾರದು. ಏಕೆಂದರೆ, ಇವತ್ತು ನಡೆಯುವಂತಹ ಪರಿಸ್ಥಿತಿ ನೋಡಿದರೆ, ಎಲ್ಲೋ ಒಂದು ಕಡೆ ಜನ ಮಾತನಾಡುತ್ತಿರುವುದು ಅದೇ ರೀತಿಯಲ್ಲಿ. ತಾವು ಇಂತಹ ಸಂದರ್ಭ ಬಂದಾಗ ತಮ್ಮ ಕಛೇರಿಗೆ ಎಲ್ಲಾ ಪಕ್ಷದವರನ್ನೂ ಕರೆಸಿ ಕೂತು ಚರ್ಚೆ ಮಾಡಿ ಈ ಸಮಸ್ಯೆಯನ್ನು ಬಗೆಹರಿಸುವಂತಹ ಪ್ರಯತ್ನವನ್ನು ಮಾಡಬೇಕೆಂದು ಹೇಳಿ, ಪುನಃ ತಮಗೆ ಅಭಿನಂದನೆ ಸಲ್ಲಿಸಿ ನಮ್ಮೆಲ್ಲರ ಸಹಕಾರವನ್ನು ತಮಗೆ ಕೊಡುತ್ತೇವೆಂದು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಕೆ.ಆರ್. ರಮೇಶ್ ಕುಮಾರ್ (ಶ್ರೀನಿವಾಸಪುರ):- ಸನ್ಮಾನ್ಯ ಅಧ್ಯಕ್ಷರೆ, ಬಹುಶಃ ಈ ಸಭೆಗೆ ಆಯ್ಕೆಯಾಗಿ ಬರತಕ್ಕಂತಹವರ ವೈಯಕ್ತಿಕ ಬದುಕಿನಲ್ಲಿ ಈ ಸ್ಥಾನವನ್ನು ಅಲಂಕರಿಸತಕ್ಕಂಥದ್ದು ಬಹಳ ಮಹತ್ತರವಾದ ಘಟನೆ. ನನಗೆ ಗೊತ್ತಿರುವ ಹಾಗೆ ತಾವು ಒಂದು ಸಾಮಾನ್ಯ ಕುಟುಂಬದಿಂದ ಬಂದಂತಹವರು. ನೀವು ಈ ದಿವಸ ಈ ಸಭೆಯ ಅಧ್ಯಕ್ಷರಾಗಿ ಆ ಪೀಠವನ್ನು ಅಲಂಕರಿಸಿರತಕ್ಕಂಥದ್ದು. ಕೇವಲ ನಿಮಗೊಬ್ಬರಿಗೆ ಅಲ್ಲ, ಆ ಹಿನ್ನೆಲೆಯಿಂದ ಬರತಕ್ಕಂತಹವರು, ಆ ವರ್ಗವನ್ನು ಪ್ರತಿನಿಧಿಸತಕ್ಕಂಥವರು, ಆ ಗುಣಗಳನ್ನು ಅಳವಡಿಸಿ ಕೊಂಡಿರತಕ್ಕಂಥವರೂ ಕೂಡ ಇಂತಹ ಸ್ಥಾನ ತಲುಪಲಿಕ್ಕೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಒಂದು ಅವಕಾಶ ಇದೆ ಎಂದು ಎಲ್ಲರಿಗೂ ನಂಬಿಕೆ ಬರುವ ಹಾಗಾಗಿದೆ. ಇವತ್ತು ನಿಮ್ಮ ಮುಖಾಂತರ, ನಿಮ್ಮ ಆದರ್ಶನಗಳನ್ನು ಪಾಲನೆ ಮಾಡತಕ್ಕಂತಹ ಇಡೀ ಸಮೂಹ ಯಾವುದು ಇದೆ, ಅವರೆಲ್ಲರೂ ಕೂಡ ಅಭಿನಂದನೆಗೆ ಅರ್ಹರಾಗುತ್ತಾರೆ, ಎನ್ನುವಂತಹ ಮಾತನ್ನು ತಮ್ಮಲ್ಲಿ ನಮ್ರತೆಯಿಂದ ನಿವೇದಿಸಿಕೊಳ್ಳುತ್ತಿದ್ದೇನೆ. ಮಾನ್ಯ ಎಂ.ಪಿ. ಪ್ರಕಾಶ್‌ರವರು ಗ್ರೇಟ್ ಬ್ರಿಟನ್‌ನ ಸಂಸದೀಯ ನಡವಳಿಕೆಗಳನ್ನು ಉಲ್ಲೇಖ ಮಾಡುತ್ತಾ, ನಾವು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಂಸದೀಯ ನಡವಳಿಗಳಿಗಾಗಿ ಅವರ ಮೇಲೆ ಆಧಾರ ಪಡುತ್ತೇವೆ ಎನ್ನತಕ್ಕಂತಹ ಮಾತನ್ನು ಹೇಳಿದ್ದಾರೆ ನಿಜ. ರಾಜ ಮನೆತನದವರು ತಮ್ಮ ಜವಾಬ್ದಾರಿಗಳನ್ನು ಮರೆತು ಭೋಗದಲ್ಲಿ ಆಸಕ್ತಿ ಉಳ್ಳವರಾಗಿ ಜನರನ್ನು ವಿಶೇಷವಾಗಿ ವರ್ತಕ ವರ್ಗವನ್ನು ಪೀಡಿಸುತ್ತಿದ್ದಾಗ, ತೆರಿಗೆ ಪಾವತಿ ವಿಚಾರದಲ್ಲಿ ಉಂಟಾಗತಕ್ಕಂತಹ ಘರ್ಷಣೆ, ಎಲ್ಲೋ ಒಂದು ಕಡೆ ದಂಗೆ ಅಗತಕ್ಕಂತಹ ಸ್ಥಿತಿ ತಲುಪುತ್ತದೆ. ರಾಜ ಮನೆತನಕ್ಕೆ ಮತ್ತು

ಸಾರ್ವಜನಿಕರಿಗೆ ಸಮನ್ವಯ ಮಾಡುವುದಕ್ಕೆ ಒಬ್ಬ ವ್ಯಕ್ತಿ ಬೇಕಾಗುತ್ತಾನೆ. ಈ ರಾಜಿ, ಕಬೂಲಿ ಮಾಡುವುದಕ್ಕೆ ಓಡಾಡತಕ್ಕಂಥ ಮನುಷ್ಯನೇ, ಆ ಪಾತ್ರವನ್ನು ನಿರ್ವಹಣೆ ಮಾಡಿದಂಥವನೇ ತದನಂತರದ ದಿನಗಳಲ್ಲಿ ಸ್ಪೀಕರ್ ಆಗಿ ಬಂದಂಥವನು. ಈಗ ನಮ್ಮ ರಾಜಕೀಯ ವ್ಯವಸ್ಥೆಯಲ್ಲಿ ಯಾವುದೇ ಆಡಳಿತ ಪಕ್ಷ ಸ್ಪೀಕರ್‌ನ್ನು ಮಾಡಬೇಕಾದರೆ ಸ್ವಲ್ಪ ಮಟ್ಟಿಗೆ ಅವರ ವೈಯಕ್ತಿಕ ಗುಣಗಳ ಕಡೆಗೆ ಗಮನವನ್ನು.ಕೊಡುತ್ತಾರೆ. ಹೆಚ್ಚಿನ ಮಟ್ಟಿಗೆ ರಾಜಕೀಯ ಅನುಕೂಲತೆಗಳನ್ನು ನೋಡುತ್ತಾರೆ. ಇವರಿಂದ ತೊಂದರೆ ಏನಾಗಬಹುದು, ಇವರಿಗೇನಾದರೂ ಒಂದು ಅವಕಾಶ ಕೊಡಲೇಬೇಕು, ಅಥವಾ ಇವರಿಗೆ ಒಳ್ಳೆಯದಾಗುವುದನ್ನು ತಪ್ಪಿಸಬೇಕು, ಅಥವಾ ಬೇರೆಯವರಾಗುವುದನ್ನು ತಪ್ಪಿಸಬೇಕು. ಇಂಥ ವಿಚಾರಗಳು ಹೆಚ್ಚು ಗಣನೆಗೆ ಬರುತ್ತವೆ. ನಾವು ಅವರನ್ನು ಅಧ್ಯಕ್ಷ ಪೀಠದಲ್ಲಿ ಕೂರಿಸಿದಾಗ ಎಲ್ಲರೂ ಗುಣವಾಚಕ ಪದಗಳನ್ನು ಪ್ರಯೋಗ ಮಾಡಿ ಹೊಗಳಿ ಬಹಳ ಮೇಲಕ್ಕೆ ಈಗ ಇರುವುದಕ್ಕಿಂತಲೂ ಇನ್ನೂ ಹೆಚ್ಚು ಮೇಲಕ್ಕೆ ತೆಗೆದುಕೊಂಡು ಹೋಗಿಬಿಡುತ್ತೇವೆ. ಸತ್ಯಾಂಶ ಏನು ಎಂದರೆ ಅವರು ಹೆಚ್ಚು ಹೊಗಳಿದಂತೆಲ್ಲಾ ನಿಮ್ಮ ಸೀಟ್ ಕೆಳಕ್ಕೆ ಹೋಗುತ್ತಾ ಇರುತ್ತದೆ. ಅದು ಅಷ್ಟು ಅನುಕೂಲವಾಗಿಲ್ಲ ಕುಳಿತುಕೊಳ್ಳುವುದಕ್ಕೆ ಆ ಸೀಟ್. ನಾನು ಕುಳಿತಿದ್ದ ಐದು ವರ್ಷ. ಶುದ್ಧಾಂತಕರಣದಿಂದ ಎಲ್ಲರನ್ನೂ ಕೂಡ ವಿಶ್ವಾಸಕ್ಕೆ ತೆಗೆದುಕೊಂಡು ಹೋಗಬೇಕು ಎನ್ನತಕ್ಕಂಥ ಪ್ರಯತ್ನವನ್ನು ಮಾಡಿದರೂ ಕೂಡ ಕೆಲವು ಬಾರಿ ಸಾಧ್ಯವಾಗುವುದಿಲ್ಲ. ವೈಕುಂಠ ಬಾಳಿಗಾರವರ ನೆನಪನ್ನು ಆಗಾಗ ಈ ಸದನದಲ್ಲಿ ನಾವು ಮಾಡುತ್ತೇವೆ. ನಾನು ಒಂದು ಪ್ರಶ್ನೆಯನ್ನು ಕೇಳುತ್ತೇನೆ. ವೈಕುಂಠ ಬಾಳಿಗಾರವರು ಅಧ್ಯಕ್ಷರಾಗಿದ್ದಾಗ ಈ ಸದನದಲ್ಲಿ ಯಾರೆಲ್ಲಾ ಇದ್ದರು, ವೈಕುಂಠ ಬಾಳಿಗಾರವರಷ್ಟೇ ಪ್ರಬುದ್ಧರಾಗಿರತಕ್ಕಂಥವರು ಬಹಳ ಜನ ಈ ಸದನದಲ್ಲಿದ್ದರು. ಅವರು ಪ್ರಕಾಶ ಮಾನರಾಗುವುದಕ್ಕೆ ಪೂರಕವಾಗಿ ಅವರಿಗೆ ಸಹಾಯ ಮಾಡತಕ್ಕಂಥವರು ಈ ಸದನದ ಆ ಕಡೆ ಈ ಕಡೆ ಎಲ್ಲಾ ಇದ್ದರು. ನಾವು ಸದನ ಯಾವ ರೀತಿ ರಚನೆ ಆಗಿದೆ ಎನ್ನುವುದನ್ನೂ ಕೂಡ ನೋಡಿಕೊಳ್ಳಬೇಕಲ್ಲಾ. ಅನೇಕ ಸಾಮಾಜಿಕ, ರಾಜಕೀಯ ಕಾರಣಗಳಿಂದಾಗಿ ಹಾಗೂ ಈ ಸಮಾಜದೊಳಗೆ ನಡೆಯುವಂಥವುಗಳ ವಿಚಾರಗಳ ಚರ್ಚೆಯ ಬಗ್ಗೆಯೂ ನೋಡಬೇಕಾಗುತ್ತದೆ. ಈ ಕಾರಣಗಳಿಂದಾಗಿ ಕೆಲವು ಬಾರಿ ಗುಣಮಟ್ಟ ಇಳಿದಿದೆ ಎಂದು ಮಾತನಾಡುತ್ತೇವೆ, ಹಾಗೆಯೇ ಕೆಲವು ಬಾರಿ ನಾವು ಗುಣಮಟ್ಟ ಏರಿದೆ ಎಂತಲೂ ಮಾತನಾಡುತ್ತೇವೆ. ಕೆಲವು ವಿಚಾರಗಳಲ್ಲಿ ಏರಿರತಕ್ಕಂಥದ್ದು ನಿಜ, ಕೆಲವು ವಿಚಾರಗಳಲ್ಲಿ ಇಳಿದಿರತಕ್ಕಂಥದ್ದೂ ನಿಜ. ತಮ್ಮನ್ನು ವೈಕುಂಠ ಬಾಳಿಗಾರವರ ರೀತಿ ಇರಿ ಎಂದು ನಿಮ್ಮನ್ನು ಕೂರಿಸಿ ನಾವೆಲ್ಲರೂ ಇಲ್ಲಿ ಕುಳಿತುಕೊಂಡರೆ, ಇಲ್ಲಿ ಚನ್ನಬಸಪ್ಪನವರು ಇದ್ದಾರೆಯೇ ಕೆ. ಪುಟ್ಟಸ್ವಾಮಿಯವರು ಇದ್ದಾರೆಯೇ ಗೋಪಾಲಗೌಡರು ಇದ್ದಾರೆಯೇ ಎಂ.ಎಸ್ ಕೃಷ್ಣನ್‌ರವರು ಇದ್ದಾರೆಯೇ ರಾಯಚೂರಿನ ನಾಗಪ್ಪನವರು ಇದ್ದಾರೆಯೇ ಅಜೀಜ್ ಸೇಠ್‌ರವರು ಇದ್ದಾರೆಯೇ ಅವರೆಲ್ಲಾ ಇಲ್ಲಿ ಇಲ್ಲ. ಆದುದರಿಂದ ತಾವು ಕೃಷ್ಣಾರವರಾಗಿಯೇ ಇರಿ. ನೀವು ವೈಕುಂಠ ಬಾಳಿಗಾರವರಾಗುವುದು ಬೇಕಿಲ್ಲ. ತಾವು ಯಶಸ್ವಿಯಾಗುತ್ತೀರಿ ಎನ್ನತಕ್ಕಂಥ ವಿಶ್ವಾಸ ನನಗಿದೆ. ಕಾರಣ, ನೀವು ಬಹಳ ಸೌಮ್ಯ ಸ್ವಭಾವದವರು. ಸಿಟ್ಟಿನ ಸ್ವಭಾವದವರಿಗೆ ಆ ಸ್ಥಾನ ಬಹಳ ಕಷ್ಟವಾಗುತ್ತದೆ. ಇನ್ನು ಅಧ್ಯಕ್ಷರಾದವರು ಬಹಳ ಕಡಿಮೆ ಮಾತನಾಡಬೇಕು ಎನ್ನುವುದು ನಿಜ. ಉಳಿದವರೆಲ್ಲರೂ ತಮ್ಮ ಕೆಲಸವನ್ನು ಜವಾಬ್ದಾರಿಯುತವಾಗಿ ಮಾಡಿದರೆ ಅಧ್ಯಕ್ಷರು

ಮಾತನಾಡಬೇಕಿಲ್ಲ. ಡಿಮಾಂಡ್ಸ್ ಮೂವ್ ಮಾಡಿದ ಮಂತ್ರಿ ಆ ಸ್ಥಾನದಲ್ಲಿ ಇರದೇ ಹೊರಟುಹೋಗಿ ಬಿಟ್ಟರೆ ಅಧ್ಯಕ್ಷರು ಮಾತನಾಡದೇ ಇದ್ದರೆ ಸದನ ನಡೆಯುವುದಾದರೂ ಹೇಗೆ? ತಮ್ಮ ಪ್ರಶ್ನೋತ್ತರ ಇರತಕ್ಕಂಥ ದಿವಸ, ಜವಾಬ್ದಾರಿಯುತವಾಗಿರತಕ್ಕಂಥ ಮಂತ್ರಿ ಸಭಾಧ್ಯಕ್ಷರಿಗೆ ಮೊದಲೇ ಸೂಚನೆಯನ್ನು ಕೊಡದೇ ಕಡೆಯ ನಿಮಿಷದಲ್ಲಿ ಸದನಕ್ಕೆ ಗೈರು ಹಾಜರಾದರೆ, ವಿರೋಧ ಪಕ್ಷ ಇಂಥ ಸಂಖ್ಯೆಯಲ್ಲಿದ್ದು ಗಲಾಟೆ ಮಾಡುತ್ತಿದ್ದರೆ ಹೇಗೆ ಮಾಡುವುದು ಅಥವಾ ಕಥೆ, ಕಾರಣ ಏನೂ ಇಲ್ಲದೇ ಪ್ರಚಾರಕ್ಕಾಗಿಯೇ ಎದ್ದು ನಿಲ್ಲುತ್ತೇವೆ, ಗಲಾಟೆ ಮಾಡುತ್ತೇವೆ ಎಂದು ಹೇಳತಕ್ಕಂಥದ್ದು, ಪ್ರಶ್ನೋತ್ತರವನ್ನೇ ತಡೆ ಹಿಡಿಯಿರಿ ಎಂದು ಹೇಳಿ ಅವರು ಎದ್ದು ನಿಂತುಕೊಂಡರೆ ಅಧ್ಯಕ್ಷರು ಆಗ ಮಾತನಾಡದಿದ್ದರೆ ಹೇಗೆ ಈ ಸದನ ನಡೆಯಬೇಕು? ಸದನದಲ್ಲಿರತಕ್ಕಂಥ ಎಲ್ಲರೂ ತಮ್ಮ ತಮ್ಮ ಜವಾಬ್ದಾರಿಯನ್ನು ಜವಾಬ್ದಾರಿಯುತವಾಗಿ ನಿರ್ವಹಣೆ ಮಾಡಿದಾಗ ಸಭಾಧ್ಯಕ್ಷರಿಗೆ ಕೆಲಸ ಬಹಳ ಸುಲಭವಾಗುತ್ತದೆ. ನಾವು ಪ್ರಶ್ನೋತ್ತರವನ್ನು ತೆಗೆದುಕೊಳ್ಳುತ್ತೇವೆ. ಒಂದು ಸಾರ್ವಜನಿಕ ಮಹತ್ವದ ಪ್ರಶ್ನೆ ಇದ್ದಾಗ ಸ್ವಲ್ಪ ಹೆಚ್ಚು ಸಮಯ ತೆಗೆದುಕೊಳ್ಳುತ್ತದೆ. ಒಂದು ಗಂಟೆಯೊಳಗಾಗಿ ನಾವು ಪ್ರಶ್ನೋತ್ತರವನ್ನು ಮುಗಿಸಬೇಕು. ಸಾರ್ವಜನಿಕ ಮಹತ್ವದ ವಿಷಯಕ್ಕೆ ಎಷ್ಟು ಪ್ರಾಧಾನ್ಯತೆಯನ್ನು ಕೊಡುತ್ತೇವೆ, ಒಂದು ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿರ ತಕ್ಕಂಥ ಪ್ರಶ್ನೆಗೆ ಎಷ್ಟು ಸಮಯ ಕೊಡುತ್ತೇವೆ ಎನ್ನತಕ್ಕಂಥದ್ದರ ಬಗ್ಗೆ ವಿವೇಚನೆ ಇಟ್ಟುಕೊಂಡು ನಾವು ಕೆಲಸ ಮಾಡುತ್ತಿದ್ದರೂ ಕೂಡ ಉತ್ತರ ಕೊಡತಕ್ಕಂಥವರು ಕೆಲವು ಬಾರಿ ಅಸಮರ್ಪಕವಾಗಿ ಉತ್ತರವನ್ನು ಕೊಡುತ್ತಾರೆ, ಕೆಲವು ಬಾರಿ ತಮ್ಮ ಪಾಂಡಿತ್ಯ ಪ್ರದರ್ಶನಕ್ಕಾಗಿ ಗಂಟೆಗಳಗಟ್ಟಲೆ ಮಾತನಾಡುತ್ತಾರೆ. ಹೇಳುವ ಹಾಗಿಲ್ಲ ಅಧ್ಯಕ್ಷರು. ಈ ಎಲ್ಲವನ್ನೂ ಅಡ್ಜೆಸ್ಟ್ ಮಾಡಿಕೊಳ್ಳಬೇಕು. ನಮ್ಮೆಲ್ಲರಿಗಿಂತ ಮುಖ್ಯವಾಗಿ ಅಲ್ಲಿ ಕುಳಿತಿದ್ದಾರಲ್ಲಾ ಮಾಧ್ಯಮದವರು ಅವರ ಜೊತೆ ನೀವು ಒಳ್ಳೆಯ ಸಂಪರ್ಕ ಇಟ್ಟುಕೊಳ್ಳಬೇಕು. ಅವರು ಬಹಳ ಮುಖ್ಯ. ಬಹಳ ಹೊತ್ತಾಯಿತು ಎಂದರೆ ನಾವು ಇರುವುದಕ್ಕಾಗುವುದಿಲ್ಲ, editions ಗೆ ತೊಂದರೆಯಾಗುತ್ತದೆ ಎಂದು ಹೇಳುತ್ತಾರೆ. ಇವರು ಮೊದಲನೆಯ ಬೆಂಚ್‌ನಲ್ಲಿರುವವರು ಏನು ಹೇಳುತ್ತಾರೆಂದರೆ ಪೇಪರ್‌ನವರು ಯಾರೂ ಇಲ್ಲ, ಆದ್ದರಿಂದ ನಾವು ಮಾತನಾಡುವುದಿಲ್ಲ, ನಮ್ಮ ಹೆಸರನ್ನು ನಾಳೆಗೆ ಹಾಕಿ ಎಂದು ಹೇಳುತ್ತಾರೆ. ಮುಖಂಡರು ಎದ್ದು ಮಾತನಾಡುವಾಗ ಅವರಿಗೆ ಮೂವತ್ತು ನಿಮಿಷ ಟೈಂ ಕೊಟ್ಟಿರುತ್ತೇವೆ ಆದರೆ ಅವರು ಒಂದೂವರೆ ಗಂಟೆಗಳ ಕಾಲ ಮಾತನಾಡುತ್ತಾರೆ. ಎಲ್ಲೋ ಒಂದು ಕಡೆಗೆ ನಿಮ್ಮ ಕೆಲಸ ಈ ಕ್ಷಣದಿಂದ ಏನು ಎಂದರೆ ಪ್ರತಿ ಕ್ಷಣ ಜೀವನದಲ್ಲಿ ರಾಜಿ ಮಾಡಿಕೊಳ್ಳುವುದು, ಸಿಟ್ಟು ನುಂಗುವುದು, ಆವೇಶವನ್ನು ಪಕ್ಕಕ್ಕೆ ಇಡುವುದು, ನಗು ಬರದೇ ಇದ್ದರೂ ನಗುವುದು, ಎಲ್ಲರನ್ನೂ ಅಡ್ಜೆಸ್ಟ್ ಮಾಡಿಕೊಳ್ಳತಕ್ಕಂಥದ್ದು. ವಾಟಾಳ್ ನಾಗರಾಜ್, ಇತರರು ಎಲ್ಲರೂ ಇದ್ದಾರೆ. ಬಹಳ ಒಳ್ಳೆಯವರು. ಮಾತನಾಡುತ್ತಾ, ಮಾತನಾಡುತ್ತಾ ಸಂಘರ್ಷ ಹಾಗೇ ಹೀಗೆ ಏನೇನೋ ಆಗುತ್ತದೆ, ಆದರೆ ಏನೂ ಆಗುವುದಿಲ್ಲ. ನಾನು ಇದ್ದೇನೆ. ಕೆಲವು ಗುಟ್ಟುಗಳಿವೆ. ಅವನ್ನೆಲ್ಲಾ ತಮಗೆ ಹೇಳಿಕೊಡುತ್ತೇನೆ. ಎಲ್ಲವೂ ಸರಿಹೋಗುತ್ತದೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ, ಇದು ಯಾರಿಗೆ ಸಂಬಂಧಿಸಿದ ಗುಟ್ಟು. ಯಾರಯಾರ ಗುಟ್ಟು ಎಂಬುದನ್ನು ಬಹಿರಂಗವಾಗಿ ಹೇಳಬೇಕು. ಇದು ಸರಿ ಇಲ್ಲ. ಅಧ್ಯಕ್ಷರೆ, ನಮ್ಮ ರಕ್ಷಣೆಗೆ ದಯವಿಟ್ಟು ತಾವು ಬರಬೇಕು. ದಯಮಾಡಿ ರಕ್ಷಣೆ ಕೊಡಬೇಕು.

ಅಂಥ ಗುಟ್ಟು ಏನು? ಗುಟ್ಟಾದ ವಿಚಾರ ಇಲ್ಲಿಯೇ ಬಹಿರಂಗವಾಗಲಿ. ಈಗ ನೋಡಿ. ನನ್ನ ಮೇಲೆ ಏನೋ ಒಂದು ಕಪ್ಪು ಚುಕ್ಕೆ ಆಯಿತು. ಗುಟ್ಟಾದ ವಿಚಾರವನ್ನು ತಮಗೆ ಹೇಳುತ್ತೇನೆ ಎಂದು ಅವರು ಹೇಳಿಬಿಟ್ಟರು. ದಯಮಾಡಿ ಆ ಗುಟ್ಟು ಏನು ಎಂದು ಬಹಿರಂಗ ಮಾಡಬೇಕು. ಅವರ ಗುಟ್ಟು ಏನು ಎಂದು ನನಗೂ ಗೊತ್ತು. ನಾನೂ ಹೇಳುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ವಾಟಾಳ್ ನಾಗರಾಜ್‌ರವರಿಗೆ ಸಂಬಂಧಿಸಿದಂತೆ ಗುಟ್ಟು ಎಂದು ಅವರು ಹೇಳಲಿಲ್ಲ. ಕೆಲವರಿಗೆ ಸಂಬಂಧಿಸಿದಂತೆ ಎಂದು ಹೇಳಿದರು.

ಶ್ರೀ ಕೆ.ಆರ್. ರಮೇಶ್‌ಕುಮಾರ್:- ಈಗ ಧರ್ಮಸಿಂಗ್ ಸಾಹೇಬರಿಗೆ, ಮಾನ್ಯ ಸಿದ್ದರಾಮಯ್ಯ ನವರಿಗೆ ಈ ಸರ್ಕಾರದ ಪೂರ್ಣ ಅವಧಿಯ ಬಗ್ಗೆ ಯಾವ ಅನುಮಾನವೂ ಇಲ್ಲ. ಆತಂಕ ಇರುವುದು ವಾಟಾಳ್‌ರವರಿಗೆ. ಎಲ್ಲಿ ಚುನಾವಣೆ ಮತ್ತೆ ಬರುತ್ತದೋ, ಗ್ರಹಚಾರ ಮತ್ತೆ ಚುನಾವಣೆಗೆ ಹೋಗಬೇಕಲ್ಲಪ್ಪಾ ಎನ್ನುವ ಆತಂಕ ಇದೆ. ಆದರೆ ಅವರ ಜಾಣತನ ಎಲ್ಲಿ ಎಂದರೆ ನಮ್ಮ ವಿಶ್ವಾಸಿಗಳಂತೆ, ಶ್ರೇಯೋಭಿಲಾಕ್ಷಿಗಳಂತೆ ನೀವು ಬನ್ನಿಯಪ್ಪಾ ಹೋಗಬೇಡಿಯೆಂದು ಹೇಳುತ್ತಾರೆ. ನಾವು ಬದ್ಧರಾದರೆ ಅವರೂ ಬದ್ಧರಾಗಿರುತ್ತರೆ, ಇಷ್ಟೆ. ಇದಕ್ಕಿಂತ ಹೆಚ್ಚು ನಾನೇನೂ ಹೇಳುವುದಿಲ್ಲ. ತಾವು ಬುದ್ಧಿವಂತರಿದ್ದೀರಿ. ತಮಗೆ ಈಗಾಗಲೇ ಎಲ್ಲವೂ ಅರ್ಥವಾಗಿದೆ. ರಾಜಕೀಯ ಪಕ್ಷಗಳ ಶಾಸನ ಸಭೆಗಳಿಗೆ ಅಭ್ಯರ್ಥಿಗಳನ್ನಾಗಿ ಸೂಚನೆ ಮಾಡುವ ಮೊದಲು ತಮ್ಮ ಪಕ್ಷದ ಕಾರ್ಯಕರ್ತರನ್ನು ಶಾಸನ ಸಭೆಗಳಲ್ಲಿ ಆಯ್ಕೆಯಾಗಿ ಬಂದರೆ ಹೇಗೆ ವರ್ತಿಸಬೇಕು ಎನ್ನುವುದಕ್ಕೆ ತಯಾರಿ ಕೊಟ್ಟಿರುವುದಿಲ್ಲ. ಅವರು ಅನೇಕ ಕಾರಣಗಳಿಂದ ಆರಿಸಿ ಬರುತ್ತಾರೆ. ಅವರಿಗೆ ಎಲ್ಲಾ ರೀತಿಯಲ್ಲೂ ತಯಾರಿ ಮಾಡತಕ್ಕಂಥ ತಮ್ಮ ಮೇಲೆ ಇರುತ್ತದೆ. ಆನೇಕ ಜನರು ಹೊಸಬರು ಬಂದಿದ್ದಾರೆ. ಯಾವ ಯಾವ ಮೂಲೆಯಲ್ಲಿ ಎಲ್ಲೆಲ್ಲಿ ಯಾವ ಯಾವ ಪ್ರತಿಭೆ ಅಡಗಿದೆಯೋ ನಮಗೆ ಗೊತ್ತಿಲ್ಲ. ಹೊಸಬರಿಗೆ ಹೆಚ್ಚು ಅವಕಾಶವನ್ನು ಮಾತನಾಡಲು ನಾವು ಕೊಡುವುದರಿಂದ ರಾಜ್ಯದ ಸಂಸದೀಯ ಚಟುವಟಿಕೆಗಳಿಗೆ ಹೆಚ್ಚು ಸೇವೆಯನ್ನು ಸಲ್ಲಿಸಿದಂತೆ ಆಗುತ್ತದೆ ಎನ್ನುವುದು ನನ್ನ ಅಭಿಪ್ರಾಯ. ತಾವು ಸಾಕಷ್ಟು ಅನುಭವಿಗಳಿದ್ದೀರಿ. ಈ ಸದನ ಆಯ್ಕೆಯಾಗಿ ಹೊರಗಿರತಕ್ಕಂಥ ಜನರ ಆಸೆ ಆಕಾಂಕ್ಷೆಗಳನ್ನು ಪ್ರತಿಬಿಂಬಿಸತಕ್ಕಂಥ ಒಂದು ಮನೆ ಇದಾಗಿದೆ. ಇದರ ಕಲಾಪ ಅತ್ಯಂತ ಗಂಭೀರವಾಗಿ ಮತ್ತು ಘನತೆವೆತ್ತ ರೀತಿಯಲ್ಲಿ ನಡೆದುಕೊಂಡು ಹೋಗಬೇಕು. ನಮ್ಮನ್ನು ಒಳಗೆ ಕಳುಹಿಸಿ ಹೊರಗೇ ಉಳಿದಿರತಕ್ಕಂಥವರು ಇಂಥವರನ್ನು ಒಳಗೆ ಕಳುಹಿಸಿದೆವಲ್ಲಾ ಎಂದು ಹೇಳುವಂಥ, ಪಶ್ಚಾತ್ತಾಪ ಪಡತಕ್ಕಂಥ, ನಾಚಿಕೆ ಪಡತಕ್ಕಂಥ ಸನ್ನಿವೇಶವನ್ನು ನಾವು ಯಾರೂ ಕೂಡ ಯಾವುದೇ ಸನ್ನಿವೇಶದಲ್ಲಿ ಉದ್ಭವ ಮಾಡಕೂಡದು. ಆ ಮುಖೇನ ನಾವು ಪ್ರಜಾಪ್ರಭುತ್ವದ ಬುನಾದಿಯನ್ನು ಭದ್ರ ಪಡಿಸುತ್ತೇವೆ. ಇವರು ಸಮ್ಮಿಶ್ರ ಸರ್ಕಾರದ ಪ್ರಯೋಗವನ್ನು ಮಾಡುತ್ತಿದ್ದಾರೆ. ವೈಚಾರಿಕವಾಗಿ ಒಂದಾಗಿದ್ದಾರೆ. ನೀವು 101 ಸಂಖ್ಯೆಯಲ್ಲಿದ್ದೀರಿ. ವೈಚಾರಿಕವಾಗಿ ನೀವು ಒಂದಾಗಿಲ್ಲ. ವೈಚಾರಿಕವಾಗಿ ಬಿನ್ನಾಭಿಪ್ರಾಯಗಳಿರತಕ್ಕಂಥ ಹೆಚ್ಚು ಸಂಖ್ಯಾಬಲವುಳ್ಳವಂಥ ವಿರೋಧ ಪಕ್ಷ. ವೈಚಾರಿಕವಾಗಿ ಸಹಮತ ಇರತಕ್ಕಂಥ ಸಮ್ಮಿಶ್ರ ಸರ್ಕಾರದ ಪ್ರಯೋಗವನ್ನು ಮಾಡತಕ್ಕಂಥ ಅನುಭವಿಗಳ ತಂಡ ಈ ಕಡೆಗಿದೆ. ಬಹುಶಃ ಕರ್ನಾಟಕ ರಾಜ್ಯದ ರಾಜಕೀಯ ಇತಿಹಾಸದಲ್ಲಿ ಈ ಸದನ ಮಹತ್ವದ ಪಾತ್ರವನ್ನು ನಿರ್ವಹಿಸಲಿದೆ ಎನ್ನತಕ್ಕಂಥ ವಿಶ್ವಾಸವನ್ನು ಹೊಂದಿ ತಮ್ಮ ಅಧ್ಯಕ್ಷ ಅವಧಿಯಲ್ಲಿ ತಮಗೆ ಶುಭವಾಗಲಿ.

ನಮ್ಮ ಪೂರ್ಣ ಸಹಕಾರ ತಮಗೆ ಇರುತ್ತದೆ, ರಾಜ್ಯದ ಜನತೆ ತಮ್ಮನ್ನು ಕುರಿತು, ಈ ಸದನವನ್ನು ಕುರಿತು ಹೆಮ್ಮೆ ಪಡತಕ್ಕಂಥ ರೀತಿಯಲ್ಲಿ ನಾವು ನಮ್ಮ ಪ್ರಯಾಣವನ್ನು ಸಾಗಿಸೋಣ ಎಂದು ಹೇಳಿ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದನೆಗಳನ್ನು ತಿಳಿಸುತ್ತೇನೆ.

+ಶ್ರೀ ಹೆಚ್. ಆಂಜನೇಯ (ಭರಮಸಾಗರ):– ಮಾನ್ಯ ಅಧ್ಯಕ್ಷರೆ, 12ನೇ ವಿಧಾನಸಭೆಯ ಅಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆಯಾದ ತಮ್ಮನ್ನು ಕರ್ನಾಟಕದ ಸಂಯುಕ್ತ ಜನತಾದಳದ ಪರವಾಗಿ ಹೃತ್ಪೂರ್ವಕವಾಗಿ ನಾನು ಅಭಿನಂದಿಸುತ್ತೇನೆ. ನಾವು ಈ ಸದನಕ್ಕೆ ಹೊಸದಾಗಿ ಆಯ್ಕೆಯಾಗಿ ಬಂದಿದ್ದೇವೆ. ಮಾನ್ಯ ರಮೇಶ್ ಕುಮಾರ್‌ರವರು ಹೇಳಿದಂತೆ ಈ ಸದನದ ಕಾರ್ಯಕಲಾಪಗಳ ಚರ್ಚೆಯಲ್ಲಿ ಹೊಸಬರಿಗೆ ಭಾಗವಹಿಸತಕ್ಕಂಥ ಮತ್ತು ತಿಳಿದುಕೊಳ್ಳತಕ್ಕಂಥ ಹಾಗೂ ಮಾತನಾಡುವುದಕ್ಕೆ ಹೆಚ್ಚು ಅವಕಾಶವನ್ನು ಕಲ್ಪಿಸಿ ಕೊಡುವುದರ ಮೂಲಕ, ತಮ್ಮ ಒಂದು ಅಧಿಕಾರದ ಅವಧಿಯಲ್ಲಿ ಒಂದು ಒಳ್ಳೆಯ ವಾತಾವರಣದಲ್ಲಿ ಈ ಸದನ ನಡೆಯಬೇಕು. ಇದರ ಘನತೆ ಗೌರವವನ್ನು ಎತ್ತಿಹಿಡಿಯತಕ್ಕಂಥ ಒಂದು ಜವಾಬ್ದಾರಿ ಎಲ್ಲಾ ಸದಸ್ಯರ ಮೇಲೆ ಇದೆಯೆಂದು ನಾನು ಭಾವಿಸಿದ್ದೇನೆ. ಕರ್ನಾಟಕದ ಇತಿಹಾಸದಲ್ಲಿ ಪ್ರಥಮ ಬಾರಿಗೆ ಒಂದು ಸಮ್ಮಿಶ್ರ ಸರ್ಕಾರ ಬಂದಿದೆ. ಮಾನ್ಯ ರಮೇಶ್ ಕುಮಾರ್‌ರವರು, ಈ ಕಡೆ ನಾನಾ ರೀತಿಯ ಭಿನ್ನಾಭಿಪ್ರಾಯಗಳು ಇದೆಯೆಂದು ಹೇಳಿದರು. ಖಂಡಿತಾ ಇಲ್ಲಿ ವಿರೋಧ ಪಕ್ಷದ ಮಾನ್ಯ ಯಡಿಯೂರಪ್ಪನವರ ನಾಯಕತ್ವದಲ್ಲಿ ಯಾವುದೇ ರೀತಿಯ ಭಿನ್ನಾಭಿಪ್ರಾಯಗಳು ಇಲ್ಲ. ಇಲ್ಲಿ ಒಂದು ರಚನಾತ್ಮಕವಾದಂತಹ ಕೆಲಸ ಕಾರ್ಯಗಳಲ್ಲಿ...

ಶ್ರೀ ಕೆ.ಆರ್. ರಮೇಶ್‌ಕುಮಾರ್:– ಮಾನ್ಯ ಅಧ್ಯಕ್ಷರೆ, ವೈಚಾರಿಕ ಭಿನ್ನಾಭಿಪ್ರಾಯವೆಂದು ಹೇಳಿದೆ. ಈಗ ಶ್ರೀರಾಂರೆಡ್ಡಿಯವರು ಮಾರ್ಕ್ಸಿಸ್ಟ್ ಪಕ್ಷದವರು, ರಾಜೇಂದ್ರನ್‌ರವರು ರಿಪಬ್ಲಿಕನ್ ಪಾರ್ಟಿಯವರು, ನೀವು ಸಂಯುಕ್ತ ಜನತಾ ದಳದವರು, ಅವರು ಬಿಜೆಪಿಯವರು. ಸಿಪಿಎಂನವರಿಗೂ ಬಿಜೆಪಿಯವರಿಗೂ ಏನು ಸಹಮತ ಇದೆ. ನಾನು ವೈಚಾರಿಕತೆಯ ಭಿನ್ನಾಭಿಪ್ರಾಯ ಇದೆ ಎಂದು ಹೇಳಿದೆ. ಆದರೆ ನಾನು ಮಾನ್ಯ ಯಡಿಯೂರಪ್ಪನವರ ನಾಯಕತ್ವದ ಬಗ್ಗೆ ಪ್ರಶ್ನೆ ಮಾಡಲಿಲ್ಲ.

ಶ್ರೀ ಹೆಚ್. ಆಂಜನೇಯ:– ಮಾನ್ಯ ಅಧ್ಯಕ್ಷರೆ, ಯಾವುದೇ ರೀತಿಯ ಭಿನ್ನಾಭಿಪ್ರಾಯ ಇದ್ದರೂ ಕೂಡ ನಾವು ಜನಾದೇಶದ ಪ್ರಕಾರ ರಚನಾತ್ಮಕವಾದಂತಹ ವಿರೋಧ ಪಕ್ಷವಾಗಿ ಈ ನಾಡಿನ ಜನರ ಎಲ್ಲಾ ನೋವುಗಳನ್ನು, ಅವರು ರೈತರಿರಬಹುದು, ದಲಿತರಿರಬಹುದು, ಬಡವರಿರಬಹುದು, ಎಲ್ಲರ ಸಮಸ್ಯೆಗಳನ್ನು ಸಮರ್ಥವಾಗಿ ಬಹಳ ಗಂಭೀರವಾಗಿ ಸರ್ಕಾರದ ಗಮನಕ್ಕೆ ತಂದು, ಜನರ ಆಶೋತ್ತರಗಳನ್ನು ಈಡೇರಿಸುವುದಕ್ಕೆ ಪ್ರಾಮಾಣಿಕವಾದ ಹೋರಾಟವನ್ನು ನಾವು ಮಾಡುತ್ತೇವೆ. ಮಾತನಾಡುವುದು ಇನ್ನು ಮುಂದಿನ ದಿನಗಳಲ್ಲಿ ಇದೆ. ಯಾವ ರೀತಿಯಾಗಿ ತಾವು ಚುನಾವಣೆ ನಡೆಯುವುದಕ್ಕೆ ಮೊದಲು ಇದ್ದಿರಿ, ಈಗ ಯಾವ ರೀತಿಯಾಗಿ ಒಂದಾಗಿದ್ದೀರಿ, ಮಂತ್ರಿ ಮಂಡಲವನ್ನು ಮಾಡತಕ್ಕಂಥ ಸಂದರ್ಭದಲ್ಲಿ ತಾವು ಅನುಭವಿಸಿದಂತಹ ನೋವುಗಳನ್ನು ನಾವು ಬಹಳ ಹತ್ತಿರದಿಂದ ಹಾಗೂ ದೂರದಿಂದ ನೋಡಿದ್ದೇವೆ. ಅಂತಹ ನೋವುಗಳೂ ಕೂಡ ಯಾವುದೂ ಬರದೆ ತಾವೂ ಕೂಡ ಒಗ್ಗಟ್ಟಿನಿಂದ ಇದ್ದು ಈ ನಾಡಿನ ಜನತೆಗೆ ಒಳ್ಳೆಯ ಸರ್ಕಾರವನ್ನು ಕೊಟ್ಟರೆ ಖಂಡಿತವಾಗಿಯೂ ಕೂಡ ಮಾನ್ಯ ಯಡಿಯೂರಪ್ಪನವರ ನೇತೃತ್ವದಲ್ಲಿ ವಿರೋಧ ಪಕ್ಷವಾಗಿ ನಾವೂ ಕೂಡ ನಿಮಗೆ ಸಹಕಾರ ಮತ್ತು ಬೆಂಬಲವನ್ನು ಕೊಡುತ್ತೇವೆ ಎನ್ನುವ ಮಾತನ್ನು ಹೇಳುತ್ತಾ

ಮತ್ತೊಂದು ವಿಚಾರ ಆಡಳಿತ ಪಕ್ಷದಿಂದ ಒಂದು ಔದಾರ್ಯವನ್ನು ಇಲ್ಲಿ ಪ್ರದರ್ಶಿಸಬೇಕಾದಂತಹ ಅಗತ್ಯ ಇದೆ. ಸತ್‌ಸಂಪ್ರದಾಯದಂತೆ ಲೋಕಸಭೆಯಲ್ಲಿ ಆಡಳಿತ ಪಕ್ಷದವರು ಸ್ಪೀಕರ್ ಸ್ಥಾನವನ್ನು ಪಡೆಯುತ್ತಾರೆ ಈಗ ಇಲ್ಲಿ ರಾಜ್ಯದಲ್ಲಿ ಎಂದೂ ಕೂಡ ಇಲ್ಲದಂತಹ ಹೆಚ್ಚಿನ ಸಂಖ್ಯೆಯಲ್ಲಿ ವಿರೋಧ ಪಕ್ಷದ ಸದಸ್ಯರು ಇರುವುದರಿಂದ ಮಾನ್ಯ ಯಡಿಯೂರಪ್ಪನವರ ವಿನಂತಿಯಂತೆ ತಾವೂ ಕೂಡ ಒಂದು ಉಪಾಧ್ಯಕ್ಷರ ಸ್ಥಾನವನ್ನು ಈ ವಿರೋಧ ಪಕ್ಷಕ್ಕೆ ಕೊಡುವುದರ ಮೂಲಕ ತಮ್ಮ ಔದಾರ್ಯವನ್ನು ಪ್ರದರ್ಶಿಸುವಂತಹ ಸಂದರ್ಭ ಕೂಡ ಬಂದಿದೆ, ಅದನ್ನು ತಾವು ಮಾಡಬೇಕೆಂದು ವಿನಂತಿ ಮಾಡುತ್ತಾ, ಮಾನ್ಯ ಅಧ್ಯಕ್ಷರ ಬಗ್ಗೆ ಎಲ್ಲರೂ ಕೂಡ ಬಹಳ ಗೌರವಾದಂತಹ ಮಾತನ್ನು ಹೇಳಿದ್ದಾರೆ. ಅವರು ಶಿಕ್ಷಕರಾಗಿ ವಕೀಲರಾಗಿ, ಒಳ್ಳೆಯ ಸಂಸದೀಯ ಪಟುವಾಗಿ ಲೋಕಸಭೆಯಲ್ಲಿ ಹಾಗೂ ವಿಧಾನಸಭೆಯಲ್ಲಿ ಕೆಲಸ ಮಾಡಿರತಕ್ಕಂಥ ಅಪಾರವಾದಂತಹ ಅನುಭವ ಇದೆ. ಅವರ ಅನುಭವವನ್ನು ನಾವೆಲ್ಲರೂ ಪಡೆದು ಇಲ್ಲಿ ಹೊಸಬರಿಗೆ ಹೆಚ್ಚಿನ ಅವಕಾಶವನ್ನು ಕಲ್ಪಿಸತಕ್ಕಂಥ ಮತ್ತು ಬಿಡುವಿನ ದಿನಗಳಲ್ಲಿ ನಮಗೆ ಒಂದು ತರಬೇತಿ ಕಾರ್ಯಕ್ರಮವನ್ನು ಏರ್ಪಡಿಸಿ ನಾವು ಯಾವ ರೀತಿ ಕಾರ್ಯಕಲಾಪಗಲ್ಲಿ ಭಾಗವಹಿಸಬೇಕು ಹಾಗೂ ಚರ್ಚೆ ಮಾಡುವುದಕ್ಕೆ ಟಿಪ್ಪಣಿ ಸಿದ್ಧಪಡಿಸುವುದಕ್ಕೆ ಸಾಧ್ಯವಾಗುವಂತಹ ಒಂದು ವ್ಯವಸ್ಥೆ ಇದ್ದರೆ ದಯವಿಟ್ಟು ನಮಗೆ ಕಲ್ಪಿಸಿಕೊಡಬೇಕೆಂದು ಹೇಳಿ, ತಮ್ಮಲ್ಲಿ ನಾನು ವಿನಂತಿಯನ್ನು ಮಾಡಿ, ಮತ್ತೊಮ್ಮೆ ತಮಗೆ ಹೃತ್ಪೂರ್ವಕವಾಗ ಅಭಿನಂದನೆಯನ್ನು ಸಲ್ಲಿಸಿ, ಮಾನ್ಯ ಮುಖ್ಯ ಮಂತ್ರಿಗಳಿಗೂ, ಮಾನ್ಯ ಉಪ ಮುಖ್ಯಮಂತ್ರಿಯವರಿಗೂ, ಈ ಸಂದರ್ಭದಲ್ಲಿ ಅಭಿನಂದಿಸಿ ಹಾಗೂ ಮಾನ್ಯ ವಿರೋದ ಪಕ್ಷದ ನಾಯಕರಾದ ಯಡಿಯೂರಪ್ಪನವರಿಗೂ ಕೂಡ ಅಭಿನಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್:- ಮಾನ್ಯ ಸದಸ್ಯರು ಒಳ್ಳೆಯ ಸಲಹೆ ಕೊಟ್ಟಿದ್ದಾರೆ ಹೊಸದಾಗಿ ಬಂದಿರುವಂತಹ ಎಲ್ಲಾ ಸದಸ್ಯರಿಗೂ ಕೂಡ ಇಂತಹ ಒಂದು ತರಬೇತಿ ಕೊಡುವಂತಹ ಕಾರ್ಯಾಗಾರವನ್ನು ನಾವು ಮುಂದಿನ ದಿನಗಳಲ್ಲಿ ಕೊಡುತ್ತೇವೆ. ಅದರ ಸಂಪೂರ್ಣವಾದ ಲಾಭವನ್ನು ಪಡೆಯತಕ್ಕಂಥಾದ್ದು ಮಾನ್ಯ ಸದಸ್ಯರ ಮೇಲೆ ಅವಲಂಭಿತವಾಗಿದೆ.

+ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್):- ಸನ್ಮಾನ್ಯ ಸಭಾಧ್ಯಕ್ಷರೇ, ನನಗೆ ಅವಕಾಶ ಕೊಟ್ಟಿದ್ದಕ್ಕೆ ಬಹಳ ಸಂತೋಷ. We are proud on you. ಅಣ್ಣಾವರು ನನ್ನ ಮೇಲೆ ಕೋಪ ಮಾಡಿಕೊಳ್ಳಬೇಡಿ. (ಮಾನ್ಯ ವಾಟಾಳ್ ನಾಗರಾಜ್‌ರವರನ್ನು ಉದ್ದೇಶಿಸಿ). This august House ಹೇಗಿದೆ ಎಂದರೆ ಒಂದು aeroplane ತರಹ. Aeroplane ನಲ್ಲಿ ಇಬ್ಬರು ಇದ್ದಾರೆ. ಒಂದು pilot ಒಂದು co-pilot. Speaker will be the pilot, Deputy Speaker will be co-pilot. All your sub-ordinates are crew members. We are passengers. The aircraft owner is Chief Minister of this House and Deputy Chief Minister of this House. Aircraft should take off high and land smoothly; then passengers will be safe. ಅದಕ್ಕೆ ತಮ್ಮ ಆಶೀರ್ವಾದ Houseನಲ್ಲಿ ಇರಬೇಕು. If the aircraft does not take off properly, passengers will not get into the aircraft. They will change the aircraft.

+**Sri K. Srinivasa Gowda (Koduvanahalli):-** If there is turbulent weather?

Sri S. Rajendran:- Yes of course, it is a true fact. We are all flying in all aircrafts. ಡಿಲ್ ಆಗುತ್ತಿದ್ದ ಎಂದು ತಿಳಿದು ಬಂದರೆ aircraft ನಲ್ಲಿ ಹೋಗುತ್ತಾರೆ. Flight ನಲ್ಲಿ machines, operations ಸರಿಯಾಗಿ ಇಲ್ಲ ಎಂದರೆ ಬೇರೆ flight choose ಮಾಡುತ್ತಾರೆ. ಆ ತರಹ aircraft ಇರಬಾರದು. ಒಳ್ಳೆ aircraft ಇರಬೇಕೆಂದರೆ, it is in your hands. The way...

Sri K. Srinivasa Gowda (Koduvanahalli):- If there is turbulent weather.

Sri S. Rajendran:- Even the weather conditions change, we go to that zero weather condition, the flight will go there also. It depends on the pilot. But here, in this House Speaker's role is very important. Our former Speaker Mr. Ramesh Kumar was there in the same seat. He was not only a Speaker; he was a teacher to us. ಟೀಕೆ ಮಾಡುವುದಿಲ್ಲ ನಮ್ಮನ್ನ. ಅಯ್ಯೋ ಇವರಿಗೆ ಮಾತನಾಡುವುದಕ್ಕೆ ಬರುವುದಿಲ್ಲ. ಹೊಸಬ ಎಂದು. He used to encourage us. He used to give more opportunity to us regularly. He won'g see the partiality of which majority party candidate, which is this person, how many members, ಎಲ್ಲಾ ನೋಡುವುದೇ ಇಲ್ಲ. ನನಗೆ ಬಹಳ ಅವಕಾಶ ಕೊಟ್ಟಿದ್ದಕ್ಕೋಸ್ಕರ ಈಗ ಈ ಸದನದಲ್ಲಿ ಮಾತನಾಡಲು ನನಗೆ. ಸ್ವಲ್ಪ ಧೈರ್ಯ ಬಂದಿದೆ. ಅಂತ ಸಂದರ್ಭ ಹೊಸಬರಿಗೆ, including me, senior list ನಲ್ಲಿ ಬರಬೇಕಾದರೆ ನಾನು ಅಣ್ಣಾವರ ತರಹ ಬರಬೇಕು. ಆದರೆ ಅದು ಸಾಧ್ಯವೇ ಇಲ್ಲ ಎಂದು ಕಾಣಿಸುತ್ತದೆ. ನಿಮ್ಮ ತರಹ ಆಗುವುದಕ್ಕೆ ಇನ್ನೂ ಎಷ್ಟೋ ವರ್ಷಗಳು ಆಗಬೇಕು. There are scholars in this House, intellectuals in this House, bureaucrats in this House, media and responsible personalities are there. Today everybody in Karnataka is watching how the new Government that is joined together is functioning. Of oourse, I am a small politician. Not a senior most. ನಾವು ಒಳಗಡೆ ಬರುವಾಗ ಇನ್ನೂ ಒಂದು ವರ್ಷ ಇರುತ್ತೆ, ಆರು ತಿಂಗಳು ಇರುತ್ತೆ, We are not bothering of that. Even a month we must prove that coalition Government is the best Government though out India. That is the opportunity for this State. Keeping this in your mind, we are doing our services in our constituency. Today you are Speaker. A Speaker should speak less and listen more. Then only we can bring our problem in this House. Schedule caste,

schedule tribe, minority, backward classes, lot of socio-economic development is less in this State. All these things have to be projected in this House, to make improvement of my constituency and others' constituency. We must be a model in this Country and you should co-operate. I pray to your good health on behalf of me and my Republican Party of India. Thank you for giving this opportunity. Thank you very much.

1.30 ಪಿಎಂ

+ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ (ಕೃಷಿ ಮತ್ತು ತೋಟಗಾರಿಕೆ ಸಚಿವರು):- ಮಾನ್ಯ ಅಧ್ಯಕ್ಷರೆ, ತಾವು ಸರ್ವಾನುಮತದಿಂದ ಸಭಾಧ್ಯಕ್ಷರಾಗಿ ಆಯ್ಕೆಯಾಗಿದ್ದು ನಿಜವಾಗಿಯೂ ಸಂತೋಷಕರವಾದ ವಿಷಯ. ನಿಮಗೆ ಎಲ್ಲಾ ವಿಧದಲ್ಲೂ ಅನುಭವವಿರುವಂಥಾದ್ದನ್ನು, ಹಿಂದೆ ಮಾತನಾಡಿದಂತಹ ಎಲ್ಲರೂ ಹೇಳಿದ್ದಾರೆ, ಹಾಗೆಯೇ ಕೃಷ್ಣ ಎನ್ನುವುದಕ್ಕೂ ಮಂಡ್ಯ ಜಿಲ್ಲೆಗೂ ಲಿಂಕ್ ಇದ್ದ ಹಾಗೆ ಇದೆ, ಹೋದ ಸಾರಿ ಮಾನ್ಯ ಎಸ್.ಎಂ. ಕೃಷ್ಣರವರು ಮುಖ್ಯ ಮಂತ್ರಿಗಳಾಗಿದ್ದರು, ಈಗ ಈ ಕೃಷ್ಣರವರು ಸಭಾಧ್ಯಕ್ಷರಾಗಿ ಬಂದಿದ್ದಾರೆ, ಇದು ಮಂಡ್ಯದ ಕೃಷ್ಣನ ಅವತಾರವೋ, ಏನೋ ನನಗೆ ಗೊತ್ತಿಲ್ಲ. ಹಿಂದೆ ಎರಡು ಟರ್ಮ್‌ನಲ್ಲೂ ಕೂಡ ನಮ್ಮ ಜಿಲ್ಲೆಯವರಾಗಿದ್ದ ಮಾನ್ಯ ರಮೇಶ್ ಕುಮಾರ್‌ರವರು ಮತ್ತು ಎಂ.ವಿ. ವೆಂಕಪಟ್ಟನವರು ಸಭಾಧ್ಯಕ್ಷರಾಗಿದ್ದರು. ನಾನು ಮಾನ್ಯ ರಮೇಶ್ ಕುಮಾರ್‌ರವರು ಅಧ್ಯಕ್ಷರಾಗಿದ್ದಾಗಲೂ ಇದ್ದೆ, ಮಾನ್ಯ ವೆಂಕಟಪ್ಪನವರು ಅಧ್ಯಕ್ಷರಾಗಿದ್ದಾಗ ವಿರೋಧ ಪಕ್ಷದಲ್ಲಿ ಇದ್ದೆ, ನಾವು ಯಾರಾದರೂ ಮಾತನಾಡುವವರು ಇದ್ದರೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು, ಅಧ್ಯಕ್ಷರನ್ನು ನೀವು ಕೋಲಾರ ಜಿಲ್ಲೆಯವರಿಗೆ ಮಾತನಾಡಲು ಖರ್ಗೆಯವರು, ಅಧ್ಯಕ್ಷರನ್ನು ನೀವು ಕೋಲಾರ ಜಿಲ್ಲೆಯವರಿಗೆ ಮಾತನಾಡಲು ಅವಕಾಶವನ್ನು ಕೊಡುತ್ತೀರಿ, ಎಂದು ಹೇಳುತ್ತಿದ್ದರು. ಮತ್ತೆ ಮಾನ್ಯ ಮುಖ್ಯಮಂತ್ರಿಯವರು ಮಾನ್ಯ ಸಿ. ಬೈರೆಗೌಡರು, ತೀರಿಕೊಂಡ ಸಂದರ್ಭದಲ್ಲಿ, ಇದೇ ವಿಚಾರವನ್ನು ಸ್ಪಷ್ಟವಾಗಿ ಹೇಳಿದರು, ನೀವು ಕೋಲಾರದವರಿಗೆ ಹೆಚ್ಚಿಗೆ ಮಾತನಾಡಲು ಅವಕಾಶವನ್ನು ಕೊಡುತ್ತಿದ್ದೀರಿ, ಎಂದು ಹೇಳಿದರು. ಇಲ್ಲಿ ನಾವು ಹೆಚ್ಚಿಗೆ ಮಾತನಾಡುವ ವಿಷಯಗಳು ಇದ್ದದ್ದರಿಂದ ಅಧ್ಯಕ್ಷರು ನಮಗೆ ಮಾತನಾಡಲು ಅವಕಾಶವನ್ನು ಕೊಡುತ್ತಿದ್ದರೇ, ವಿನಹ ನಾವು ಕೋಲಾರದವರು ಎಂದು ಅಲ್ಲ, ನಾಳೆ ಯಾರಾದರೂ ಮಂಡ್ಯದವರು ಮಾತನಾಡುವವರು ಇದ್ದರೆ, ತಾವು ದಯಮಾಡಿ ಅವರಿಗೆ ಮಾತನಾಡಲು ಅವಕಾಶವನ್ನು ಕೊಡಬೇಕೆಂದು ಹೇಳುತ್ತಿದ್ದೇನೆ, ಏಕೆಂದರೆ ನನಗೆ ಆದಂತಹ ಅನುಭವದಿಂದ ತಮ್ಮಲ್ಲಿ ನಾನು ಪ್ರಾರ್ಥನೆ ಮಾಡಲಿಚ್ಚಿಸುತ್ತೇನೆ. ಇವತ್ತು ಸಮ್ಮಿಶ್ರ ಸರ್ಕಾರವನ್ನು ಮಾನ್ಯ ಧರ್ಮಸಿಂಗ್‌ರವರು ಮತ್ತು ಮಾನ್ಯ ಸಿದ್ಧರಾಮಯ್ಯನವರು ನಡೆಸಬೇಕು, ಅದು ಕಷ್ಟವೂ ಇದೆ. ಅದೇ ರೀತಿಯಲ್ಲಿ ತಾವೂ ಸಹ ಈ ಸದನವನ್ನು ನಡೆಸಬೇಕು, ಅದು ಸಹ ಕಷ್ಟ ಇದೆ. ಇವತ್ತು ಈ ಸಭಾಧ್ಯಕ್ಷರ ಪೀಠ ಸುಪ್ಪತ್ತಿನ ಕುರ್ಚಿ ಏನೂ ಅಲ್ಲ, ಮುಳ್ಳಿನ ಕುರ್ಚಿ ಎಂದು ನಾನು ಭಾವಿಸುತ್ತೇನೆ, ಈ ವಿಚಾರವಾಗಿ ಆಗಲೇ ಮಾತನಾಡಿದಂತಹವರು ನೂರೊಂದು ಜನರು ವಿರೋಧಪಕ್ಷದಲ್ಲಿದ್ದು, ನೂರ ಇಪ್ಪತ್ತ

ಮೂರು ಜನರು ಆಡಳಿತ ಪಕ್ಷದಲ್ಲಿ ಇರುವುದರಿಂದ ಇದು ತಮಗೆ ಕಷ್ಟದ ಕೆಲಸವೇ, ಆದರೂ ಕೆಲವು ಸಿದ್ಧಾಂತಗಳ ಹಿನ್ನಲೆಯಲ್ಲಿ ಇವತ್ತು ಕಾಂಗ್ರೆಸ್ ಪಕ್ಷ ಮತ್ತು ಜನತಾ ದಳ (ಎಸ್) ಒಂದಾಗಿ ಸರ್ಕಾರವನ್ನು ರಚನೆ ಮಾಡಿದೆ. ಆ ಸಿದ್ಧಾಂತಗಳ ಬಗ್ಗೆ ಮಾನ್ಯ ರಮೇಶ್ ಕುಮಾರ್ ರವರು ಮಾತನಾಡುವ ಸಂದರ್ಭದಲ್ಲಿ ಒತ್ತಿ ಹೇಳಿದರು. ಆ ಸಿದ್ಧಾಂತಗಳು ಇವತ್ತು ಇಲ್ಲದೇ ಇರುವುದರಿಂದ, ಮಾನ್ಯ ವಾಟಾಳ್ ನಾಗರಾಜ್‌ರವರು ಮಾತನಾಡುವಂತಹ ಸಂದರ್ಭದಲ್ಲಿ ನಾವೇ ಪಾಂಡವರು, ಅವರೇ ಕೌರವರು ಎಂದು ಹೇಳಿದರು, ಅವರಲ್ಲೇ ಒಬ್ಬರು ಶಕುನಿಯೂ ಇರುತ್ತಾರೆ. ಅದು ಬಿಟ್ಟು, ಇಲ್ಲಿ ನಾವು ಪಾಂಡವರು, ಕೌರವರಲ್ಲ, ಏಕೆಂದರೆ ಇಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ತಿಳಿದುಕೊಳ್ಳಬೇಕು. ಕೌರವರು ದುರ್ಯೋಧನ ಹಠದಿಂದ ಹಾಳಾದನು, ಬೇರೆಯಿಂದಲ್ಲ, ಒಂದು ಪ್ರಸಂಗದಲ್ಲಿ ದುರ್ಯೋಧನ ವೈಶಾಪಾಯನ ಸರೋವರದಲ್ಲಿ ಅವತುಕೊಂಡಾಗ ಭೀಮನ ಮಾತುಗಳನ್ನು ಕೇಳಿದಂತಹ ದುರ್ಯೋದನ ಹೀಗೆ ಹೇಳುತ್ತಾರೆ. "ನೀರೋಳಗಿರ್ದಂ ಬೆವರ್ತಂ ಉರಗ ಪತಾಕಂ" ಮನುಷ್ಯನಿಗೆ ಅಂಥ ತಣ್ಣನೆಯ ನೀರಿನಲ್ಲಿ ಇರುವಾಗಲೂ ಬೆವರು ಬರುತ್ತದೆಂದರೆ ಇಲ್ಲಿ ಅವನ ಹಠದಿಂದ ಹಾಳಾದನೇ, ವಿನಃ ಬೇರೆ ಯಾವುದಾದರಿಂದಲೂ ಅಲ್ಲ, ಎನ್ನುವುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಇವತ್ತು ಈ ಸಂಪ್ರದಾಯದಲ್ಲಿ ಮಾನ್ಯ ವೈಕುಂಠ ಬಾಳಿಗರವರನ್ನು ಎಲ್ಲರೂ ನೆನಪಿಸಿಕೊಳ್ಳುತ್ತಾರೆ, ಈ ಸದನದಲ್ಲಿ ಅನೇಕ ಮಂದಿ ಸಭಾಧ್ಯಕ್ಷರುಗಳಾಗಿ ಹೋಗಿದ್ದಾರೆ, ಮಾನ್ಯ ಎಸ್.ಎಂ. ಕೃಷ್ಣರವರು ಇರಬಹುದು, ಮಾನ್ಯ ಡಿ.ಬಿ. ಚಂದ್ರೇಗೌಡರು ಇರಬಹುದು, ಮಾನ್ಯ ರಮೇಶ್ ಕುಮಾರ್ ಮತ್ತು ಶ್ರೀಮತಿ ನಾಗರತ್ನಮ್ಮನವರು ಇರಬಹುದು, ಮಾನ್ಯ ಎಂ.ವಿ. ವೆಂಕಪಟ್ಟನವರು ಇರಬಹುದು, ಈಗ ತಾವು ಈ ಅಧ್ಯಕ್ಷರ ಪೀಠಕ್ಕೆ ಬಂದಿದ್ದೀರಿ, ಈ ಸದನದ ಸಂಪ್ರದಾಯವನ್ನು ಎತ್ತಿ ಹಿಡಿಯುವಂಥಾದ್ದು, ತಮ್ಮ ಮತ್ತು ನಮ್ಮೆಲ್ಲರ ಕರ್ತವ್ಯವಾಗಿದೆ, ಬೇರೆ ವಿಧಾನಗಳಲ್ಲಿ ಚೇರ್‌ಗಳನ್ನು, ಮೈಕ್‌ಗಳನ್ನು, ಹಿಡಿದುಕೊಂಡು ಗಲಾಟೆ ಮಾಡುವಂಥಾದ್ದನ್ನು ನಾವು ಪ್ರತಿವರ್ಷವೂ ನೋಡುತ್ತಿದ್ದೇವೆ, ಆದರೆ ಆ ರೀತಿಯಲ್ಲಿ ಎಂದೂ ಕೂಡ ಈ ವಿಧಾನಸಭೆಯಲ್ಲಿ ಆಗಿಲ್ಲ. ಇದು ಈ ಕರ್ನಾಟಕ ರಾಜ್ಯದ ಕಿರೀಟ, ಕೀರ್ತಿ, ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತು ಈ ಸಮ್ಮಿಶ್ರ ಸರ್ಕಾರವನ್ನು, ನಡೆಸುತ್ತಿದ್ದೇವೆ, ಇಲ್ಲಿ ವಿರೋಧ ಪಕ್ಷದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರಿರುವುದರಿಂದ ಇಲ್ಲಿ ನಿಮ್ಮ ತಾಳ್ಮೆ ಏನು ಇದೆ, ಅದೇ ಉತ್ತರವಿನಹ, ನಿಮ್ಮ ಮಾತು ಉತ್ತರ ಅಲ್ಲ, ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಹಿಂದೆ ನಿಮ್ಮ ಜೊತೆಯಲ್ಲಿ ಕೆಲಸ ಮಾಡಿದಂತಹ ಮಾನ್ಯ ಲಿಂಗಪ್ಪನವರು, ಅವರು ಗಾಂಧಿವಾದಿಗಳಾಗಿದ್ದಂತಹವರು ಅವರು ಶಾಸಕರಾಗಿದ್ದಂತಹ ಸಂದರ್ಭದಲ್ಲಿ ಅವರ ಜೊತೆಯಲ್ಲಿ ಕೆಲಸ ಮಾಡುವಂತಹ ಅವಕಾಶ ಸಿಕ್ಕಿದ್ದಾಗ ರಾಜ್ಯ ಸಹಕಾರ ಮಹಾ ಮಂಡಳಿದಲ್ಲಿ ನಾನು ಮತ್ತು ಮಾನ್ಯ ಗುರುಪಾದಪ್ಪನವರು ಕೆಲಸ ಮಾಡಿದೆವು. ಅವರು ತೀರಿಕೊಂಡ ಸಂದರ್ಭದಲ್ಲಿ, ಸಹಕಾರ ಸಂಘದ ಬಳಿ ಸುಡುವ ಸನ್ನಿವೇಶವನ್ನು ನೋಡಿ, ನನಗೆ ಆಶ್ಚರ್ಯವಾಗಿತ್ತು, ಅವರು ಬೆಳೆಸಿಕೊಂಡು ಬಂದಂತಹ ಕೆ.ಆರ್. ಪೇಟೆ, ಕ್ಷೇತ್ರದಲ್ಲಿ, ಅವರ ನಂತರ ನೀವು ಅದನ್ನು ಬೆಳೆಸಿಕೊಂಡು ಬಂದಿದ್ದೀರಿ, ಎನ್ನುವ ಮಾತನ್ನು ಹೇಳಿ, ನಾನು ಮತ್ತೊಮ್ಮೆ ತಮಗೆ ಶುಭವನ್ನು ಕೋರುತ್ತಾ, ಇವತ್ತು ಈ ಸದನವನ್ನು ನಡೆಸಿಕೊಂಡು ಹೋಗುವಂತಹ ಜವಾಬ್ದಾರಿ ಏನು ತಮ್ಮ ಮೇಲೆ ಇದೆ, ಅದನ್ನು ತಾವು ನಡೆಸಿಕೊಂಡು ಹೋಗುತ್ತೀರಿ, ನಿಮ್ಮಲ್ಲಿ ಇರುವಂತಹ

ಸೌಮ್ಯ ಸ್ವಭಾವವೇ, ಇದಕ್ಕೆ ಉತ್ತರವಾಗುತ್ತದೆಂಬ ಮಾತನ್ನು ಹೇಳಿ, ತಮಗೆ ನಾನು ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಹೆಚ್.ಎಸ್. ಮಹದೇವ್ ಪ್ರಸಾದ್ (ಗುಂಡ್ಲುಪೇಟೆ):- ಮಾನ್ಯ ಅಧ್ಯಕ್ಷರೆ, ತಾವು ಈ ಸದನದ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಕ್ಕೆ, ತಮಗೆ ಅಭಿನಂದಿಸುತ್ತೇನೆ. ತಾವು ಈ ರಾಜಕೀಯ ಕ್ಷೇತ್ರಕ್ಕೆ ಬರುವುದಕ್ಕೆ ಮುಂಚೆ ಶಿಕ್ಷಕ ವೃತ್ತಿಯಲ್ಲಿದ್ದು, ವಕೀಲರಾಗಿ, ತದನಂತರ ಸಮಾಜ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು, ಎರಡು ಬಾರಿ ಶಾಸನ ಸಭೆಯ ಸದಸ್ಯರಾಗಿ ಮಂತ್ರಿಗಳಾಗಿ ಮತ್ತೆ ಲೋಕಸಭೆಯ ಸದಸ್ಯರಾಗಿಯೂ ಸೇವೆಯನ್ನು ಸಲ್ಲಿಸಿ, ಮತ್ತೆ ಈ ಬಾರಿ ಶಾಸನ ಸಭೆಯನ್ನು ಪ್ರವೇಶಿಸುವಂತಹ ಸಂದರ್ಭದಲ್ಲಿ, ತಾವು ಈ ಉನ್ನತ ಹುದ್ದೆಯನ್ನು ಅಲಂಕರಿಸಿದ್ದೀರಿ, ಈ ಸದನದಲ್ಲಿ, ಈ ಸ್ಥಾನಕ್ಕೆ ಅತ್ಯಂತ ಯೋಗ್ಯವಾದಂತಹ ಆಯ್ಕೆ ಎಂದು ನಾನು ಭಾವಿಸುತ್ತೇನೆ. ಇಲ್ಲಿ ಸಮ್ಮಿಶ್ರ ಸರ್ಕಾರ ರಚನೆಯಾಗುವಂತಹ ಸನ್ನಿವೇಶದ ಸಂದರ್ಭದಲ್ಲಿ, ತಾವು ಸಭಾಧ್ಯಕ್ಷರಾಗಬಹುದೆಂದು ಊಹೆಯನ್ನು ನಾವು ಮಾತನಾಡುವಂತಹ ಸಂದರ್ಭದಲ್ಲಿ ತಿಳಿಸಿದ್ದೆ. ಇದಕ್ಕೆ ಕಾರಣ ತಮ್ಮ ಒಂದು ಹಿನ್ನಲೆ, ನಡವಳಿಕೆ, ಸಮಾಜವಾದದ ಸಿದ್ಧಾಂತದಲ್ಲಿ ತಾವು ಹೊಂದಿರುವಂತಹ ಅಪಾರವಾದಂತಹ ನಂಬಿಕೆ ಮತ್ತು ಸರಳತೆ, ಇದು ಇವತ್ತಿನ ರಾಜಕೀಯ ವಾತಾವರಣದಲ್ಲಿ ನಿಮ್ಮಷ್ಟು ಸರಳವಾಗಿ, ರಾಜಕೀಯ ಕ್ಷೇತ್ರದಲ್ಲಿರುವಂತಹ ಜನರನ್ನು ನಾವು ನೋಡಬೇಕೆಂದರೆ ಅದು ಬಹಳ ವಿರಳ. ಇವತ್ತೂ ಕೂಡ ತಾವು ಮತ್ತು ನಾವು ಅನೇಕ ವರ್ಷಗಳ ಕಾಲ ಜೊತೆಯಲ್ಲೇ ಕಾಲವನ್ನು ಕಳೆಯುವಂತಹ ಸಂದರ್ಭದಲ್ಲಿ, ಆದಂತಹ ಘಟನೆಗಳನ್ನು ಜ್ಞಾಪಕ ಮಾಡಿಕೊಂಡಾಗ ನಿಮ್ಮಲ್ಲಿ ಇರವಂತಹ ಅನೇಕ ವೈಚಾರಿಕ ವಿಚಾರಗಳು, ಹಾಗೂ ಧೃಡವಾದಂತಹ ನಿಲುವು ಏನು ಇದೆ, ಅದು ಈ ಸದನಕ್ಕೆ ಮಾದರಿಯಾಗುತ್ತದೆಂಬ ಮಾತನ್ನು ಹೇಳುತ್ತೇನೆ. ಆ ಒಂದು ವಿಶಿಷ್ಟವಾದಂತಹ ಸನ್ನಿವೇಶವನ್ನು ಇವತ್ತು ಈ ಸದನದಲ್ಲಿ ನೋಡುತ್ತಿದ್ದೇವೆ. ಒಂದು ಕಡೆ ಸಮ್ಮಿಶ್ರ ಸರ್ಕಾರ ಮತ್ತೊಂದು ಕಡೆ ನೂರೊಂದು ಸದಸ್ಯರ ವಿರೋಧ ಪಕ್ಷ ಮತ್ತೆ ಅಷ್ಟೇ ಪ್ರಮಾಣದ ನೂರೊಂದು ಜನ ಹೊಸದಾಗಿ ಸದಸ್ಯರಾಗಿ ಈ ಸದನವನ್ನು ಪ್ರವೇಶ ಮಾಡಿರುವಂತಹ ಸಂದರ್ಭವನ್ನು ನಾವು ಕಾಣುತ್ತಿದ್ದೇವೆ. ಇಂತಹ ಸನ್ನಿವೇಶದಲ್ಲಿ ತಮ್ಮ ಪ್ರಾಮಾಣಿಕತೆ, ದಕ್ಷತೆ, ಮತ್ತು ತಮ್ಮ ಸೌಮ್ಯ ಸ್ವಭಾವ, ಏನು ಇದೆ, ಇದು ಈ ಸದನವನ್ನು ಯಶಸ್ವಿಯಾಗಿ ನಡೆಸುವುದಕ್ಕೆ ಸಹಕಾರಿಯಾಗುತ್ತದೆಂಬ ಮಾತನ್ನು ಹೇಳುತ್ತೇನೆ. ತಮ್ಮ ಅವಧಿಯಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದಂತೆ, ತಾವು ಕೆ.ಆರ್. ಪೇಟೆಯ ಕೃಷ್ಣರಾಗದೇ, ಮಹಾಭಾರತದ ಕೃಷ್ಣನಂತೆ ತಮ್ಮ ಕಾರ್ಯವನ್ನು ನಿರ್ವಹಿಸಿ, ಮಾನ್ಯ ವೈಕುಂಠ ಬಾಳಿಗಾರಿದ್ದಂತಹ ಸಂದರ್ಭದಲ್ಲಿ ನಾವು ಇನ್ನೂ ಚಿಕ್ಕವರಾಗಿದ್ದೆವು, ಯಾವ ರೀತಿ ಇವತ್ತು ಅವರನ್ನು ಎಲ್ಲರೂ ನೆನಪಿಸಿಕೊಳ್ಳುತ್ತಿದ್ದಾರೋ, ಆ ರೀತಿಯಲ್ಲಿ ತಮ್ಮ ಕಾರ್ಯ ವೈಖರಿಯೂ ಈ ಸದನದಲ್ಲಿ ಚಿರಸ್ಥಾಯಿಯಾಗಿ, ನೆನಪಾಗುವ ರೀತಿಯಲ್ಲಿ ತಾವು ಕಾರ್ಯ ನಿರ್ವಹಿಸುತ್ತೀರೆಂದು, ಆ ಒಂದು ಆಶಾಭಾವನೆಯನ್ನು ವ್ಯಕ್ತಪಡಿಸಿ, ತಮಗೆ ಒಳ್ಳೆಯ ಅವಕಾಶ ದೊರೆತಿದ್ದಕ್ಕಾಗಿ ಮತ್ತೊಮ್ಮೆ ಅಭಿನಂದಿಸಿ, ನಾನು ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಹೆಚ್.ಎಂ. ವಿಶ್ವನಾಥ (ಸಕಲೇಶಪುರ):- ಮಾನ್ಯ ಸಭಾಧ್ಯಕ್ಷರೆ, ನಾನು ಅತ್ಯಂತ ಸಂತೋಷದಿಂದ ಸಭಾಧ್ಯಕ್ಷರನ್ನು ಸ್ವಾಗತಿಸುತ್ತೇನೆ. ಈ ಸದನಕ್ಕೆ ಹೊಸದಾಗಿ ಆಯ್ಕೆಯಾಗಿರುವಂಥ

ನಾವು ತುಂಬಾ ಜನರಿದ್ದೇವೆ. ನಾವು ಬೇರೆ ಬೇರೆ ರೂಪದ ಹೋರಾಟ ಮಾಡಿಕೊಂಡು ಬಂದಂಥವರಾಗಿದ್ದೇವೆ. ನಾನು ಸಭಾಧ್ಯಕ್ಷರಲ್ಲಿ ಮನವಿ ಮಾಡಿಕೊಳ್ಳುವುದಿಷ್ಟೇ, ಈ ಸದನದಲ್ಲಿ ನಮ್ಮ ವಿಚಾರಗಳನ್ನು ಹೇಳಬೇಕಾದರೆ ತಾವು ನಮ್ಮ ವಿಚಾರಗಳಿಗೆ, ನಮ್ಮ ಮಾತಿಗೆ ಹೆಚ್ಚು ಮನ್ನಣೆ ಕೊಟ್ಟು ನಮಗೆ ಅವಕಾಶಗಳನ್ನು ಮಾಡಿಕೊಡಬೇಕು. ತಾವು ಜನಸಾಮಾನ್ಯರ ಮಧ್ಯದಿಂದ ಬಂದಂಥವರು ಎನ್ನುವುದು ನನಗೆ ನೆನಪಿದೆ. ತಾವು ಬಸ್ಸಿನಲ್ಲಿ, ರಿಕ್ಷಾದಲ್ಲಿ ಜನಸಾಮಾನ್ಯರ ಜೊತೆ ಓಡಾಡಿರುವುದರಿಂದ ನಿಮಗೆ ದೊಡ್ಡ ಅನುಭವವಿದೆ, ಈ ಹಿನ್ನಲೆಯಲ್ಲಿ ಬಂದಿರತಕ್ಕಂಥವರು ನೀವು ಎನ್ನುವ ನಂಬಿಕೆ ನಮಗಿರುವುದರಿಂದ, ಈ ಸದನದಲ್ಲಿ ನಮ್ಮ ವಿಚಾರಗಳನ್ನು ಹೇಳಲು ತಾವು ನಮಗೆಲ್ಲರಿಗೂ ಅವಕಾಶವನ್ನು ಮಾಡಿಕೊಡಬೇಕು ಎಂದು ಹೇಳಿ ನಿಮಗೆ ಮತ್ತೊಮ್ಮೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಎನ್. ಚೆಲುವರಾಯಸ್ವಾಮಿ (ನಾಗಮಂಗಲ):– ಮಾನ್ಯ ಸಭಾಧ್ಯಕ್ಷರೆ, ಪ್ರಥಮವಾಗಿ, ತಾವು ಇವತ್ತು ಅವಿರೋಧವಾಗಿ ಸಭಾಧ್ಯಕ್ಷರಾಗಿ ಆಯ್ಕೆಯಾಗಿ ಆ ಸ್ಥಾನದಲ್ಲಿ ಕುಳಿತಿರತಕ್ಕಂಥಾದ್ದು ಎಲ್ಲಾ ಸದಸ್ಯರಿಗೆ ಸಂತೋಷವನ್ನು ತಂದು ಕೊಟ್ಟಿದೆ ಎಂದು ಹೇಳಿ, ಅದಕ್ಕಾಗಿ ತಮ್ಮನ್ನು ಹೃದಯಪೂರ್ವಕವಾಗಿ ಅಭಿನಂದಿಸುತ್ತೇನೆ. ಇದು ನಮ್ಮ ಜಿಲ್ಲೆಗೆ ಕೊಟ್ಟಂಥ ಕೀರ್ತಿ ಮತ್ತು ಗೌರವವೆಂದು ಹೇಳುತ್ತೇನೆ. ನಮ್ಮ ರಾಷ್ಟ್ರೀಯ ನಾಯಕರಾದಂಥ ಮಾನ್ಯ ದೇವೇಗೌಡರು, ನಮ್ಮ ರಾಜ್ಯಾಧ್ಯಕ್ಷರಾದಂಥ ಮಾನ್ಯ ಸಿದ್ಧರಾಮಯ್ಯನವರು ಮತ್ತು ಮುಖ್ಯ ಮಂತ್ರಿಗಳಾದಂಥ ಮಾನ್ಯ ಧರ್ಮಸಿಂಗ್‌ರವರು ಇವತ್ತು ತಮ್ಮನ್ನು ಈ ಸ್ಥಾನಕ್ಕೆ ಆಯ್ಕೆ ಮಾಡಿದ್ದಾರೆ ಹಾಗೂ ಈ ಸದನದ 224 ಸದಸ್ಯರು ಸಂತೋಷವಾಗಿ ತಮ್ಮನ್ನು ಪ್ರೀತಿ ವಿಶ್ವಾಸದಿಂದ, ತಾವು ಸಮರ್ಥರು ಎಂದು ತಮ್ಮನ್ನು ಅವಿರೋಧವಾಗಿ ಆಯ್ಕೆ ಮಾಡಿದ್ದಾರೆ. ಅದಕ್ಕಾಗಿ ನಾನು ನಮ್ಮ ಜಿಲ್ಲೆಯ ಪರವಾಗಿ ಹಾಗೂ ಜಿಲ್ಲೆಯ ಎಲ್ಲಾ ಶಾಸಕರ ಪರವಾಗಿ ಎಲ್ಲಾ ಸದಸ್ಯರುಗಳಿಗೆ ಹಾಗೂ ಮುಖಂಡರಿಗೆ ಕೃತಜ್ಞತೆಯನ್ನು ಮತ್ತು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಈಗಾಗಲೇ ಮಾತನಾಡಿದಂಥ ಎಲ್ಲಾ ಹಿರಿಯ ಸದಸ್ಯರು ತಮ್ಮ ಬಗ್ಗೆ ಸಾಕಷ್ಟು ವಿಚಾರಗಳನ್ನು ಹೇಳಿದ್ದಾರೆ. ನಾನಾದರೂ ಹೇಳತಕ್ಕಂಥ ವಿಚಾರವೆಂದರೆ, ತಾವು ಈ ಸದನಕ್ಕೆ ಹೊಸಬರಲ್ಲ. ಈ ಸದನದ ಸದಸ್ಯರಾಗಿ, ಮಂತ್ರಿಗಳಾಗಿ, ಲೋಕಸಭಾ ಸದಸ್ಯರಾಗಿ ಕೆಲಸ ಮಾಡಿ, ಸಾಕಷ್ಟು ಗಂಭೀರತೆಯನ್ನು ಮತ್ತು ಒಳ್ಳೆಯ ವ್ಯಕ್ತಿತ್ವವನ್ನು ಸಂಪಾದನೆ ಮಾಡಿದ್ದೀರಿ. ಕೆ.ಆರ್. ಪೇಟೆ ಕೃಷ್ಣಾರವರು ಎಂದರೆ ಬಹಳ ಸರಳ ವ್ಯಕ್ತಿಗಳು, ಸಜ್ಜನರು ಮತ್ತು ಪ್ರಾಮಾಣಿಕರು ಎನ್ನುವುದು ಎಲ್ಲರಿಗೂ ಗೊತ್ತು. ಅದಕ್ಕಾಗಿ ತಮ್ಮನ್ನು ಈ ಒಂದು ಉನ್ನತ ಮಟ್ಟದ ಹುದ್ದೆಗೆ ಕುಳ್ಳಿಸಿರತಕ್ಕಂಥಾದ್ದು ಬಹಳ ಮೆಚ್ಚುಗೆಯನ್ನು, ಸಂತೋಷವನ್ನು ವ್ಯಕ್ತಪಡಿಸತಕ್ಕಂಥ ಒಂದು ಸಂದರ್ಭವೆಂದು ಹೇಳುತ್ತೇನೆ. ನಮ್ಮ ಜಿಲ್ಲೆಗೆ ಈ ಅವಕಾಶ ಸಿಕ್ಕಿರತಕ್ಕಂಥಾದ್ದು ಇದು ಎರಡನೇ ಬಾರಿ. ಮೊದಲು ನಮ್ಮ ಜಿಲ್ಲೆಯವರಾದ ಶ್ರೀ ಎಸ್.ಎಂ. ಕೃಷ್ಣಾರವರು ಆ ಸ್ಥಾನದಲ್ಲಿ ಕುಳಿತಿದ್ದರು, ಇವತ್ತು ತಾವು ಕುಳಿತಿದ್ದೀರಿ. ಇದರಿಂದ ನಮ್ಮ ಜಿಲ್ಲೆಗೆ ಬಹಳ ಕೀರ್ತಿ ಸಿಕ್ಕಿದೆ ಹಾಗೂ ನಮಗೆಲ್ಲರಿಗೂ ಬಹಳ ಸಂತೋಷವನ್ನು ತಂದು ಕೊಟ್ಟಿದೆ. ಆಗಲೇ ಮಾತನಾಡಿದಂಥ ಹಿರಿಯ ಸದಸ್ಯರಾದಂಥ ವಾಟಾಳ್ ನಾಗರಾಜ್‌ರವರು, ಕೌರವರು, ಪಾಂಡವರು ಎನ್ನುವ ಮಾತನ್ನು ಹೇಳಿದರು. ನಿಜವಾದಂಥ ಕೌರವರು, ಪಾಂಡವರಿಬ್ಬರೂ ಈ ಕಡೆಯಲ್ಲೇ ಕುಳಿತಿದ್ದೇವೆ. ಅವರು ಪಾಂಡವರೂ ಅಲ್ಲ, ಕೌರವರೂ

ಅಲ್ಲ. ಏಕೆಂದರೆ ನಿಜವಾಗಿ ಹೋರಾಟ ಮಾಡಿದಂಥವರು ನಾವೇ. ಇವತ್ತು ಆ ಕಡೆ ಕುಳಿತಿರತಕ್ಕಂಥ ಆತ್ಮೀಯ ಸ್ನೇಹಿತರಲ್ಲಿ ಬಹಳಷ್ಟು ಜನ ಈ ಕಡೆ ಕುಳಿತುಕೊಳ್ಳಬೇಕಾದವರಿದ್ದಾರೆ. ಅವರೆಲ್ಲರಿಗೂ ಮನಸ್ಸು ಇಲ್ಲೇ ಇದೆ. ಆದರೆ, ಅನಿವಾರ್ಯವಾಗಿ ಕೆಲವರು ಅಲ್ಲಿ ಕುಳಿತುಕೊಳ್ಳಬೇಕಾದಂಥ ಪರಿಸ್ಥಿತಿ ಬಂದಿದೆ. ಇದು ಮುಂದೆ ಇನ್ನೂ ಸರಿ ಹೋಗಬಹುದು ಎಂದು ನಾನು ಅಂದು ಕೊಂಡಿದ್ದೇನೆ. ಇವತ್ತು ನಾವು ಒಂದು ಸಮ್ಮಿಶ್ರ ಸರ್ಕಾರವನ್ನು ನಡೆಸಬೇಕಾಗಿದ್ದರೆ, ಅದಕ್ಕೆ ಇಲ್ಲಿರ ತಕ್ಕಂಥವರು ಕಾರಣರಲ್ಲ. ಅದಕ್ಕೆ ಕಾರಣ, ಇವತ್ತಿನ ಪರಿಸ್ಥಿತಿ ಮತ್ತು ನಮ್ಮ ಜನರ ತೀರ್ಮಾನ. ನಮಗೆ ನಮ್ಮ ಪಕ್ಷಗಳ ವರ್ಚಸ್ಸು ಮತ್ತು ವೈಯಕ್ತಿಕವಾದ ಅಧಿಕಾರಕ್ಕಿಂತ ರಾಜ್ಯದ ಪರಿಸ್ಥಿತಿ ಮುಖ್ಯ. ಇವತ್ತು ಇಲ್ಲಿ ಕುಳಿತಿರತಕ್ಕಂಥ ಎಲ್ಲರ ಉದ್ದೇಶ, ಚಿಂತನೆ ಏನೆಂದರೆ, ರಾಜ್ಯದ ಎಲ್ಲಾ ವರ್ಗಗಳ ಜನರು ಎದುರಿಸುತ್ತಿರುವಂಥ ಸಮಸ್ಯೆಗಳಿಗೆ ಪರಿಹಾರ ಹುಡುಕಬೇಕು ಎನ್ನುವುದಾಗಿದೆ. ಇವತ್ತು ನಾವೆಲ್ಲರೂ ಆ ದೃಷ್ಟಿಯಲ್ಲಿ ಯೋಚನೆ ಮಾಡಬೇಕೇ ವಿನಃ, ಯಾರು ಎಲ್ಲಿದ್ದಾರೆ, ಯಾರ ಜವಾಬ್ದಾರಿ ಎನ್ನುವುದನ್ನು ನೋಡಬಾರದು. ಆದ್ದರಿಂದ ಈ ಬಾರಿ ಈ ಸದನದ ಎಲ್ಲಾ ಸದಸ್ಯರ ಜವಾಬ್ದಾರಿ ಹೆಚ್ಚಿದೆ ಎಂದು ಹೇಳುತ್ತೇನೆ. 50 ವರ್ಷಗಳ ಇತಿಹಾಸದಲ್ಲಿ ಇಂಥ ಒಂದು ಅವಕಾಶ ಸಿಕ್ಕಿರತಕ್ಕಂಥಾದ್ದು ಅಪರೂಪ. ಇಂಥ ಒಂದು ಸಂದರ್ಭದಲ್ಲಿ ನಾವೆಲ್ಲರೂ ನಮ್ಮ ವೈಯಕ್ತಿಕವಾದ ಪ್ರತಿಷ್ಟೆಯನ್ನು ಬಿಟ್ಟು, ರಾಜ್ಯದ ಜನತೆಗೆ ಏನಾದರೂ ಒಳ್ಳೆಯದನ್ನು ಮಾಡಲು ಸಭಾಧ್ಯಕ್ಷರ ಸಹಕಾರ ಮುಖ್ಯ. ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಎಲ್ಲರೂ ಒಂದು ಗೂಡಿ ಒಳ್ಳೆಯ ಕೆಲಸ ಮಾಡಿದ್ದೇ ಆದರೆ, ನಿಜಕ್ಕೂ ಜನ ನಮ್ಮೆಲ್ಲರನ್ನೂ ಅಭಿನಂದಿಸುತ್ತಾರೆ, ಪ್ರೀತಿಸುತ್ತಾರೆ. ಮುಂದೆ ಅವರು ಯಾವ ರೀತಿ ತೀರ್ಮಾನ ಕೊಡುತ್ತಾರೋ, ಅದಕ್ಕೆ ನಾವೆಲ್ಲರೂ ತಲೆಬಾಗಬೇಕಾಗುತ್ತದೆ. ಆದ್ದರಿಂದ, ಇಲ್ಲಿ ಕೌರವರು, ಪಾಂಡವರು ಎನ್ನುವುದನ್ನು ಬಿಟ್ಟು, ಎಲ್ಲರ ದೃಷ್ಟಿ ಒಂದೇ ಆಗಿರಬೇಕು. ನಮ್ಮ ಸಭಾಧ್ಯಕ್ಷರ ಬಗ್ಗೆ ಎಲ್ಲರಿಗೂ ಗೊತ್ತಿದೆ. ಅವರ ಬಗ್ಗೆ ನಾವೂ ಎಷ್ಟು ಹೇಳಿದರೂ ಅದು ಹೊಗಳಿಕೆಯ ಮಾತಾಗುತ್ತದೆ. ಅವರಿಗೆ ಆ ಸ್ಥಾನದಲ್ಲಿ ಕುಳಿತುಕೊಳ್ಳತಕ್ಕಂಥ ಅರ್ಹತೆ ಇದೆ ಮತ್ತು ಅವರು ಸಮರ್ಥರಿದ್ದಾರೆ. ಅವರು ಎಷ್ಟೇ ಸರಳ ವ್ಯಕ್ತಿಗಳಾಗಿದ್ದರೂ ಕೂಡ, ಕೆಲವು ಸಂದರ್ಭಗಳಲ್ಲಿ ಅಷ್ಟೇ ಹಾರ್ಡ್ ಆಗಿ ತೀರ್ಮಾಣ ತೆಗೆದುಕೊಳ್ಳತಕ್ಕಂಥ ಒಂದು ವ್ಯಕ್ತಿತ್ವವೂ ಅವರಿಗಿದೆ. ಈ ಎಲ್ಲಾ ಕಾರಣಗಳಿಂದ ಅವರು ತಮ್ಮ ಅವಧಿಯಲ್ಲಿ ಈ ಸದನವನ್ನು ಪರಿಪೂರ್ಣವಾಗಿ ತೆಗೆದುಕೊಂಡು ಹೋಗುತ್ತಾರೆ ಎನ್ನುವ ನಂಬಿಕೆ ಹಾಗೂ ವಿಶ್ವಾಸ ನಮಗೆಲ್ಲರಿಗೂ ಇದೆ. ಅದರ ಜೊತೆಗೆ ನಮ್ಮ ಜಿಲ್ಲೆಗೆ ಇನ್ನೂ ಹೆಚ್ಚಿನ ಕೀರ್ತಿಯನ್ನು ಮತ್ತು ಗೌರವವನ್ನು ತಂದುಕೊಡುತ್ತಾರೆಂದು ಆಶಿಸುತ್ತೇನೆ. ನಾವೂ ಸಹ ಅವರಿಗೆ ಗೌರವ ತಂದುಕೊಡುವ ರೀತಿಯಲ್ಲಿ, ಈ ಸದನವನ್ನು ಸರಿಯಾಗಿ ನಡೆಸುವಲ್ಲಿ ಭಾಗಿಯಾಗಬೇಕಾಗುತ್ತದೆ ಎಂದು ಹೇಳಿ ಮತ್ತೊಮ್ಮೆ ಅವರಿಗೆ ಅಭಿನಂದಿಸಿ, ತಮಗೆಲ್ಲರಿಗೂ ನನ್ನ ಕೃತಜ್ಞತೆಯನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ **ಶ್ರೀ ಬಿ.ಆರ್. ಪಾಟೀಲ್ (ಆಳಂದ):-** ಸನ್ಮಾನ್ಯ ಸಭಾಧ್ಯಕ್ಷರೆ, ಕರ್ನಾಟಕ ರಾಜ್ಯದ ಭವಿಷ್ಯವನ್ನು ಬರೆಯತಕ್ಕಂಥ ಈ ಸದನದ ಅಧ್ಯಕ್ಷರಾಗಿ ತಾವು ಆಯ್ಕೆಯಾಗಿದ್ದೀರಿ. ಕರ್ನಾಟಕದ ಜನತೆ ಈ ಒಂದು ಸದನದಿಂದ ಬಹಳಷ್ಟು ನಿರೀಕ್ಷೆ ಮಾಡಿಕೊಂಡು ಕಾಯುತ್ತಿದ್ದಾರೆ. ಇಂಥ ಒಂದು ಪರಿಸ್ಥಿತಿಯಲ್ಲಿ, ತಾವು ಈ ಜವಾಬ್ದಾರಿಯನ್ನು ಹೊತ್ತು, ಜನರ ನಿರೀಕ್ಷೆಯ ಮೇರೆಗೆ ಈ

ಸದನವನ್ನು ನಡೆಸಿಕೊಂಡು ಹೋಗುವಂಥ ಒಂದು ದೊಡ್ಡ ಜವಾಬ್ದಾರಿ ತಮ್ಮ ಮೇಲಿದೆ. ನನ್ನ ಅಭಿಪ್ರಾಯದ ಪ್ರಕಾರ, ನಿಮಗಿಂತ ಹೆಚ್ಚಿನ ಜವಾಬ್ದಾರಿ ನಮ್ಮ ಎಲ್ಲಾ ಸದಸ್ಯರ ಮೇಲೆ ಕೂಡ ಇದೆ. ಯಾವ ರೀತಿ ನಾವು ತಮಗೆ ಸಹಕಾರ ಕೊಡುತ್ತೇವೆ, ಯಾವ ರೀತಿ ಈ ಸಭೆಯಲ್ಲಿ ಒಂದು ಸೌಮ್ಯತೆಯನ್ನು, ಒಂದು ಒಳ್ಳೆಯ ವಾತಾವರಣವನ್ನು ಕಾಯ್ದುಕೊಂಡು ಹೋಗಿ, ಈ ಸಭೆಯನ್ನು ಸರಿಯಾದ ರೀತಿಯಲ್ಲಿ ನಡೆಸುವುದಕ್ಕೆ ಅವಕಾಶವನ್ನು, ಸಹಕಾರವನ್ನು ಕೊಡುತ್ತೇವೆ ಎನ್ನುವ ಜವಾಬ್ದಾರಿಯೂ ಕೂಡ ನಮ್ಮೆಲ್ಲರ ಮೇಲಿದೆ ಎಂದು ನಾನು ಭಾವಿಸುತ್ತೇನೆ. ಇಂಥ ಒಂದು ಪರಿಸ್ಥಿತಿಯಲ್ಲಿ, ತಮ್ಮ ಮೇಲಿರುವ ಒಂದು ಮುಖ್ಯವಾದ ಜವಾಬ್ದಾರಿ ಏನೆಂದರೆ, ಈ ಸದನದಲ್ಲಿ ನಡೆಯತಕ್ಕಂಥ ಎಲ್ಲಾ ಚರ್ಚೆಗಳು ಸಾಮಾನ್ಯ ಜನತೆಯ ಪರವಾಗಿ ಮತ್ತು ನಮಗೆ ಮತ ಹಾಕಿದಂಥ ಸಾಮಾನ್ಯ ಮತದಾರರ ಪರವಾಗಿ ಚರ್ಚೆ ನಡೆಯಬೇಕು. ಆ ನಿಟ್ಟಿನಲ್ಲಿ ಚರ್ಚೆಯನ್ನು ನಡೆಸುವುದಕ್ಕೆ ತಾವು ಅವಕಾಶವನ್ನು ಮಾಡಿಕೊಡಬೇಕು ಎಂದು ನಾನು ತಮ್ಮಲ್ಲಿ ಮನವಿಯನ್ನು ಮಾಡಿಕೊಳ್ಳುತ್ತೇನೆ. ಗಾಂಧೀಜಿ ಒಂದು ಮಂತ್ರವನ್ನು ಕೊಟ್ಟಿದ್ದರು. ಈ ದೇಶದ ಕಟ್ಟಕಡೆಯ ಮನುಷ್ಯನ ಬಗ್ಗೆ ಚಿಂತನೆ ನಡೆಯಬೇಕು, ಚರ್ಚೆ ನಡೆಯಬೇಕು, ಆವಾಗ ಮಾತ್ರ ಪ್ರಜಾಪ್ರಭುತ್ವ ಭದ್ರವಾಗಿ ಬೇರೂರಲಿಕ್ಕೆ ಸಾಧ್ಯವಾಗುತ್ತದೆ ಎನ್ನುವಂಥ ಮಾತನ್ನು ಮಹಾತ್ಮ ಗಾಂಧೀಜಿ ಹೇಳಿದ್ದರು. ಇತ್ತೀಚಿನ ದಿನಗಳಲ್ಲಿ ಬಹುತೇಕವಾಗಿ ಎಲ್ಲಾ ಸದನಗಳು ಅದು ಲೋಕಸಭೆಯಿಂದ ಹಿಡಿದು ಪಂಚಾಯತ್‌ವರೆಗೆ ಜನತೆ ನಿರೀಕ್ಷೆಗೆ ತಕ್ಕ ಹಾಗೆ ನಡೆಯುತ್ತಿಲ್ಲ ಎನ್ನುವ ಭಾವನೆ ನಮ್ಮ ಜನರಲ್ಲಿ ಬಂದಿದೆ. ಏಕೆಂದರೆ, ಈ ಸದನಗಳಿಗೆ ಯಾವ ಕಾರಣಕ್ಕಾಗಿ ಜನತೆ ನಮ್ಮನ್ನು ಆರಿಸಿ ಕಳುಹಿಸಿರುತ್ತಾರೆ, ಪೂರಕವಾಗಿ ಅವರ ಪರವಾಗಿ ಚಿಂತನೆ ಆಗುತ್ತಿಲ್ಲ, ಅವರ ಸಮಸ್ಯೆಗೆ ಪರಿಹಾರವನ್ನು ಕೊಡುವಂಥ ಕೆಲಸ ಆಗುತ್ತಿಲ್ಲ ಎನ್ನುವಂಥ ಭಾವನೆ ಇವತ್ತು ನಮ್ಮ ದೇಶದ ಸಾಮಾನ್ಯ ಜನತೆಯ ಮನಸ್ಸಿನಲ್ಲಿ ಬರುತ್ತಿದೆ. ಬದಲಾದಂಥ ಈ ಆರ್ಥಿಕ ಸುಧಾರಣೆ ಹಿನ್ನೆಲೆಯಲ್ಲಿ ಇವತ್ತು ಎಲ್ಲಾ ವೇದಿಕೆಗಳಲ್ಲಿ ಚರ್ಚೆ ನಡೆಯುವಂಥದ್ದು ಉಳ್ಳವರ ಪರವಾಗಿ, ಶ್ರೀಮಂತರ ಪರವಾಗಿ ಮತ್ತು ನಗರದ ಜನತೆಯ ಪರವಾಗಿ ಚರ್ಚೆಗಳು ಜಾಸ್ತಿ ನಡೆಯುತ್ತಿವೆ. ಈ ಮಾಧ್ಯಮದವರು ಕೂಡ ಉಳ್ಳವರ ಪರವಾಗಿ ಹೆಚ್ಚಿಗೆ ಪ್ರಚಾರ ಮಾಡಿ ಇವತ್ತು ಸಾಮಾನ್ಯ ಜನತೆಯ ಬಗ್ಗೆ ಕೂಡ ನಿರ್ಲಕ್ಷ್ಯ ಮಾಡುತ್ತಿರುವಂಥ ಸಂದರ್ಭದಲ್ಲಿ ಈ ಸದನದಲ್ಲಿ ಸಾಮಾನ್ಯ ಜನತೆಯ ಪರವಾಗಿ ಚರ್ಚೆ ಮಾಡಿ ಅವರ ಸಮಸ್ಯೆಯನ್ನು ಬಗೆಹರಿಸತಕ್ಕಂಥ ಕೆಲಸವನ್ನು ನಾವು ಮಾಡಬೇಕಾಗುತ್ತದೆ. ಅನೇಕ ಸಂದರ್ಭದಲ್ಲಿ ಯಾವ ಸದನಕ್ಕೆ ನಾವು ಚುನಾಯಿತರಾಗಿ ಬಂದಿದ್ದೇವೆ, ಆ ಸದನದಲ್ಲಿ ಎಷ್ಟೋ ಸಲ ಕೋರಂಗಾಗಿ ಸಭೆ ಕಾಯುವಂಥ ಪರಿಸ್ಥಿತಿ ಬರುತ್ತದೆ. ಇದು ಬಹಳ ದುರ್ದೈವ ಎಂದು ನಾನು ಭಾವಿಸುತ್ತೇನೆ. ಅನೇಕ ಸಲ ಬಿಲ್ಲುಗಳು ಪಾಸಾಗುವಾಗ ಬೇಕಾದಂಥ ಕೋರಂಗಳೇ ಇರುವುದಿಲ್ಲ ಇದೊಂದು ಬಹಳ ಕೆಟ್ಟ ಸಂಪ್ರದಾಯ. ಅನೇಕ ಸಲ ಗಿಲೋಟಿನ್‌ಗೆ ಹಾಕಿ ಒಂದೇ ಸಲಕ್ಕೆ ಎಲ್ಲಾ ಬಿಲ್‌ಗಳನ್ನು, ಎಲ್ಲಾ ಈ ಪೂರಕ ಬಜೆಟ್‌ಗಳನ್ನು ಪಾಸ್ ಮಾಡುವಂಥ ಪರಂಪರೆ ಕೂಡ ಇವತ್ತು ನಮ್ಮಲ್ಲಿ ಬೆಳೆದು ಬರುತ್ತಿದೆ. ಹಾಗಾಗಿ ಇವತ್ತು ಈ ಒಂದು ವಿಚಿತ್ರ ಪರಿಸ್ಥಿತಿಯಲ್ಲಿ ವಿರೋಧ ಪಕ್ಷವೂ ಕೂಡ ಅಷ್ಟೇ ಬಲಿಷ್ಟವಾಗಿ ಬಂದಿದೆ. ಅವರೂ ಕೂಡ ಈ ಸರ್ಕಾರದ ಪೂರಕವಾದ ಎಲ್ಲಾ ಸಮಸ್ಯೆಗೆ ಸ್ಪಂದಿಸಿ ನಿರ್ವಹಣೆ ಮಾಡಬೇಕಾದಂಥ ತಮ್ಮ ಜವಾಬ್ದಾರಿಯನ್ನು ಅವರೂ ಕೂಡ ಹೊರಬೇಕಾಗುತ್ತದೆ. ಈಗ ಇನ್ನೊಂದು

ಚಿಂತನೆ ಪೀಠಾಧಿಕಾರಿಗಳ ಸಭೆಯಲ್ಲಿ ಬಹುಶಃ ಎಲ್ಲಾ ಕಡೆ ನಡೆಯುತ್ತಿದೆ. ಸದನ ಬಹಳ ಕಡಿಮೆ ಸಮಯ ಕೂರುತ್ತಿದೆ, ಜನರ ಸಮಸ್ಯೆಗಳು ಚರ್ಚೆಗೆ ಬರುತ್ತಿಲ್ಲ ಎನ್ನುವಂಥ ಕೂಗು ಕೂಡ ಈ ಪೀಠಾಧಿಕಾರಿಗಳ ಸಮಾವೇಶದಲ್ಲಿ ಅನೇಕ ಸಲ ಚರ್ಚೆಯಾಗಿದೆ, ಪ್ರಸ್ತಾವನೆ ಪಾಸಾಗಿವೆ, ಕನಿಷ್ಟ 100 ದಿವಸವಾದರೂ ಸದನ ಸೇರಬೇಕೆನ್ನುವಂಥದ್ದು ಒಂದು ನಿರ್ಣಯಕ್ಕೆ ಒಟ್ಟಾಭಿಪ್ರಾಯಕ್ಕೆ ಬಂದರೂ ಕೂಡ ಸದನ ವರ್ಷದಲ್ಲಿ ಕೇವಲ 60 ದಿವಸ 70 ದಿವಸ ಕೆಲವು ಸಲ ಅಂತೂ 40 ದಿವಸ ಮಾತ್ರ ಸದನ ಸೇರಿರುವಂಥ ಉದಾಹರಣೆಗಳು ಕರ್ನಾಟಕದ ಈ ಶಾಸಕಾಂಗದಲ್ಲಿ ನಾವು ನೋಡುತ್ತಿದ್ದೇವೆ. ಹಾಗಾಗಿ ಸದನ ಹೆಚ್ಚಿನ ದಿವಸಗಳು ಸೇರಬೇಕು. ಸದನದಲ್ಲಿ ಹೆಚ್ಚಿಗೆ ವಿಷಯಗಳ ಬಗ್ಗೆ ಚರ್ಚೆ ಯಾಗಬೇಕು. ಇವತ್ತು ರೈತರು, ಬಡವರು, ಕೂಲಿಕಾರರು, ಏನು ಕಷ್ಟಕ್ಕೆ ಒಳಗಾಗಿದ್ದಾರೆ ಅವರ ಸಮಸ್ಯೆಗಳ ಬಗ್ಗೆ ಯಾವುದೇ ಪಕ್ಷದವರು ಆ ಚರ್ಚೆಯನ್ನು ಮಾಡಲಿಕ್ಕೆ ಬಂದಾಗ ಅಂಥವರಿಗೆ ತಾವು ಅವಕಾಶ ಮಾಡಿಕೊಡಬೇಕು. ಆವಾಗ ಮಾತ್ರ ನಿಜವಾಗಿಯೂ ಕೂಡ ಸಮಸ್ಯೆಗಳನ್ನು ಪರಿಹಾರ ಮಾಡುವುದಕ್ಕೆ ಸದಸ್ಯರಿಗೆ ಒಂದು ಅವಕಾಶ ಸಿಗುತ್ತದೆ. ಇಂಥ ಒಂದು ಸಂದರ್ಭದಲ್ಲಿ ಸದನ ಕನಿಷ್ಟ ಪಕ್ಷ ವರ್ಷದಲ್ಲಿ 100 ದಿವಸವಾದರೂ ಕೂಡ ಸೇರಬೇಕು ಮತ್ತು ಸದಸ್ಯರು ನಾವೆಲ್ಲರೂ ಕೂಡ ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸಿ ನಾವು ಯಾವತ್ತೂ ಈ ಸಭೆಗೆ ಗೌರವವನ್ನು ತಂದು ಕೊಡುವಂಥ ಕೆಲಸವನ್ನು ಮಾಡಬೇಕು. ಸದನ ನಡೆದಾಗ ಬೆಂಗಳೂರಿನಲ್ಲಿ ನಾವು ಬರೀ ಎಲ್ಲೆಲ್ಲೋ ಕಛೇರಿಗಳಲ್ಲಿ ತಿರುಗಾಡಿ ಈ ಸದನಕ್ಕೆ ಅಗೌರವ ತಂದುಕೊಡದೆ ಸದನ ನಡೆದಾಗ ನಾವೆಲ್ಲರೂ ಕೂಡ ಹಾಜರಾಗಿದ್ದು ಎಲ್ಲಾ ಚರ್ಚೆಗಳಲ್ಲಿ ಭಾಗವಹಿಸಿ, ಇನ್ನೊಂದು ವಿಶೇಷವಾಗಿ ಹೇಳುವುದೇನೆಂದರೆ, ಹೊಸದಾಗಿ ಬಂದಂಥ ಅನೇಕ ಸದಸ್ಯರು ತಿಳಿದುಕೊಳ್ಳಬೇಕಾದಂಥದ್ದು, ಕಲಿತುಕೊಳ್ಳಬೇಕಾದಂಥದ್ದು ಬಹಳಷ್ಟು ವಿಷಯಗಳಿದ್ದು ಅದಕ್ಕೆ ಇಲ್ಲಿ ಬಹಳಷ್ಟು ಅವಕಾಶವಿದೆ. ನಾವು 1983ರಲ್ಲಿ ಆರಿಸಿ ಈ ಸದನಕ್ಕೆ ಬಂದಾಗ ವಿರೋಧ ಪಕ್ಷದಲ್ಲಿದ್ದಂಥ ಶ್ರೀಮಾನ್ ಖರ್ಗೆಯವರು ಮತ್ತು ಮಾನ್ಯ ಚಿಮ್ಮನಕಟ್ಟಿಯವರು ಇದ್ದರು, ಇವತ್ತು ಅದು ನನಗೆ ನೆನಪಿಗೆ ಬರುತ್ತಿದೆ. ಈ ಸದನ ನಡೆದಾಗ ಅವರು ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ಕುಳಿತು ಪ್ರತಿಯೊಂದು ಚರ್ಚೆಯಲ್ಲಿ ಭಾಗವಹಿಸುತ್ತಿದ್ದರು. ಅದೊಂದು ನನಗೆ ಪಾಠವಾಗಿ ಅದನ್ನು ನಾನು ತಿಳಿದುಕೊಂಡಿದ್ದೇನೆ. ಹಾಗಾಗಿ ಇವತ್ತು ಹೊಸದಾಗಿ ಬಂದಂಥ ಸದಸ್ಯರು ತಾವು ಖಾಯಂ ಆಗಿ ಸದನದಲ್ಲಿ ಕುಳಿತು ಚರ್ಚೆಯಲ್ಲಿ ಭಾಗವಹಿಸಿ ಆಲಿಸಿ ಅದನ್ನು ತಿಳಿದುಕೊಳ್ಳುವಂಥ ಅವಕಾಶ ಇರುವುದರಿಂದ ನಾವೆಲ್ಲರೂ ಕೂಡ ಸದನ ನಡೆದಾಗ ಇಲ್ಲಿ ಹೆಚ್ಚು ಸಮಯ ಇದ್ದು ನಾವು ಅನೇಕ ವಿಷಯಗಳನ್ನು ತಿಳಿದುಕೊಂಡು ನಾವೂ ಕೂಡ ಚರ್ಚೆಯಲ್ಲಿ ಭಾಗವಹಿಸಿ ಕಲಿತುಕೊಳ್ಳಬೇಕಾದಂಥ ಅವಕಾಶವನ್ನು ಮಾಡಿಕೊಳ್ಳಬೇಕು. ಇನ್ನೊಂದು ವಿಚಾರ ಎನೆಂದರೆ, ಇಲ್ಲಿ ಯಾರು ಹೆಚ್ಚಿಗೆ ಗಲಾಟೆ ಮಾಡುತ್ತಾರೆ ಅವರಿಗೆ ಹೆಚ್ಚಿಗೆ ಪ್ರಚಾರ ಸಿಕ್ಕುತ್ತದೆ. ಹಾಗಾಗಿ ಚರ್ಚೆಯ ಸಂದರ್ಭದಲ್ಲಿ ಗಲಾಟೆ ಮಾಡಿದವರಿಗೆ ಪ್ರಚಾರ ಸಿಕ್ಕಿದಾಗ ಗಲಾಟೆಗಳು ಜಾಸ್ತಿ ಆಗುತ್ತವೆ. ಯಾರು ನಿಜವಾಗಿ ಅಧ್ಯಯನ ಮಾಡಿಕೊಂಡು ತಿಳಿದುಕೊಂಡು ಬಂದು ಕಾಳಜಿ ಇಟ್ಟುಕೊಂಡು ಕಳಕಳಿಯಿಂದ ಜನರ ಸಮಸ್ಯೆಗಳನ್ನು ಪ್ರಸ್ತಾಪ ಮಾಡುತ್ತಾರೆ ಅವರ ಬಗ್ಗೆಯೂ ಕೂಡ ಪ್ರಚಾರ ಸಿಗಬೇಕು. ಇದರ ಬಗ್ಗೆ ಮಾಧ್ಯಮದವರಿಗೆ ಕೂಡ ಹೆಚ್ಚಿನ ಜವಾಬ್ದಾರಿ ಇದೆ. ಮಾಧ್ಯಮದವರು ಕೂಡ ಇವತ್ತು ಯಾರು ನಿಜವಾಗಿ ಪ್ರಾಮಾಣಿಕವಾದ ಕಾಳಜಿ

ಇಟ್ಟುಕೊಂಡು ಅಧ್ಯಯನ ಮಾಡಿ ಚರ್ಚೆಯಲ್ಲಿ ಭಾಗವಹಿಸುತ್ತಾರೆ ಅವರ ಬಗ್ಗೆಯೂ ಕೂಡ ಜನತೆಗೆ ತಿಳಿಸಿ ಹೇಳುವಂಥ ಕೆಲಸವನ್ನು ಮಾಧ್ಯಮದವರೂ ಕೂಡ ಮಾಡಬೇಕಾಗುತ್ತದೆ. ಇಂಥ ಒಂದು ಪರಂಪರೆಯನ್ನು, ಒಂದು ಹೊಸ ಪದ್ಧತಿಯನ್ನು ಹಾಕಿಕೊಂಡು ಬರುವಂಥ ಅಭ್ಯಾಸವನ್ನು ಮಾಡಿಕೊಂಡು ಹೋಗಬೇಕೆಂದು ಹೇಳಿ, ತಾವು ಗಾಂಧಿ ಮತ್ತು ಲೋಹಿಯಾ, ಜಯಪ್ರಕಾಶ್ ನಾರಾಯಣ್ ರವರ ಮಾರ್ಗದಲ್ಲಿ ಬಂದಂಥ ಒಬ್ಬ ರಾಜಕಾರಣಿ ಆಗಿರುವುದರಿಂದ ನಿಜವಾಗಿ ಈ ಒಂದು ಸಭೆಗೆ ಹೆಚ್ಚಿನ ಘನತೆ ಮತ್ತು ಗೌರವವನ್ನು ತಂದು ಕೊಟ್ಟಿದ್ದೀರಿ. ಈ ಸಭೆಯನ್ನು ಯಾವತ್ತೂ ಕೂಡ ಒಳ್ಳೆಯ ರೀತಿಯಿಂದ ನಡೆಸಿಕೊಂಡು ಹೋಗುತ್ತೀರಿ ಮತ್ತು ಇನ್ನೊಂದು ಸಲ ತಮಗೆ ವಿನಂತಿ ಮಾಡಿಕೊಳ್ಳುತ್ತೇನೆ, ಉಳ್ಳವರ ಪರವಾಗಿ ಹೆಚ್ಚಿಗೆ ಚರ್ಚೆ ಆಗುವುದಕ್ಕೆ ಬಿಡಬಾರದು, ಬಡವರ ಮತ್ತು ನಿರ್ಗತಿಕರ ಪರವಾಗಿ ಈ ಸಭೆಯಲ್ಲಿ ಚರ್ಚೆ ಆಗುವುದಕ್ಕೆ ಅವಕಾಶವನ್ನು ತಾವು ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳಿ, ತಮಗೆ ನಮ್ಮೆಲ್ಲರ ಸಹಕಾರವನ್ನು ಕೊಡುತ್ತೇವೆಂದು ಹೇಳಿ, ತಮಗೆ ಮತ್ತೊಂದು ಸಲ ಅಭಿನಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು:– ಈಗ ಬಹಳಷ್ಟು ಸದಸ್ಯರು ಈ ಸಂದರ್ಭದಲ್ಲಿ ಅಭಿನಂದನೆಯನ್ನು ಮಾಡಲಿಕ್ಕೆ ಇಷ್ಟಪಟ್ಟಿದ್ದಾರೆ. ಆ ಕಾರಣದಿಂದ ನಾನು ಎಲ್ಲಾ ಸದಸ್ಯರಲ್ಲಿ ಪ್ರಾರ್ಥನೆ ಮಾಡುವುದೇನೆಂದರೆ, ಆದಷ್ಟು ಬೇಗ ಅಂದರೆ 2–3 ನಿಮಿಷದಲ್ಲಿ ಮಾತನಾಡಿ ಮುಗಿಸಬೇಕೆಂದು ನಾನು ವಿನಂತಿ ಮಾಡುತ್ತೇನೆ.

+ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ):– ಮಾನ್ಯ ಸಭಾಧ್ಯಕ್ಷರೆ, ತಮ್ಮನ್ನು ಎಲ್ಲಾ ಸದಸ್ಯರು ಸೇರಿ ಸರ್ವಾನುಮತದಿಂದ ಸಭಾಧ್ಯಕ್ಷರಾಗಿ ಆಯ್ಕೆ ಮಾಡಿದ್ದಕ್ಕಾಗಿ ನನ್ನ ಕ್ಷೇತ್ರದ ಜನತೆಯ ಪರವಾಗಿ ಹಾಗೂ ನಮ್ಮ ಪಕ್ಷದ ಪರವಾಗಿ ತಮಗೆ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ವಿಧಾನಸಭೆ ನೆಲೆಸಿರುವಂಥ ಕ್ಷೇತ್ರ ಶಿವಾಜಿನಗರ ಕ್ಷೇತ್ರವಾಗಿದೆ. ಆ ಕ್ಷೇತ್ರದಿಂದ ಆರಿಸಿ ಬಂದಂಥ ಶಾಸಕ ನಾನಾಗಿದ್ದೇನೆ. ವಿಶೇಷವಾಗಿ ಮಾನ್ಯ ಮುಖ್ಯಮಂತ್ರಿಗಳಿಗೆ, ಮಾನ್ಯ ಯಡಿಯೂರಪ್ಪನವರಿಗೆ, ಮಾನ್ಯ ಉಪಮುಖ್ಯಮಂತ್ರಿಗಳಿಗೆ, ಮಾನ್ಯ ಹಿರಿಯ ನಾಯಕರಾದಂಥ ಸಿಂಧ್ಯಾರವರಿಗೆ ಮತ್ತು ಎಲ್ಲಾ ಹಿರಿಯ ನಾಯಕರಿಗೆ ಕೂಡ ನನ್ನ ಕ್ಷೇತ್ರದ ಜನತೆಯ ಪರವಾಗಿ 12ನೇ ವಿಧಾನಸಭೆಗೆ ಎಲ್ಲಾ ಸದಸ್ಯರಿಗೂ ಹೃತ್ಪೂರ್ವಕವಾಗಿ ಸ್ವಾಗತವನ್ನು ಬಯಸುತ್ತೇನೆ. ಕಾರಣ ಏನೆಂದರೆ ಈ ವಿಧಾನಸಭಾ ಕ್ಷೇತ್ರದಲ್ಲಿ ಹೈಕೋರ್ಟ್, ನಮ್ಮ ಸರ್ಕಾರಿ ಕಛೇರಿಗಳು, ನಮ್ಮ ಗವರ್ನರ್, ಚೀಫ್ ಮಿನಿಸ್ಟರ್, ಅತ್ಯಂತ ಹೆಚ್ಚಿಗೆ ಮಂತ್ರಿಗಳ ನಿವಾಸ ಇರುವಂಥ ಕ್ಷೇತ್ರ. ಅದಕ್ಕಾಗಿ ಎಲ್ಲಾ ಸದಸ್ಯರನ್ನು ಮತ್ತು ಇಲ್ಲಿ ಸೇರಿರುವಂಥ ನಮ್ಮ ಎಲ್ಲಾ ಪತ್ರಿಕಾ ಮಿತ್ರರನ್ನು, ಸಿಬ್ಬಂದಿ ವರ್ಗದವರಿಗೆ ನನ್ನ ಕ್ಷೇತ್ರದ ಪರವಾಗಿ ಅದರದ ಸ್ವಾಗತವನ್ನು ಬಯಸುತ್ತಿದ್ದೇನೆ. ಅದೇ ರೀತಿ ಅಲ್ಲಿರುವಂಥ ಅಧಿಕಾರಿ ವರ್ಗದವರನ್ನೂ ಕೂಡ ಸ್ವಾಗತಿಸುತ್ತೇನೆ. ಕಳೆದ ಬಾರಿ 100 ದಿವಸ ವಿಧಾನಸಭಾ ಅಧಿವೇಶನವನ್ನು ನಡೆಸುತ್ತೇವೆಂದು ಹೇಳಿದ್ದು ನಮ್ಮ ಮಾನ್ಯ ಮುಖ್ಯಮಂತ್ರಿಗಳಾದ ಧರ್ಮಸಿಂಗ್ ಸಾಹೇಬರಿಗೂ ಕೂಡ ಗೊತ್ತಿದೆ. ಆದರೆ 100 ದಿವಸ ನಡೆದಿಲ್ಲ. ಅದಕ್ಕಾಗಿ ಈ ಸಲವಾದರೂ ತಾವು ಸಭಾಧ್ಯಕ್ಷರಾಗಿದ್ದೀರಿ, ಎಲ್ಲಾ ಹಿರಿಯ ನಾಯಕರು ತಾವು ಅತ್ಯಂತ ಉತ್ತಮವಾದ ವ್ಯಕ್ತಿ ಎಂದು ತಮ್ಮ ಬಗ್ಗೆ ಹೇಳಿದ್ದಾರೆ, ತಾವಾದರೂ ಕೂಡ ಈ ಬಾರಿ 100 ದಿವಸ ವಿಧಾನಸಭೆ ನಡೆಯುವ ಹಾಗೆ

ಸರ್ಕಾರಕ್ಕೆ ತಾವು ಹೇಳಿ ಸದನವನ್ನು ನಡೆಸಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ. ಇನ್ನು ಬೆಂಗಳೂರು ಮಹಾನಗರದ ವಿಚಾರ ಬಂದಾಗ ತಾವು ಹೆಚ್ಚಿನ ಸಮಯವನ್ನು ಮಾತನಾಡಲಿಕ್ಕೆ ಅವಕಾಶ ಮಾಡಿಕೊಡಬೇಕು. ಬೆಂಗಳೂರು ಮಹಾನಗರದಲ್ಲಿ ಇವತ್ತು 60 ಲಕ್ಷ ಜನ ವಾಸ ಮಾಡುತ್ತಿದ್ದಾರೆ. ಈ ಬೆಂಗಳೂರು ವಿಚಾರ ಬಂದಾಗ ಇಲ್ಲಿರುವಂಥ ಶಾಸರುಗಳಾದ ನಾವು ಮಾತನಾಡುವಂಥ ಸಂದರ್ಭದಲ್ಲಿ ಹೆಚ್ಚಿನ ಅವಕಾಶವನ್ನು ತಾವು ಮಾಡಿಕೊಡಬೇಕೆಂದು ವಿನಂತಿಸಿ ಕೊಳ್ಳುತ್ತಾ, ಇವತ್ತು ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಮತ್ತು ಕೊಳಗೇರಿ ವಾಸಿಗಳು ಏನಿದ್ದಾರೆ ಅವರಿಗೆ ಆಗಿರುವಂಥ ಸಮಸ್ಯೆಗಳನ್ನು ಚರ್ಚೆಗೆ ತೆಗೆದುಕೊಂಡಾಗ, ಸಮಸ್ಯೆ ಏನಿದೆ ತಮಗೆಲ್ಲಾ ಗೊತ್ತಿದೆ, ಅದು ಆದ್ದರಿಂದ ಅಂಥ ಸಮಸ್ಯೆಗಳನ್ನು ಚರ್ಚೆಗೆ ಕೈಗೆತ್ತಿಕೊಂಡಾಗ ಅದಕ್ಕೆ ಹೆಚ್ಚಿನ ಸಮಯವನ್ನು ಕೊಡಬೇಕೆಂದು ವಿನಂತಿಸಿಕೊಳ್ಳುತ್ತಾ, ಈ ಅವಧಿಯಲ್ಲಿ ತಮಗೆ ಯಶಸ್ಸು ಸಿಗಲಿ ತಮಗೆ ಮತ್ತು ತಮ್ಮ ಕುಟುಂಬದವರಿಗೆ ಎಲ್ಲರಿಗೂ ಕೂಡ ಹೃತ್ಪೂರ್ವಕವಾದಂಥ ಅಭಿನಂದನೆಯನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

2.00 ಪಿಎಂ

+ಶ್ರೀ ನೆ.ಲ. ನರೇಂದ್ರಬಾಬು (ರಾಜಾಜಿನಗರ):- ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳೇ, ಉಪ ಮುಖ್ಯಮಂತ್ರಿಗಳೇ, ಪ್ರತಿ ಪಕ್ಷದ ನಾಯಕರೆ, ನನ್ನೊಡನೆ ಹನ್ನೆರಡನೇ ವಿಧಾನ ಸಭೆಗೆ ಆಯ್ಕೆಯಾಗಿರತಕ್ಕಂಥ ಎಲ್ಲಾ ಸದಸ್ಯರೆ, ಮಾಧ್ಯಮ ಮಿತ್ರರೆ, ಅಧಿಕಾರಿ ವರ್ಗದವರೆ, ಇದೊಂದು ನನ್ನ ಜೀವನದಲ್ಲಿ ಬಹಳ ದಿವಸಗಳ ಕನಸು ನನಸಾಗಿ ಇವತ್ತು ನಿಮ್ಮನ್ನು ಅಭಿನಂದಿಸತಕ್ಕ ಭಾಷಣದಲ್ಲಿ ಭಾಗವಹಿಸುವುದಕ್ಕೆ ಅವಕಾಶವನ್ನು ಕೊಟ್ಟ ತಮಗೆ ಧನ್ಯವಾದಗಳನ್ನು ನನ್ನ ಕ್ಷೇತ್ರದ ಜನತೆಯ ಪರವಾಗಿ ಪ್ರಥಮವಾಗಿ ಅರ್ಪಿಸಲಿಕ್ಕೆ ಬಯಸುತ್ತೇನೆ. ತಾವು ಏನು ಹನ್ನೆರಡನೆಯ ವಿಧಾನ ಸಭೆಯ ಅಧ್ಯಕ್ಷರಾಗಿ ಇವತ್ತು ಅವಿರೋಧವಾಗಿ ಆಯ್ಕೆಯಾಗಿದ್ದೀರಿ, ಇವತ್ತು ನಿಮ್ಮ ಬಗ್ಗೆ ಬಹಳಷ್ಟು ಜನ ಹಿರಿಯ ನಾಯಕರು, ಎಲ್ಲಾ ಪ್ರತಿಪಕ್ಷದ ನಾಯಕರುಗಳು ಮಾತನಾಡಿದ್ದಾರೆ. ನಾನು ನಿಮ್ಮನ್ನು ಸುಮಾರು ಎರಡು ದಶಕಗಳ ಕಾಲದಿಂದಲೂ ಬಹಳ ಹತ್ತಿರದಿಂದ ಬಲ್ಲೆನು, ನಿಮ್ಮೊಡನೆ ಒಡನಾಡಿಯಾಗಿ ಕಾರ್ಯಕರ್ತನಾಗಿ ಕೆಲಸ ಮಾಡಿರತಕ್ಕಂಥ ಅನುಭವ ನನಗೆ ಇದೆ. ನಿಮ್ಮನ್ನು ಹತ್ತಿರದಿಂದ ಬಲ್ಲವನಾದ ನನಗೆ, ನನ್ನಂಥ ಯುವಕನಿಗೆ ನಿಮ್ಮ ತಾಯಿ ಹೃದಯ, ನಿಷ್ಠೂರ ಸ್ವಭಾವವೂ ಸಹ ನನಗೆ ಗೊತ್ತಿದೆ. ಈ ಒಂದು ಸಂದರ್ಭದಲ್ಲಿ ಒಂದು ಮಾತಿದೆ. ತಾವು ಏನು ಪೂರ್ವಾಶ್ರಮದಲ್ಲಿ ಶಿಕ್ಷಕರಾಗಿ ಕೆಲಸ ಮಾಡಿದಿರಿ, ಆ ಶಿಕ್ಷಕ ವೃತ್ತಿಯಲ್ಲಿ ಪಡೆದಂಥ ಅನುಭವ ತದನಂತರ ರಾಜಕೀಯ ಕ್ಷೇತ್ರದಲ್ಲಿ ಹಲವು ಸ್ತರಗಳಲ್ಲಿ ಕೆಲಸ ಮಾಡಿರತಕ್ಕಂಥ ಅನುಭವ, ನಮ್ಮಂಥ ನೂತನ ಶಾಸಕರುಗಳಿಗೆ ಮಾರ್ಗದರ್ಶನ ಮಾಡತಕ್ಕಂಥ ನಿಟ್ಟಿನಲ್ಲಿ ತಾವು ಎಲ್ಲಾ ಮಾರ್ಗದರ್ಶನ ಕೊಡುತ್ತೀರಿ ಎನ್ನತಕ್ಕಂಥ ಕನಸನ್ನು ನಾನು ಹೊಂದಿದ್ದೇನೆ. "A teacher is always a good organiser and he is an architect." ಎಂದು ಹೇಳುತ್ತಾರೆ. ಹಾಗೆಯೇ ಸರ್ವಪಲ್ಲಿ ಡಾ: ರಾಧಾಕೃಷ್ಣನ್ ಅವರೂ ಕೂಡ ಒಂದು ದಾಖಲೆಯನ್ನು ಸ್ಥಾಪಿಸಿದರು. ತಾವೂ ಸಹ ಶಿಕ್ಷಕರಾಗಿ ಈ ಒಂದು ಸ್ಥಾನವನ್ನು ಮುಟ್ಟಿ ಇವತ್ತು ಈ ಒಂದು ದಾಖಲೆಯನ್ನು ಸ್ಥಾಪಿಸಿದಿರಿ. ಈ ಸಂದರ್ಭದಲ್ಲಿ ನನ್ನ ಹಾಗೆ ಸುಮಾರು ನೂರಕ್ಕೂ ಮೀರಿ ಈ ಹನ್ನೆರಡನೆಯ ವಿಧಾನ ಸಭೆಯ ಸದಸ್ಯರಾಗಿ ಆರಿಸಿ ಬಂದಿರತಕ್ಕಂಥ ನಿನ್ನೆ

ಮೊನ್ನೆ ಮಾತನಾಡಿಕೊಳ್ಳುತ್ತಿದ್ದೆವು. ಹೊಸದಾಗಿ ಆಯ್ಕೆಯಾಗಿ ಬಂದಿರತಕ್ಕಂಥ ಸದಸ್ಯರುಗಳಿಗೆ ಬಹುಶಃ ಹೆಚ್ಚಿನ ಅವಕಾಶವನ್ನು ಕಲ್ಪಿಸಿಕೊಡಲಿಕ್ಕೆ ಮುಂದೆ ಬರತಕ್ಕಂಥ ಸಭಾಧ್ಯಕ್ಷರನ್ನು ಮನವಿ ಮಾಡಿಕೊಳ್ಳಬೇಕೆಂದು ಮಾತನಾಡಿಕೊಳ್ಳುತ್ತಿದ್ದೆವು. ಏಕೆಂದರೆ, ನಾವು ಹಲವಾರು ಕನಸುಗಳನ್ನು ಹೊತ್ತಿದ್ದೇವೆ. ಆ ಕನಸುಗಳು ನನಸಾಗಬೇಕೆಂದರೆ, ಕರ್ನಾಟಕದ ಐದು ಕಾಲು ಕೋಟಿ ಜನತೆಯ ಧ್ವನಿಯನ್ನು, ಅಲ್ಲಿರತಕ್ಕಂಥ ರೈತರು ಇರಬಹುದು, ವಿದ್ಯಾರ್ಥಿಗಳಿರಬಹುದು, ಯುವ ಜನತೆಯಿರಬಹುದು, ನಿರುದ್ಯೋಗಿಗಳಿರಬಹುದ, ಸ್ತ್ರೀಯರು ಇರಬಹುದು, ಮಕ್ಕಳು ಇರಬಹುದು; ಈ ಸಮಸ್ಯೆಗಳ ಸಂಬಂಧಪಟ್ಟ ಹಾಗೆ, ಇಲ್ಲಿ ಆ ಧ್ವನಿ ಮೊಳಗಬೇಕಾದರೆ, ನಿಮ್ಮ ಸಹಕಾರ ಮಾರ್ಗದರ್ಶನ ಅತ್ಯಗತ್ಯ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ನಾನು ಈಗಾಗಲೇ ಪ್ರತಿಪಕ್ಷದ ಹಿರಿಯ ನಾಯಕರುಗಳು ಮಾತನಾಡುತ್ತಿರುವುದನ್ನು ಕೇಳುತ್ತಿದ್ದೆ. ಅವರೆಲ್ಲಾ ಮಾತನಾಡುವಾಗ ಹೇಳುತ್ತಿದ್ದರು. ಪಾಂಡವರು, ಕೌರವರು, ಹಲವಾರು ಉದಾಹರಣೆಗಳನ್ನು ಕೊಡುತ್ತಿದ್ದರು, ನನಗೆ ಯಾವಾಗಲೂ ನೆನಪಾಗುವುದು ಏನೆಂದರೆ ಚರ್ಚಿಲ್‌ರವರ ಮಾತು. ರಾಜಕಾರಣದಲ್ಲಿ ಅಥವಾ ಸಾರ್ವಜನಿಕ ಕ್ಷೇತ್ರದಲ್ಲಿ ಚರ್ಚಿಲ್‌ರವರು ಹೇಳಿದ ಹಾಗೆ, "There is no permanent enmity and there is no permanent friendship. If at all there is anything permanent, it is the interest of the State". ಎನ್ನತಕ್ಕಂಥ ಮಾತನ್ನು ಚರ್ಚಿಲ್‌ರವರು ಹೇಳುತ್ತಿದ್ದರು. ಹಾಗೆಯೇ ಇವತ್ತು ಈ ರಾಜ್ಯದಲ್ಲಿ 224 ಜನ ಶಾಸಕರನ್ನು ಆಯ್ಕೆ ಮಾಡಿ ಈ ಹನ್ನೆರಡನೆಯ ವಿಧಾನ ಸಭೆಗೆ ಕಳುಹಿಸಿದ್ದಾರೆ. ಈವತ್ತು ರಾಜ್ಯದ ಅಭ್ಯುದಯದತ್ತ ಕೊಂಡೊಯ್ಯುವ ದಿಕ್ಕಿನಲ್ಲಿ ನಾವೆಲ್ಲರೂ, ಪಾಂಡವತನ ಕೌರವತನ ಬಿಟ್ಟು ನಮ್ಮ ಒಂದು ಈ ರಾಜ್ಯದ ಶಾಶ್ವತವಾದ ಪ್ರಗತಿಯದತ್ತ ಕೊಂಡೊಯ್ಯುವ ದಿಕ್ಕಿನಲ್ಲಿ ನಾವು ಹೆಜ್ಜೆಯನ್ನು ಇಟ್ಟಿದ್ದೇ ಆದಲ್ಲಿ ಖಂಡಿತವಾಗಲೂ ಸದೃಢವಾದ ಒಂದು ಆಡಳಿತವನ್ನು ಕೊಡಲಿಕ್ಕೆ ಸಾಧ್ಯವಾಗುತ್ತದೆ ಮತ್ತು ಅಧಿಕಾರಿ ಕ್ಷೇತ್ರದಲ್ಲಿರತಕ್ಕಂಥ ಅಧಿಕಾರಿ ವರ್ಗಕ್ಕೆ ನಾವು ಒಂದು ಸೂಚನೆಯನ್ನು ಕೊಡಲಿಕ್ಕೆ ಸಾಧ್ಯವಾಗುತ್ತದೆ ಎನ್ನುವ ಮಾತನ್ನು ಈ ಒಂದು ಸಂದರ್ಭದಲ್ಲಿ ಹೇಳಬಯಸುತ್ತೇನೆ. ನಿನ್ನೆ ಮಾತನಾಡುವಾಗ ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳುತ್ತಿದ್ದರು, ಅವರು ನಮ್ಮ ಸದಸ್ಯರೊಬ್ಬರು ಕನ್ನಡ ಬಿಟ್ಟು ಬೇರೆ ಭಾಷೆ ಮಾತನಾಡುವಾಗ ನನಗೆ ಹೊಸ ಸದಸ್ಯನಾಗಿ, ಬಹುಶಃ ಬೆಂಗಳೂರು ಮಹಾ ನಗರ ಪಾಲಿಕೆಯಲ್ಲಿ ನಾನು ಸಭೆಯಲ್ಲಿ ಭಾಗವಹಿಸಿದ್ದರೂ ಸಹ ಇಲ್ಲಿ ಕುಳಿತುಕೊಂಡಾಗ ನನಗೆ ಎಲ್ಲೋ ಒಂದು ಕಡೆ ಬಹುಶಃ ಹೇಳಬೇಕೋ ಬೇಡವೋ ಎನ್ನತಕ್ಕಂಥ ಆತಂಕ ಅಳುಕು ಬರುತ್ತಿತ್ತು. ಏಕೆಂದರೆ, ಈ ನಾಡಿನ ಭಾಷೆ ಕನ್ನಡ ಭಾಷೆ, ಈ ನಾಡಿನ ಆಡಳಿತ ಭಾಷೆ ಕನ್ನಡ ಭಾಷೆ, ಭಾಷಾವಾರು ಪ್ರದೇಶ ವಿಂಗಡಣೆಯಾದ ಮೇಲೆ ಈ ನಾಡಿನಲ್ಲಿ ಆಯ್ಕೆಯಾದ ಸದಸ್ಯರು ಕನ್ನಡದಲ್ಲಿ ಮಾತನಾಡಲಿಕ್ಕೆ ನಾಚಿಕೊಳ್ಳುತ್ತಾರಲ್ಲಾ ಎನ್ನತಕ್ಕಂಥ ನೋವು ನನ್ನಲ್ಲಿ ಬರುತ್ತಿತ್ತು. ಏಕೆ ಈ ಮಾತು ಹೇಳುತ್ತೇನೆಂದರೆ, ಇದರ ಅವಶ್ಯಕತೆ ಇದೆ, ನಾವು ಈ ನಾಡಿನಲ್ಲಿ ಆಯ್ಕೆಯಾದ ಸದಸ್ಯರು ಕನ್ನಡದಲ್ಲಿ ಮಾತನಾಡುವುದಕ್ಕೆ ನಾಚಿಕೊಳ್ಳುವುದಾದರೆ, ಐಎಎಸ್ ಅಧಿಕಾರಿಗಳು ಕನ್ನಡ ಬಿಟ್ಟು ಬೇರೆ ಭಾಷೆಗಳಲ್ಲಿ ಬರೆಯುತ್ತಾರೆ ಎಂದು ಅದರ ಬಗ್ಗೆ ಟೀಕೆ ಮಾಡಲಿಕ್ಕೆ ನಮಗೆ ನೈತಿಕವಾದ ಸ್ಥೈರ್ಯ ಎಲ್ಲಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ವ್ಯಕ್ತ ಮಾಡಲಿಕ್ಕೆ ಬಯಸುತ್ತೇನೆ. ಇವತ್ತು ನಮ್ಮ ಮಾನ್ಯ

ಕಟ್ಟಾಸುಬ್ರಮಣ್ಯನಾಯ್ಡು ರವರು ಹೇಳಿದ ಹಾಗೆ ಈ ಬೆಂಗಳೂರು ನಗರ, ಬಹುಶಃ ಈ ರಾಜ್ಯದ ಒಟ್ಟು ಜನಸಂಖ್ಯೆ ಈ ಬೆಂಗಳೂರು ನಗರದಲ್ಲಿ ಇದೆ. ನಗರಕ್ಕೆ ಜನರು ವಲಸೆ ಬರುತ್ತಿದ್ದಾರೆ, ಇದರಿಂದಾಗಿ ನಗರಗಳು ಬೆಳೆಯುತ್ತಿವೆ, ಮೆಟ್ರೋಪಾಲಿನ್ ಸಿಟೀಸ್ ಈ ರಾಜ್ಯದಲ್ಲಿ ಏನು ಇವೆ, ಇವತ್ತು ನಗರೀಕರಣವಾಗುತ್ತಾ ಅದರ ಜೊತೆಗೆ ಸಮಸ್ಯೆಗಳು ಕೂಡ ಬೆಳೆಯುತ್ತಿವೆ. ಇವತ್ತು ಈ ನಗರದ ಸಮಸ್ಯೆಗ್ಳ ಬಗ್ಗೆ ಹೆಚ್ಚು ಒತ್ತು ಕೊಡದೇ ಹೋದರೆ, ಹಲವಾರು ರೀತಿಯಾದ ಈ ರಾಜ್ಯದಲ್ಲಿ ಬಹುಶಃ ಕ್ರೈಮ್ಸ್ ಇರಬಹುದು, ಅಥವಾ ಬೇರೆ ಬೇರೆ ಮಾದಕ ದ್ರವ್ಯಗಳಲ್ಲಿ ಯುವ ಪೀಳಿಗೆಗೆ ಬೇಕಾಗಿರತಕ್ಕಂಥ ಕೆಲಸಗಳು ಇರಬಹುದು, ಬೇಕಾಗಿರತಕ್ಕಂಥ ವ್ಯವಸ್ಥೆಗಳಿರಬಹುದು, ಇವುಗಳನ್ನು ರೂಪಿಸದಿದ್ದರೆ ಬಹಳ ಕಷ್ಟವಾಗುತ್ತದೆ. ನಿನ್ನೆ ನನಗೊಂದು ಆತಂಕ ಇತ್ತು, ಏನೆಂದರೆ, ನಾನು ಈ ಸಭೆಯಲ್ಲಿ ಮಾತನಾಡುವುದಕ್ಕೆ ಸಾಧ್ಯವಿದೆಯೋ ಇಲ್ಲವೋ ಎನ್ನುವ ಪ್ರಶ್ನೆಯನ್ನು ಕಾರ್ಯದರ್ಶಿಯವರನ್ನು ಕೇಳಿದೆ. ಏಕೆ ಈ ಮಾತು ಹೇಳುತ್ತೇನೆಂದರೆ, ರಾಜ್ಯದಲ್ಲಿ ಪ್ರಚಲಿತವಿರುವ ಸಮಸ್ಯೆಗಳು, ಪ್ರತಿನಿತ್ಯ ಒಬ್ಬ ಕ್ಷೇತ್ರದ ಶಾಸಕನಾಗಿ, ಒಬ್ಬ ಪ್ರತಿನಿಧಿಯಾಗಿ, ಪ್ರತಿನಿತ್ಯ ಶಾಲಾ ಕಾಲೇಜುಗಳ ಆಡ್ಮಿಷನ್‌ಗೆ ಬಂದಾಗ ಆಗುತ್ತಿರುವ ಶೋಷಣೆಗಳಿಗೆ ಧ್ವನಿ ಎತ್ತತಕ್ಕಂಥ ನೋವನ್ನು ನಿಮ್ಮ ಮುಂದೆ ವ್ಯಕ್ತಪಡಿಸಲಿಕ್ಕೆ ಈ ಸಭೆಯಲ್ಲಿ ಈ ವಿಷಯ ಚರ್ಚೆಯಾಗಬೇಕೆನ್ನುವ ಹೆಬ್ಬಯಕೆ ನನ್ನದಾಗಿದೆ. ಈ ಸಂದರ್ಭದಲ್ಲಿ ನಾನು ಹೊಸ ಸದಸ್ಯನಾಗಿ, ಯುವಕನಾಗಿ ನನ್ನ ಹೆಬ್ಬಯಕೆಯನ್ನು ವ್ಯಕ್ತಪಡಿಸಲಿಕ್ಕೆ ಬಯಸುತ್ತೇನೆ. ಹಲವಾರು ಸಮಸ್ಯೆಗಳನ್ನು ಧ್ವನಿಸಲಿಕ್ಕೆ ತಾವು ಅವಕಾಶವನ್ನು ಕಲ್ಪಿಸಿ ಕೊಡಬೇಕೆಂದು ಹೇಳುತ್ತಾ, ಒಟ್ಟಾರೆ ನಿಮ್ಮ ನೇತೃತ್ವದಲ್ಲಿ ಈ ವಿಧಾನ ಸಭೆ ಅತ್ಯಂತ ಉತ್ತಮ ರೀತಿಯಲ್ಲಿ ಸಾಗುತ್ತಿದೆ ಎನ್ನುವ ನಂಬಿಕೆಯನ್ನು ವ್ಯಕ್ತಪಡಿಸುತ್ತಾ ಈ ಒಂದು ಅವಕಾಶವನ್ನು ಕಲ್ಪಿಸಿಕೊಟ್ಟ ತಮಗೆ ನನ್ನ ಅಭಿನಂದನೆಗಳನ್ನು ಹೇಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ, ನಮಸ್ಕಾರ.

ಅಧ್ಯಕ್ಷರು:– ಈಗ ಕನ್ನಡ ನಾಡು ಪಕ್ಷದ ಮಾನ್ಯ ನರಸಿಂಹ ನಾಯಕರು, ಅಭಿನಂದನೆಗೆ ಸೀಮಿತವಾಗಿ ದಯಮಾಡಿ ಮಾತನಾಡಬೇಕು.

+ಶ್ರೀ ನರಸಿಂಹ ನಾಯಕ್ (ಸುರಪುರ):– ಮಾನ್ಯ ಅಧ್ಯಕ್ಷರೆ, ನೂತನವಾಗಿ ಆಯ್ಕೆಯಾದಂಥ ಸನ್ಮಾನ್ಯ ಸಭಾಧ್ಯಕ್ಷರಿಗೆ ಕನ್ನಡ ನಾಡು ಪಾರ್ಟಿಯ ಹಾಗೂ ಎಲ್ಲಾ ಕನ್ನಡಿಗರ ಪರವಾಗಿ ತಮಗೆ ಹೃದಯಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಮೊದಲ ಬಾರಿಗೆ ಆಯ್ಕೆಯಾಗಿ ಈ ಸದನದಲ್ಲಿ ಒಂದೆರಡು ನಿಮಿಷ ಮಾತನಾಡಲಿಕ್ಕೆ ಅವಕಾಶ ಸಿಕ್ಕಿರುವುದಕ್ಕೆ ಬಹಳ ಸಂತೋಷವಾಗುತ್ತದೆ. ಮತ್ತು ಒಂದು ತರಹ ಎಲ್ಲಾ ಹಿರಿಯ ರಾಜಾಕಾರಣಿಗಳ ಮಧ್ಯೆ ಕುಳಿತು ಈ ಕರ್ನಾಟಕದ ಎಲ್ಲಾ ಜನತೆಯ ಬಗ್ಗೆ ನಡೆಯುವ ಚರ್ಚೆಯನ್ನು ತಿಳಿದುಕೊಳ್ಳುವ ಆಸಕ್ತಿ ಬಹಳ ಇದೆ, ಮತ್ತು ಕರ್ನಾಟಕ ರಾಜ್ಯದಲ್ಲಿ ದೊಡ್ಡ ಪಕ್ಷಗಳೆರಡು ಸೇರಿ ಒಂದಾಗಿ ಏನು ಆಡಳಿತ ನಡೆಸುತ್ತಿವೆ, ಎರಡು ಬುದ್ಧಿ ಜೀವಿಗಳು ಸೇರಿ ಒಂದಾಗಿ ಇವತ್ತು ಆಡಳಿತ ನಡೆಸುತ್ತಿವೆ. ಆ ಎರಡು ಬುದ್ದಿ ಜೀವಿಗಳ ಜೊತೆಗೆ ಈ ಕರ್ನಾಟಕದ ಎಲ್ಲಾ ಜನತೆ ಬಡಜನರ ಏಳಿಗೆಗೋಸ್ಕರ ತಾವು ಎಲ್ಲರೂ ಒತ್ತು ಕೊಡಬೇಕು ಎಂದು ತಮ್ಮ ಹತ್ತಿರ ವಿನಂತಿಸುತ್ತಾ, ಇವತ್ತಿನ ದಿವಸ ರೈತರ ಬಗ್ಗೆ, ಹಿಂದುಳಿದಿರುವವರ ಬಗ್ಗೆ, ಅಲ್ಪಸಂಖ್ಯಾತರ ಬಗ್ಗೆ, ತಾವು ಹೆಚ್ಚು ಗಮನ ಕೊಡಬೇಕು. ಮಾನ್ಯ ಸಭಾಧ್ಯಕ್ಷರು ತಾವು ಶಿಕ್ಷಕರು ಆಗಿ ಕೆಲಸ ಮಾಡಿದಿರಿ ಎಂದು ತಿಳಿದು ಬಹಳ ಸಂತೋಷವಾಯಿತು. ನಾವು ಎಲ್ಲಾ ನಿಮ್ಮ

ವಿದ್ಯಾರ್ಥಿಗಳು, ಇದರಲ್ಲಿ ಕೆಲವರು ಒಂದನೇ ತರಗತಿಯಲ್ಲಿ ಇದ್ದೇವೆ, ಕೆಲವರು ಹತ್ತನೇ ತರಗತಿಯಲ್ಲಿ ಇದ್ದೇವೆ, ಆದರೆ ಎಲ್ಲರ ಉದ್ದೇಶ ಇಷ್ಟೇ, ನಮ್ಮ ತಂದೆ-ತಾಯಿಗಳಿಗೆ ಗೌರವ ತರುವ ರೀತಿಯಲ್ಲಿ ಈ ಶಾಲೆಯಲ್ಲಿ ಓದಬೇಕು, ನಮ್ಮ ತಂದೆ-ತಾಯಿಗಳೆಂದರೆ ನಮ್ಮನ್ನು ಮತ ಹಾಕಿ ಕಳುಹಿಸಿರುವಂಥ ನಮ್ಮ ಮತಬಾಂಧವರು ನಮ್ಮ ತಂದೆ-ತಾಯಿಗಳು. ಅವರಿಗೆ ಒಳ್ಳೆಯ ಹೆಸರನ್ನು ತರಬೇಕು ಎಂದು ನಾನು ಇವತ್ತು ಕೇಳುತ್ತಾ, ಮತ್ತು ಹೊಸದಾಗಿ ಆಯ್ಕೆಯಾದಂಥ ಸದಸ್ಯರಿಗೆ, ಮತ್ತು ಯುವಕರಿಗೆ ಹೆಚ್ಚಿನ ಒತ್ತು ಕೊಟ್ಟು, ಏಕೆಂದರೆ, ಈ ಸದನದಲ್ಲಿ ಬಹಳಷ್ಟು ಯುವಕರು ಇದ್ದಾರೆ, ಬಿಸಿ ರಕ್ತದ ಬಹಳ ಯುವಕರು ಇದ್ದಾರೆ, ಆ ಯುವಕರೆಲ್ಲರಿಗೂ ತಾವು ಮಾತನಾಡಲು ಅವಕಾಶ ಮಾಡಿಕೊಡಬೇಕು ಮತ್ತು ಏನಾದರೂ ತಪ್ಪಾದಲ್ಲಿ ಅದನ್ನು ತಿದ್ದಿ, ನಮಗೆ ಮುಂದೆ ಒಳ್ಳೆಯ ರಾಜಕಾರಣಿಯಾಗಲು ಅವಕಾಶ ಮಾಡಿಕೊಡಬೇಕು, ಮತ್ತು ಈ ದಿವಸ ಮಾತನಾಡಲು ಅವಕಾಶ ಮಾಡಿಕೊಟ್ಟ ತಮಗೆ ನಾನು ಹೃದಯ ಪೂರ್ವಕವಾಗಿ ವಂದಿಸುತ್ತಾ ನನ್ನ ಒಂದೆರಡು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು:- ಅನೇಕ ಮಾನ್ಯ ಸದಸ್ಯರುಗಳು ಮಾತನಾಡಲಿಕ್ಕೆ ಬಯಸಿದ್ದಾರೆ. ಆದರೆ ಸಾಕಷ್ಟು ವೇಳೆಯಾಗಿದೆ, ಮುಂದೆ ತಮ್ಮ ಕ್ಷೇತ್ರದ ಸಮಸ್ಯೆಗಳ ಬಗ್ಗೆ ಮಾತನಾಡಲಿಕ್ಕೆ ಅವಕಾಶ ಮಾಡಿಕೊಡುತ್ತೇನೆ ಎನ್ನುವ ಮಾತುಗಳನ್ನು ಹೇಳುತ್ತಾ ಇಲ್ಲಿಗೆ ಚರ್ಚೆಯನ್ನು ನಿಲ್ಲಿಸಿದ್ದೇನೆ.

ಶ್ರೀಮತಿ ಜೆ. ಸುನೀತಾ ವೀರಪ್ಪಗೌಡ (ಬನ್ನೂರು):- ಮಾನ್ಯ ಅಧ್ಯಕ್ಷರೆ, ಮಹಿಳಾ ಸದಸ್ಯರಿಗೆ ಅವಕಾಶ ಮಾಡಿಕೊಡಲಿಲ್ಲ, ಏಕೆಂದರೆ ನಾವು ಆರು ಜನ ಇದ್ದರೂ ನಮ್ಮನ್ನು ಈಗಾಗಲೇ ಹಿಂದಕ್ಕೆ ಹಾಕಿಬಿಟ್ಟಿದ್ದೀರಿ, ತಾತ್ಕಾಲಿಕ ಆಸನವೆಂದು ಹೇಳಿ ಆ ಕಡೆ ಮತ್ತು ಈ ಕಡೆ ಕೂಡ ಹಿಂದೆ ನಮ್ಮನ್ನು ಹಾಕಿದ್ದೀರಿ. ದಯಮಾಡಿ ಇದು ಆಗಬಾರದು.

ಅಧ್ಯಕ್ಷರು:- ಮಾನ್ಯ ಸದಸ್ಯರು ತಮ್ಮ ಹೆಸರನ್ನು ಕಳುಹಿಸಿರಲಿಲ್ಲ. ದಯಮಾಡಿ ತಾವು ಮಾತನಾಡಿ.

+ಶ್ರೀಮತಿ ಜೆ. ಸುನೀತಾ ವೀರಪ್ಪಗೌಡ (ಬನ್ನೂರು):- ಮಾನ್ಯ ಅಧ್ಯಕ್ಷರೆ, ನಮ್ಮ ಪಕ್ಕದ ಜಿಲ್ಲೆಯ ಕೆ.ಆರ್. ಪೇಟೆ ಕ್ಷೇತ್ರದಿಂದ ತಾವು ಆಯ್ಕೆಯಾಗಿ ಬಂದು ಇಲ್ಲಿ ಸಭಾಧ್ಯಕ್ಷರಾಗಿರತಕ್ಕಂಥದ್ದು ನನಗೆ ತುಂಬಾ ಸಂತೋಷ ಸಂಗತಿಯಾಗಿದೆ. ಏಕೆಂದರೆ ನಮ್ಮ ಪಕ್ಕದ ಜಿಲ್ಲೆಯರೊಬ್ಬರು ಒಂದು ಉನ್ನತ ಸ್ಥಾನವನ್ನು ಅಲಂಕರಿಸಿರುವುದು ನಮಗೆ ಸಂತೋಷವಾಗಿದೆ. ಇವತ್ತಿನ ದಿವಸ ನಮ್ಮ ಮಹಿಳಾ ಸಮಸ್ಯೆಗಳು ಬಹಳಷ್ಟಿವೆ. ಹಾಗೆಯೇ, ಇವತ್ತಿನ ದಿವಸ ಸಾವಿರಾರು ಸ್ತ್ರೀ ಶಕ್ತಿ ಸಂಘಗಳು ಪ್ರಾರಂಭವಾಗಿವೆ. ಇವರಿಗೆ ನೇರವಾಗಿ ಸಾಲಸೌಲಭ್ಯಗಳನ್ನು ಕೊಡುತ್ತೇವೆಂದು ಹೇಳಲಾಗಿತ್ತು. ಮತ್ತೆ ಇವರದೇ ಆದಂಥ ಕೋಟ್ಯಾಂತರ ರೂಪಾಯಿ ಬ್ಯಾಂಕಿನಲ್ಲಿದೆ. ಇವತ್ತಿನ ದಿವಸ ಮಹಿಳೆಯರ ಸಮಸ್ಯೆ ತುಂಬಾ ಇರುವುದರಿಂದ, ಇದನ್ನು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೂ ಕೂಡ ತರಬೇಕಾಗಿದೆ. ನಮಗೆ ಸಾಲ ಕೊಡುತ್ತೇವೆಂದು ಹೇಳಿ ಒಂದೊಂದು ಊರಿನಲ್ಲಿ 10 ರಿಂದ 12 ಮಹಿಳಾ ಸಂಘಗಳನ್ನು ಸೃಷ್ಟಿ ಮಾಡಿದ್ದರೂ ಕೂಡ ನಮಗೆ ನೇರವಾಗಿ ಸಾಲ ಕೊಡುತ್ತಿಲ್ಲವೆಂದು ನಾವು ಚುನಾವಣೆ ಸಮಯದಲ್ಲಿ ಹೋದಂಥ ಸಂದರ್ಭದಲ್ಲಿ ಅನೇಕ ಮಹಿಳೆಯರು ನಮ್ಮನ್ನು ಪ್ರಶ್ನೆ ಮಾಡಿದರು. ನಿಮಗೆ ನಿಜವಾಗಿಯೂ ಕೂಡ ಈ ಒಂದು ಅವಕಾಶವನ್ನು ಮಾಡಿ

ಕೊಡುತ್ತೇವೆಂದು ಹೇಳಿ ಈ ಒಂದು ಸ್ಥಾನಕ್ಕೆ ನಾವು ಬಂದಿದ್ದೇವೆ. ಆದ್ದರಿಂದ, ಮಹಿಳಾ ಸಂಘದವರಿಗೆ ನೇರವಾಗಿ ಸಾಲ ಕೊಡಿಸುತ್ತೇವೆಂದು ಮೊದಲು ಸರ್ಕಾರ ಏನೊಂದು ಆಶ್ವಾಸನೆಯನ್ನು ನೀಡಲಾಗಿತ್ತೋ ಅದನ್ನು ದಯಮಾಡಿ ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತೆ, ಈ ಒಂದು ಸದನದಲ್ಲಿ ಮಹಿಳೆಯರಿಗೆ ಹೆಚ್ಚಿನ ಒಂದು ಅವಕಾಶವನ್ನು ಮಾಡಿಕೊಡಬೇಕು. ಏಕೆಂದರೆ ನಾವೆಲ್ಲರೂ ಇವತ್ತು ಹೊಸದಾಗಿ ಇಲ್ಲಿಗೆ ಆಯ್ಕೆಯಾಗಿ ಬಂದಿದ್ದೇವೆ. ಆದರೆ, ಶ್ರೀಮತಿ ವಿಜಯಲಕ್ಷ್ಮಿ ಬಂಡಿಸಿದ್ದೆ ಗೌಡರವರು ಮೂರನೇ ಸಲ ಗೆದ್ದು ಇಲ್ಲಿಗೆ ಬಂದಿದ್ದಾರೆ. ಆದರೆ, ಉಳಿದವರೆಲ್ಲಾ ಹೊಸಬರಿದ್ದೇವೆ. ಮತ್ತೆ ನಮಗೆಲ್ಲಾ ತಾತ್ಕಾಲಿಕ ಆಸನವೆಂದು ಹಿಂದಿನ ಸಾಲಿನಲ್ಲಿ ಹಾಕಿದ್ದೀರಿ, ಮತ್ತೆ ಆ ಕಡೆಯೂ ಕೂಡ ಮಹಿಳೆಯರಿಗೆ ಹಿಂದಿನ ಸಾಲಿನಲ್ಲಿ ಹಾಕಿದ್ದೀರಿ. ಮತ್ತೆ ನಾವು ಮಾತನಾಡುವುದಕ್ಕೂ ಕೂಡ ಅವಕಾಶ ಇಲ್ಲ. ಈ ರೀತಿ ಮುಂದೆ ಆಗಬಾರದೆಂದು ಹೇಳುತ್ತಾ ನಾನು ತಮ್ಮನ್ನು ಅಭಿನಂದಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು:- ಚರ್ಚೆಯನ್ನು ಇಲ್ಲಿಗೆ ಮುಗಿಸುತ್ತೇನೆ. ಮಾನ್ಯ ಸದಸ್ಯರೆ, ತಾವು ಅಪಾರ ವಿಶ್ವಾಸದಿಂದ ನನ್ನನ್ನು ಸರ್ವಾನುಮತದಿಂದ ಈ ಶಾಸನ ಸಭೆಯ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದ್ದಕ್ಕಾಗಿ ಪ್ರಪ್ರಥಮವಾಗಿ ನನ್ನ ಅಭಾರಗಳನ್ನು ತಮಗೆ ತಿಳಿಸುತ್ತೇನೆ. ಈ ಸರ್ವಾನುಮತಕ್ಕೆ ಕಾರಣರಾದ ಮಾನ್ಯ ಮುಖ್ಯಮಂತ್ರಿಗಳಿಗೂ, ಮಾನ್ಯ ಉಪ ಮುಖ್ಯಮಂತ್ರಿಗಳಿಗೂ, ಮಾನ್ಯ ವಿರೋಧ ಪಕ್ಷದ ನಾಯಕರಿಗೂ ಉಳಿದ ಪಕ್ಷಗಳ ನಾಯಕರಿಗೂ ಮತ್ತು ಎಲ್ಲಾ ಗೌರವಾನ್ವಿತ ಸದಸ್ಯರಿಗೂ ನಾನು ಋಣಿಯಾಗಿದ್ದೇನೆ. ಸದನದ ಸಾರ್ವಭೌಮತ್ವವನ್ನು ಮತ್ತು ಘನತೆಯನ್ನು ಎತ್ತಿ ಹಿಡಿಯುವುದು ನಮ್ಮೆಲ್ಲರ ಪ್ರಥಮ ಕರ್ತವ್ಯ. ಆ ಕರ್ತವ್ಯದಲ್ಲಿ ನನ್ನಿಂದ ಚ್ಯುತಿ ಆಗದಂತೆ ನಡೆದುಕೊಳ್ಳುವ ಆಶ್ವಾಸನೆಯನ್ನು ತಮಗೆ ನೀಡಲು ಇಚ್ಛಿಸುತ್ತೇನೆ. ಸದನದ ಗೌರವ, ಘನತೆ ಮತ್ತು ಸತ್ ಸಂಪ್ರದಾಯಗಳನ್ನು ಕಾಪಾಡಿಕೊಂಡು ಹೋಗುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ.

ಸಂಸದೀಯ ಇತಿಹಾಸದಲ್ಲಿ ಘನತೆವೆತ್ತ ಮಹಾ ಧೀಮಂತ ನಾಯಕರುಗಳು ಅತ್ಯಂಥ ಮೇಧಾವಿಗಳಾದಂತಹ ಹಿಂದಿನ ಅಧ್ಯಕ್ಷರುಗಳಾದ ಮಾನ್ಯ ಕೆ.ಟಿ. ಭಾಷ್ಯಂ, ಶ್ರೀ ಟಿ. ಸುಬ್ರಮಣ್ಯಂ, ಶ್ರೀ ಸಿದ್ದಯ್ಯನವರು, ಶ್ರೀ ವೈಕುಂಠ ಬಾಳಿಗಾರವರು ಈ ಪೀಠವನ್ನು ಅಲಂಕರಿಸಿದ್ದಾರೆ. ಅವರುಗಳು ಹಾಕಿ ಕೊಟ್ಟಿರುವ ಸತ್ ಸಂಪ್ರದಾಯಗಳನ್ನು ನಾವು ಪಾಲಿಸಬೇಕಾಗಿರುತ್ತದೆ.

ಶಾಸಕಾಂಗದ ಸಾರ್ವಭೌಮತ್ವವನ್ನು ಎತ್ತಿ ಹಿಡಿಯುವುದು ನಮ್ಮೆಲ್ಲರ ಆದ್ಯ ಕರ್ತವ್ಯ. ಜನಸೇವೆಯೇ ಜನಾರ್ಧನನ ಸೇವೆ ಎಂಬ ನಾಣ್ನುಡಿಗೆ ಚ್ಯುತಿ ಬಾರದಂತೆ ನನ್ನ ಕರ್ತವ್ಯವನ್ನು ಮಾಡುತ್ತೇನೆಂದು ಹಾಗೂ ಎಲ್ಲಾ ಪಕ್ಷದ ಸದಸ್ಯರುಗಳಿಗೂ ಚರ್ಚೆಯಲ್ಲಿ ಭಾಗವಹಿಸಲು ಪಕ್ಷಪಾತವಿಲ್ಲದೆ ಸಮಾನಾಂತರವಾಗಿ ಅವಕಾಶವನ್ನು ಕೊಟ್ಟು ತನ್ಮೂಲಕ ಈ ರಾಜ್ಯದ ಹಾಗೂ ತಮ್ಮಗಳ ಮತ ಕ್ಷೇತ್ರದ ಜನತೆಯ ನಿಸ್ವಾರ್ಥ ಸೇವೆ ಮಾಡಲು ಈ ಸಭೆಯ ಎಲ್ಲಾ ಶಾಸಕರಿಗೂ ಅವಕಾಶ ನೀಡುವುದಾಗಿ ಆಶ್ವಾಸನೆ ನೀಡಬಯಸುತ್ತೇನೆ.

ಪ್ರಸ್ತುತ ಈ ವಿಧಾನಸಭೆಯಲ್ಲಿ ಈ ಪೀಠವನ್ನು ಅಲಂಕರಿಸಿದ್ದ ಹಿರಿಯರಾದ ಮಾನ್ಯ ಎಸ್.ಎಂ. ಕೃಷ್ಣರವರು, ಮಾನ್ಯ ಶ್ರೀ ರಮೇಶ್ ಕುಮಾರ್‌ರವರು ಹಾಗೂ ವಿಧಾನ ಪರಿಷತ್ತಿನ ಸಭಾಪತಿ ಯವರಾಗಿದ್ದ ಮಾನ್ಯ ಡಿ. ಮಂಜುನಾಥ್‌ರವರು ಸದಸ್ಯರಾಗಿದ್ದು, ಅವರುಗಳು ನನಗೆ ಹೆಚ್ಚಿನ ಮಾರ್ಗದರ್ಶನ ನೀಡುವರೆಂದು ಆಶಿಸುತ್ತೇನೆ.